# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟಂಬರ್-2020

## ಮಹಿಳಾ ವಿಶೇಷಾಂಕ




ಬಿಡಿ ಪ್ರತಿ: ರೂ.10.00

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 37
ಸಂಚಿಕೆ - 12
ಸೆಪ್ಟಂಬರ್ - 2020

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಹೀಗೊಂದು ಲಾಕ್‌ಡೌನ್ ಮದುವೆ | ನಂದಿನಿ ಕಾಪಡಿ | 4 |
| ಅಯ್ಯೋ... ಅಲ್ಲೂ | ವಾಣಿ ಸುರೇಶ್ | 6 |
| ದಾರಿ ಕಾಣದಾಗಿದೆ... | ಡಾ. ಶ್ಯಾಮಲಾ ರವಿಶಂಕರ್ | 9 |
| ಮಹಿಳೆ ಮತ್ತು ಗಣಕ ಯಂತ್ರ | ಸಹನಾ ಪ್ರಸಾದ್ | 11 |
| ನನ್ನ ಇಂಗ್ಲಿಷ್ ಕಲಿಕೆ | ಕುಮುದಾ ಪುರುಷೋತ್ತಮ್ | 13 |
| ತುಂತುರು | ದಂನಳ | 15 |
| ಶ್ರೀ ಟಿ.ವಿ. ಗುರೂಜಿ | ಸವಿತಾ ನಾಗೇಶ್ | 16 |
| ಸಿನಿಕರೊಡನೆ ಶುಭಸಂಜೆ! | ಜಯಶ್ರೀ ದೇಶಪಾಂಡೆ | 19 |
| ನಮ್ಮ ಮಾಮಿ... | ನುಗ್ಗೇಹಳ್ಳಿ ಪಂಕಜಾ | 23 |
| ರಂಗಣ್ಣನ ಮುರಿದ ಕಾಲೂ... | ಎಸ್.ವಿಜಯ ಗುರುರಾಜ | 26 |
| ಸುಬ್ಬಕ್ಕನ ಸಬ್ರೀನಾ | ಟಿ.ಎಸ್. ಶ್ರವಣಕುಮಾರಿ | 28 |
| ಅಶ್ವಿನಿಯೂ... ಹೊಸ ನೋಟುಗಳೂ | ವಸುಮತಿ ಉಡುಪ | 32 |
| ನಿಲ್ಲಿಸಿ..... ನಿಲ್ಲಿಸಿ... | ಧಾರಿಣಿ ಮಾಯಾ | 35 |
| ರಾಜಮ್ಮಳ ಕಿವಿಮಾತು | ಲತಾ ಹೆಗಡೆ | 38 |

ಮುಖಪುಟ ವ್ಯಂಗ್ಯಚಿತ್ರ ಕೃಪೆ : ವಾಟ್ಸಾಪ್ ಕೃಪೆ
ವ್ಯಂಗ್ಯಚಿತ್ರಗಳು : ರಘುಪತಿ ಶೃಂಗೇರಿ

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ನಮ್ಮೆಲ್ಲರ ಮಾತೆಯಾದ ಭಾರತಮಾತೆಗೆ
ಸ್ವಾತಂತ್ರ್ಯೋತ್ಸವದ ಹೃತ್ಪೂರ್ವಕ ನಮನಗಳು

***

ಕಾಡಿನ ಕನ್ಯೆ ಅಪರಂಜಿ ತನ್ನ ಬಳಗದ ಲೇಖಕಿಯರನ್ನೆಲ್ಲಾ ಈ ವಿಶೇಷಾಂಕಕ್ಕೆ ತುಂಬು ಹೃದಯದಿಂದ ಅಭಿನಂದಿಸುತ್ತಾಳೆ.

***

ಕುಗ್ಗಿದ ಹೀರೇಕಾಯಿ, ಸೊರಗಿದ ಸೋರೇಕಾಯಿ – ಪತ್ರಿಕೆ

ಆಹಾ! ಶೀರ್ಷಿಕೆ ಅಂದರೆ ಹೀಗಿರಬೇಕು.

***

ಭಾರತದ ಸೇನೆಗೆ ಸೇರಿದ ಯುವತಿಯರಿಗೆ ಅಪರಂಜಿಯ ಶುಭಾಶಯಗಳು.

***

ಎಂ.ಎಲ್.ಎ.ಗಳು ರೆಸಾರ್ಟಿಗೆ – ರಾಜಾಸ್ಥಾನ ಸುದ್ದಿ.

ಏನೇ ಬರಲಿ, ರೆಸಾರ್ಟುಗಳಿರಲಿ.

** *

ತ್ರಿಭಾಷಾ ಸೂತ್ರಕ್ಕೆ ತಮಿಳುನಾಡು ತಿರಸ್ಕಾರ – ಸುದ್ದಿ.

ಪಾರ್ಕಲಾಂ !!!

** *

ಕ್ರಿಕೆಟಿಗರಿಗೆ ನೂರು ಪುಟಗಳ ಮಾರ್ಗಸೂಚಿ
– *ಬಿಸಿಸಿಐ* ಸುದ್ದಿ.

ಗೂಗ್ಲಿ ಹಾಕಿದಂತಿದೆ.!!!

# "ನಮ್ಮ ನಿಮ್ಮಲ್ಲಿ"

♦ಶಿವಕುಮಾರ್

ಹಿಂದೊಮ್ಮೆ ಶ್ರೀಮತಿ ಅನುಪಮಾ ಹಾಗೂ ಶ್ರೀ ನಿರಂಜನ ನಮ್ಮ ಮನೆಗೆ ತಂದೆಯವರನ್ನು ನೋಡಲು ಬಂದಿದ್ದರು. ಅಂದು ರಜಾದಿನವಾಗಿದ್ದರಿಂದ ನಾನೂ ಅವರ ಹರಟೆಯಲ್ಲಿ ಭಾಗಿಯಾಗಿದ್ದೆ. ಆ ದಿನಗಳಲ್ಲಿ ಅನುಪಮಾ ಮಹಿಳಾ ಸಾಹಿತಿಗಳಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಮಾತುಕತೆಗಳ ನಡುವೆ ಅನುಪಮಾ ನಮ್ಮ ತಂದೆಯವರನ್ನು ಕುರಿತು, "ನೋಡಿ ಡಾಕ್ಟ್ರೆ, ಆ ದಿನ ಪತ್ರಿಕೆಯೋನು ನನ್ನ ಲೇಖನವನ್ನು ಪರಿಚಯಿಸುತ್ತಾ, ನಾಡಿನ ಖ್ಯಾತ ಮಹಿಳಾ ಸಾಹಿತಿ ಅಂತ ಬರೆದಿದ್ದಾನೆ. ನನಗೇನೋ ಇದು ಸರಿ ಅನ್ನಿಸೋದಿಲ್ಲ. ಅಲ್ಲಾ ಸಾಹಿತ್ಯದಲ್ಲಿ ಮಹಿಳೆ ಪುರುಷ ಅಂತ ಬೇಧ ಮಾಡೋದು ಎಷ್ಟು ಸರಿ? ನಾನು ಬರೆಯೋ ಸಾಹಿತ್ಯಕ್ಕೆ ಹ್ಯಾಂಡೀಕ್ಯಾಪ್ ಕೊಟ್ಟು ಅದರ ಗುಣಮಟ್ಟಾನ ನಿರ್ಧರಿಸಬೇಕೆ?" ಅಂತೆಲ್ಲಾ ದೂರಿದರು. ನಿರಂಜನ ಮಧ್ಯೆ ಬಾಯಿಹಾಕಿ, "ಸಾಹಿತ್ಯ ಸಮಾಜದ ಆಗುಹೋಗುಗಳ ಪಡಿನೆಳಲು. ಹೊರಗೆ ಓಡಾಡಿ ಜೀವನ ಸಂಗ್ರಾಮದಲ್ಲಿ ನುಜ್ಜುಗುಜ್ಜಾಗಿ ಅಪಾರ ಅನುಭವವನ್ನು ಪಡೆಯುವ ಅವಕಾಶ ಪುರುಷರಿಗೆ ಸಹಜವಾಗಿಯೇ ಹೆಚ್ಚಿರುತ್ತದೆ. ಈ ಅನುಭವಗಳು ಉತ್ತಮ ಸಾಹಿತ್ಯವನ್ನು ಸೃಷ್ಟಿಸಲು ಅತ್ಯಗತ್ಯ ಸರಕು. ಬಹುತೇಕ ಮಹಿಳೆಯರಿಗೆ ಆ ಅವಕಾಶ ಇಲ್ಲದಿರುವುದರಿಂದ ಅವರ ಸಾಹಿತ್ಯದ ಮೌಲ್ಯಮಾಪನ ಬೇರೆಯೇ ಆಗಿರುತ್ತದೆ" ಅಂತ ಹೇಳಿ ಅನುಪಮಾರವರನ್ನು ಮತ್ತಷ್ಟು ರೇಗಿಸಿದರು. ನಮ್ಮ ತಂದೆ ಏನು ಹೇಳುತ್ತಾರೆಂಬ ಕುತೂಹಲದಿಂದ ನಾನು ಅವರ ಪ್ರತಿಕ್ರಿಯೆಗಾಗಿ ಕಾದೆ.

"ಈ ಕಮ್ಯೂನಿಷ್ಟರಿಗೆ ಎಲ್ಲವೂ ಒಂದು ಸಂಗ್ರಾಮಾನೇ. ನಾವೇಕೆ ಬರೆಯುತ್ತೇವೆ? ಆಳ ಹೃದಯದಲ್ಲಿ ಏನೋ ಒಂದು ತುಡಿತ ನಮ್ಮನ್ನು ಬರವಣಿಗೆಯತ್ತ ನೂಕುತ್ತದೆ. ನಮ್ಮ ತೀವ್ರ ಭಾವನೆಗಳನ್ನು ಹೊರಹೊಮ್ಮಲು ಬರವಣಿಗೆ ಕೇವಲ ಒಂದು ಸಾಧನ. ಮಾನವನ ವಿಕಾಸದ ಹಾದಿಯನ್ನು ನೋಡಿದರೆ, ಕ್ರಿಯಾಶೀಲತೆ ಪುರುಷನ ಪ್ರಧಾನಗುಣವಾದರೆ, ಭಾವನಾತ್ಮಕತೆ ಮಹಿಳೆಯರ ಸಹಜ ಸ್ವರೂಪ. ಒಬ್ಬ ಉತ್ತಮ ಬರಹಗಾರ ಮತ್ತು ಬರಹಗಾರ್ತಿ ಸೃಷ್ಟಿಸುವ ಸಾಹಿತ್ಯವನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಸೇಬು ಮತ್ತು ಛತ್ರಿಗಳನ್ನು ಹೋಲಿಸಿದಂತೆ. ಒಂದರಲ್ಲಿ ಜೀವನದ ಮಾರ್ದವತೆ ಕಂಡುಬಂದರೆ ಇನ್ನೊಂದರಲ್ಲಿ ಅದೇ ಜೀವನದ ರೌದ್ರ ಕಠಿಣತೆ ಎದ್ದು ಕಾಣುತ್ತದೆ. ನಿನ್ನನ್ನು ಖ್ಯಾತ ಮಹಿಳಾ ಸಾಹಿತಿ ಎಂದವನು ನಿನ್ನನ್ನು ಒಂದು ಮೆಟ್ಟಲು ಮೇಲಕ್ಕೇರಿಸಿ ಹೇಳಿದ್ದಾನೆ. ಅವನ ಹೊಗಳಿಕೆಗೆ ನೀನು ಅರ್ಹಳು ಎಂದು ನಾನು ಹೇಳುತ್ತಿಲ್ಲ. ನೀನು ಕೇಳಿದ ಪ್ರಶ್ನೆಗೆ ಪ್ರಾಮಾಣಿಕವಾದ ಉತ್ತರ ಇದು ಅಷ್ಟೆ" ಎಂದು ಹೇಳಿದಾಗ ಅನುಪಮಾರವರ ಮುಖದಲ್ಲಿ ಮೂಡಿದ ಮಂದಹಾಸ ಇಂದಿಗೂ ನೆನಪಿನಲ್ಲಿದೆ.

ಈ ಸಂಚಿಕೆ ಲೇಖಕಿಯರಿಗೆ ಮೀಸಲು. ಹೊರಪುಟದ ವ್ಯಂಗ್ಯಚಿತ್ರದಿಂದ ಕೊನೆಯ ಪುಟದವರೆಗೂ ಜೀವಯಾತ್ರೆಯ ಮಾರ್ದವತೆಯನ್ನು ಈ ಲೇಖನಗಳಲ್ಲಿ ಕಾಣಬಹುದು. ಇಂತಹ ಮನಮೋಹಕ ಬೋನಾನ್ಜಾ ನೀಡಿರುವುದಕ್ಕೆ ಎಲ್ಲ ಬರಹಗಾರ್ತಿಯರನ್ನೂ ಅಪರಂಜಿ ಅಭಿನಂದಿಸುತ್ತಾಳೆ.

# ಹೀಗೊಂದು ಲಾಕ್ ಡೌನ್ ಮದುವೆಯ ವೈಖರಿ

**♦ನಂದಿನಿ ಕಾಪಡಿ**

ಲಾವಣ್ಯ ಈವೆಂಟ್ ಮ್ಯಾನೇಜ್ಮೆಂಟ್‌ನಲ್ಲಿ ಕೋರ್ಸ್ ಮಾಡಿದ್ದಳು. ಅವಳ ಡೈರಿ ವರ್ಷದ ಕೊನೆಯ ತನಕ ತುಂಬಿತ್ತಂತೆ. ಅಷ್ಟೊಂದು ಜನ ಕ್ಲೈಂಟ್‌ಗಳು ಹೇಳಿಕೊಂಡದ್ದೂ ಹೇಳಿಹೇಳಿಕೊಂಡದ್ದೇ ! "ಲಾವಿಸ್ ಡ್ರೀಂ ಇವೆಂಟ್ಸ್" ಎಂದು ಅವಳ ಕಂಪನಿಯ ಹೆಸರಂತೆ. ನಮ್ಮ ರಾಘು ಮಾಮನ ಮಗಳು ಪರಿ ತಾನು ಎರಡು ವರ್ಷಗಳ ಕಾಲ ಜತೆಯಲ್ಲೇ ವಾಸ ಮಾಡಿದ್ದ ಅರ್ನಬ್ ನೊಂದಿಗೆ ಮೇ ತಿಂಗಳಿನಲ್ಲಿ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಂಡು ತಮ್ಮ ಸಂಬಂಧಕ್ಕೆ ಒಂದು ಹೊಸ ಬುನಿಯಾದಿ ಹಾಕುವವಳಿದ್ದಳು. ರಾಘು ಮಾಮಿ ಮತ್ತು ಕಲ್ಯಾಣಿ ಮಾಮಿಗೆ ಸಂತೋಷ. ಒಬ್ಬಳೇ ಮಗಳ ಮದುವೆ ಅದ್ದೂರಿಯಾಗಿ ಮಾಡಬೇಕೆಂದು ಎಲ್ಲ ತಯಾರಿ ಮಾಡಿಕೊಂಡಿದ್ದಾಗಲೇ ಮಾರ್ಚ್‌ತಿಂಗಳಲ್ಲೇ ಲಾಕ್ ಡೌನ್ ಬರಬೇಕೇ?

ಲಾವಣ್ಯಳಿಗೆ ವಿಷಯ ತಿಳಿಯಿತು. ನನ್ನನು ಪೀಡಿಸಿ ರಾಘು ಮಾಮನ ಫೋನ್ ನಂಬ್ರ್ ತೆಗೆದುಕೆಂಡು ಅವರನ್ನು ಸಂಪರ್ಕ ಮಾಡಿಯೇ ಬಿಟ್ಟಳು. ಪರಿಗಂತೂ ಲಾವಣ್ಯ ದೇವತೆಗೆ ಕಡಿಮೆ ಇರದೇ ಎರಡೇ ದಿನಗಳ ಕಾಲದಲ್ಲಿ ಇಬ್ಬರಿಗೂ ಗಳಸ್ಯ ಕಂಠಸ್ಯ ಸ್ನೇಹವಾಯಿತು. ನನ್ನ ಕೆಲಸ ಮುಗಿದಿತ್ತು. ಲಾಕ್ ಡೌನ್ ನಿಯಮದ ಪ್ರಕಾರ ಮದುವೆಗೆ ಒಟ್ಟು ಹತ್ತು ಜನಗಳ ಪರವಾನಗಿ ಸಿಕ್ಕಿ ಸದ್ಯ ಮೊದಲು ನಿಶ್ಚಯಿಸಿದ್ದ ಮುಹೂರ್ತಕ್ಕೆ ಮುದುವೆಯಾಗುವುದು ಎಂದು ಮಾಮಿ ಖುಷಿ ಪಟ್ಟುಕೊಂಡರು. ಸೀರೆ ಒಡವೆ ಮೊದಲೇ ತೆಗೆದಾಗಿತ್ತು. ಬರೀ ಹತ್ತು ಜನರ ಊಟ. ಒಬ್ಬ ಪುರೋಹಿತ. ರಾಘು ಮಾಮ ಮನೆಯ ಪಡಸಾಲೆಯಲ್ಲೇ ಮದುವೆ ಶಾಸ್ತ್ರ ನಡೆಯುವುದಿತ್ತು. ಛತ್ರದ ಖರ್ಚು, ಸಾವಿರಾರು ಜನರ ಊಟದ ಖರ್ಚು, ಡೆಕೋರೇಶನ್, ಉಡುಗೊರೆ ಹೀಗೆ ಎಲ್ಲ ಖರ್ಚು ಉಳಿಯಿತು ಪರವಾಗಿಲ್ಲ ಎಂದು ನಾನು ಅಮ್ಮನೊಂದಿಗೆ ಫೋನಿನಲ್ಲಿ ಬಾಯಿ ಚಪಲ ತೀರಿಸಿಕೊಂಡೆ.

ಲಾವಣ್ಯ ಎಲ್ಲ ಹತ್ತಿರದ ಸಂಬಂಧಿಕರಿಗೆ ಫೋನ್ ಮಾಡಿ ಎಲ್ಲರನ್ನೂ ಮುಹೂರ್ತಕ್ಕೆ ಗೂಗಲ್ ಮೀಟ್ ಮೂಲಕ ಹಾಜರಾಗಿರಿ ಎಂದು ಬರಮಾಡಿದಳು. ಹೊಸ ತರಹದ ಉಪಸ್ಥಿತಿ ಒಂದು ತರಹ ಸಂತೋಷ ಕೊಟ್ಟಿತು. ಮಾಧವ ಭಟ್ಟರು ತುಂಬಾ ಸಂಕ್ಷಿಪ್ತವಾಗಿ ಒಂದು ಗಂಟೆಯೊಳಗೆ ಶಾಸ್ತ್ರ ಮುಗಿಸಿಕೊಟ್ಟರು. ಲಾವಣ್ಯಳ ಕಂಪನಿ ಹತ್ತು ಜನಗಳಿಗೆ ಊಟ ಸಿದ್ಧಪಡಿಸಿದ್ದರು. ಮಾರುಕಟ್ಟೆ ಮುಚ್ಚಿದ್ದ ಕಾರಣ ಬರೀ ಪುಳಿಯೋಗರೆ, ಮೊಸರನ್ನ ಮತ್ತು ಶಾವಿಗೆ ಪಾಯಸದ ಊಟವಾಯಿತು. ಮಗಳನ್ನು ಒಪ್ಪಿಸಿಕೊಟ್ಟು ರಾಘು ಮಾಮ, ಕಲ್ಯಾಣಿ ಮಾಮಿ ಕಣ್ಣೊರೆಸಿಕೊಂಡರು. ಈ ಸಮಾರಂಭಕ್ಕೆ ೨೦೦೦ ರೂಪಾಯಿ ಖರ್ಚಾಗಿರಬೇಕು ಎಂದು ನನ್ನ ಅಂದಾಜು. ಲಾವಣ್ಯ ಮದುವೆಯ ಖರ್ಚು ಒಂದು ಕೊಟ್ಟ ಬಿಲ್ಲು ನೋಡಿ ರಾಘು ಮಾಮಾರ ಗಂಟಲು ಒಣಗಿ ಹೋಯಿತು.

"ಪರಿ–ಅರ್ನಬ್ ಕನಸು ನನಸಾಗಿದ್ದು" ಎಂಬ ಶೀರ್ಷಿಕೆ ಲಾವಣ್ಯ ಒಂದು ವೆಬ್ ಸೈಟ್ ತೆಗೆದಿದ್ದಳು. ಪ್ರಖ್ಯಾತ ವೆಬ್ ಡಿಸೈನರ್ ಹತ್ತಿರ ಅದರ ರೂಪ ರೇಷೆಗಳು ತಯಾರಾಗಿದ್ದವು. ಈಗ ನೋಡಿ ಮದುವೆಯ ವೈಖರಿ. ಒಂದು ಸಿನಿಮಾ ತಯಾರಾಗಿತ್ತು. ಪರಿ ಮತ್ತು ಅರ್ನಬ್ ಅವರ ಪ್ರಣಯ ಕಥೆ ಮೊದಲ ಭಾಗ. ಪರಿ

ಮತ್ತು ಅರ್ನಬ್ ಅವರ ಗೆಳೆಯ ಗೆಳತಿಯರಿಂದ ಸಂಗೀತ–ನೃತ್ಯ ಮತ್ತು ಅವರಿಬ್ಬರ ಪ್ರಣಯದ ಬಗ್ಗೆ ರಸವತ್ತಾದ ಕಾಮೆಂಟರಿ ಬೇರೆ!

ಆಮೇಲೆ ಪರಿಯ ಗೋರಂಟಿ ಅಥವಾ ಮೆಹೆಂದಿ ಕಾರ್ಯಕ್ರಮ. ಪ್ರಖ್ಯಾತ ವಿಡಿಯೋ ಮಾಡಿದವರಿಂದ ಹಕ್ಕನ್ನು ತೆಗೆದುಕೊಂಡು ರಾಯಲ್ಟಿ ಕೊಟ್ಟು ಪರಿ ಮತ್ತು ಗೆಳತಿಯರ ಮುಖಗಳನ್ನು ಸೇರಿಸಿ ವಿಡಿಯೋ ತಯಾರಾಗಿತ್ತು. ಪ್ರಖ್ಯಾತ ನಟಿಯ ನೃತ್ಯ, ಗಾಯಕನ ಸಂಗೀತ ಕೂಡ ಸೇರಿಸಿಯಾಗಿತ್ತು. ಥೇಟ್ ಬಾಲಿವುಡ್ ಸಿನೆಮಾದಿಂದ ಎತ್ತಲಾಗಿದ್ದ ಬಾರಾತ್ ಕಾರ್ಯಕ್ರಮ. ಅರ್ನಬ್ ಬಿಳಿ ಕುದುರೆಯ ಮೇಲೆ ಬ್ಯಾಂಡ್ ಬಾಜಾದೊಂದಿಗೆ ಬಂದಿದ್ದ. ಮದುವೆ ಕಾರ್ಯಕ್ರಮ ಕೂಡ ಹಾಗೆಯೇ. ಥಳಕು ಬೆಳಕಿನ ರಿಸೆಪ್ಶನ್ ಕಾರ್ಯಕ್ರಮ. ಊಟದ ವೈಖರಿ ನೋಡಿ, ದೊಡ್ಡ ಲಾನ್ ಮೇಲೆ ಹಾಕಿದ್ದ ಅದು ಸ್ವರ್ಗ! ಆಮೇಲೆ ಬೀಡಾ ಕೌಂಟರ್. ಬಣ್ಣ ಬಣ್ಣ ಕಾರಂಜಿಗಳು! ಅಲ್ಲಲ್ಲೇ ಸುಂದರ ಮಾಂತ್ರಿಕ ಲೋಕದಂತೆ ದೃಶ್ಯಗಳು!

ಇಷ್ಟೆಲ್ಲಾ ಮಾಡಲು ಬಂದಿದ್ದ ಖರ್ಚು ಕೇವಲ ಮುವ್ವತ್ತು ಲಕ್ಷಗಳು ಮಾತ್ರ. ವೆಬ್ ಸೈಟ್ ಡೆವೆಲಪ್‌ಮೆಂಟ್ ಎಂದು ೫ ಲಕ್ಷ. ದೊಡ್ಡ ದೊಡ್ಡವರಿಗೆ ಕೊಟ್ಟಿದ್ದ ಫೀ ಮತ್ತು ರಾಯಲ್ಟಿ ಬರೀ ೧೨ ಲಕ್ಷ. ಲಾವಣ್ಯ ತನ್ನ ಫೀ ಕೇವಲ ೫ ಲಕ್ಷ ಹಾಕಿದ್ದಳು. ಮಿಕ್ಕ ಖರ್ಚುಗಳು ತರಹಾವರಿ "ಮುಂದೆ ಪರಿ ಮತ್ತು ಅರ್ನಬ್ ಅವರ ಮಕ್ಕಳಿಗೆ ತಮ್ಮ ಮದುವೆ ವಿಡಿಯೋ ತೋರಿಸಿ ಲಾಕ್ ಡೌನ್ ಮದುವೆ ಎಂದು ಹೇಗೆ ತಾನೇ ಹೇಳುವರು" ಎಂದು ಪೂರ್ಣ ಕಾರಣ ಕೂಡ ಕೊಟ್ಟಿದ್ದಳು. ಹಾ.... ಮರೆತೇ ಬಿಟ್ಟೆ ಜಿ.ಎಸ್.ಟಿ ಬೇರೆ ಹಾಕಿದ್ದಳು! ರಾಘು ಮಾಮ ತುಟಿ ಪಿಟಕ್ಕನ್ನದೆ ಚೆಕ್ಕು ಕೊಟ್ಟರು. ಪರಿ ಮತ್ತು ಅರ್ನಬ್ ತುಂಬಾ ಸಂತಸದಿಂದ ಲಾವಣ್ಯಳ ಬಗ್ಗೆ ಎಲ್ಲರಿಗೂ ಶಿಫಾರಸು ಮಾಡಿದರು.

ಹೀಗಾಯಿತು ನೋಡಿ ಪರಿಯ ನಿಜವಾದ ಲಾಕ್ ಡೌನ್ ಮದುವೆ ಮತ್ತು ವರ್ಚುಯಲ್ ಮದುವೆ!

■

---

## ಆಹ್ವಾನದಲ್ಲಿ ಮುದ

ಸಹಕಾರ ನಗರದ ಒಂದು ಸಂತೋಷಕೂಟಕ್ಕೆ ನನ್ನನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿದ್ದರು. ಅವರ ಸತ್ಯಸಂಧತೆಗೆ ನಾನು ಮಾರುಹೋದೆ. ಅವರು ಕರೆದ ರೀತಿ ಇದು.

–ಹಲೋ ಯಾರು ಭಾರ್ಗವಿ ನಾರಾಯಣ್ ಅವರ ಮನೇನಾ?

ಹೌದು.

–ಸ್ವಲ್ಪ ಅವರ ಕೈಲಿ ಮಾತಾಡ್ಬೇಕಿತ್ತು.

ಹೇಳಿ ನಾನೇ ಭಾರ್ಗವಿ ಮಾತಾಡ್ತಾ ಇರೋದು.

–ನಮಸ್ಕಾರ ಮೇಡಂ ನಾನು ಸಂಘದ ಅಧ್ಯಕ್ಷಿಣಿ, ನನ್ನ ಹೆಸರು ಶಾರದಾಮಣೀಂತ.

ನಮಸ್ಕಾರ ಹೇಳಿ.

–ನಾವು ಮುಂದಿನ ಶುಕ್ರವಾರ ವಾರ್ಷಿಕೋತ್ಸವ ಇಟ್ಟುಕೊಂಡಿದೀವಿ. ನೀವು ಮುಖ್ಯ ಅತಿಥಿಯಾಗಿ ಬರಬೇಕು. ಆಗೋದಿಲ್ಲಾಂತ ಮಾತ್ರ ಹೇಳಬೇಡಿ. ನಾವು ಐದಾರು ಜನರನ್ನು ಕೇಳಿದ್ದೆವೆ. ಜಯಂತಿ, ಅನುಪ್ರಭಾಕರ್, ವಿನಯಾಪ್ರಸಾದ್, ಹೀಗೆ ಅವರ್‍ಯಾರಿಗೂ ಬಿಡುವು ಇಲ್ಲವಂತೆ. ಕಡೆಗೆ ಲಕ್ಷ್ಮಿ ಚಂದ್ರಶೇಖರ್ ಅವರನ್ನು ಕಾಂಟಾಕ್ಟ್ ಮಾಡಿದಿವಿ. ಅವರಿಗೆ ಏನೋ ಕೆಲಸ ಇದೆಯಂತೆ ಅವತ್ತು. ಅವರು ಕೊಟ್ಟರು ನಿಮ್ಮ ನಂಬರ್ ಅದಕ್ಕೆ ನಿಮಗೆ ಫೋನ್ ಮಾಡ್ತಿದೀವಿ.

***(ಭಾರ್ಗವಿ ನಾರಾಯಣ್ ಅವರ 'ನಾನು ಭಾರ್ಗವಿ' ಗ್ರಂಥದಿಂದ )***

# ಅಯ್ಯೋ! ಅಲ್ಲೊ...!!

**♦ವಾಣಿ ಸುರೇಶ್**

**ಘಂಟೆ ಬೆಳಗ್ಗೆ ಒಂಭತ್ತೂವರೆ.**

ಕ್ಯಾಲಿಫೋರ್ನಿಯಾದಲ್ಲಿರೋ ಮಗನ ಮನೆಗೆ ಹೋಗಿದ್ದ ಕಮಲಮ್ಮ, ಅವತ್ತೂ, ಮಾಮೂಲಿನಂತೆ ಎಲೆಕ್ಟ್ರಾನಿಕ್ ರೈಸ್ ಕುಕ್ಕರಿನೊಳಗೆ ಅಕ್ಕಿ ತೊಳೆದು ಹಾಕಿ, ಅದರ ನೆತ್ತಿ ಮೇಲೆ ಕುಕ್ಕರಿನ ಗುರುತಿನಷ್ಟು ನೀರು ಸುರಿದು, ಇನ್ನು ಎರಡು ಘಂಟೆ ಬೇಯಿಸುವಂತೆ ಪ್ರೋಗ್ರಾಮ್ ಮಾಡಿದರು. ಆನ್ ಬಟನ್ ಒತ್ತೋದೇ ತಡ ಕುಕ್ಕರು 'ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್' – ಅಂತ ಮೂರು ವರ್ಷದ ಮಕ್ಕಳು ಮುದ್ದುಮುದ್ದಾಗಿ ಹೇಳೋಹಾಗೇ ಹಾಡೋದನ್ನ ಕೇಳಕ್ಕೆ ಅವ್ರಿಗೆ ವಿಪರೀತ ಇಷ್ಟ.

ಹಾಗೇ ಅವತ್ತೂ ಹಾಡೋದು ಕೇಳಕ್ಕೆ ಸಂಭ್ರಮದಿಂದ ಕಾದರು. ಮೈಸೂರಲ್ಲಿ ದಿನ ಬೆಳಗಾದ್ರೆ ಗ್ಯಾಸ್ಕೆಟ್ಟೋ, ಸೇಫ್ಟಿ ವಾಲ್ವೋ ಹೋಗೋ ಕುಕ್ಕರಿನ ಜೊತೆ ಹೋರಾಡಿ ಸಾಕಾಗಿದ್ದ ಅವರಿಗೆ ಇಲ್ಲಿ ಪ್ರೆಷರಿಳಿಯಕ್ಕೂ ಸಹಾ ಕಾಯಬೇಕಿಲ್ಲದೇ ಇಪ್ಪತ್ತು ನಿಮಿಷಗಳಲ್ಲಿ ಐದಾರು ಜನರಿಗಾಗೋವಷ್ಟು ಮಲ್ಲಿಗೆಹೂವಿನಂಥಾ ಅನ್ನ ಮಾಡಿಕೊಡೋ ರೈಸ್ ಕುಕ್ಕರ್‌ಉ, ಐದು ನಿಮಿಷಗಳಲ್ಲಿ ಸಾರಿನ ಬೇಳೆ ಬೇಯಿಸಿಕೊಡೋ ಇನ್ ಸ್ಟಂಟ್ ಪಾಟ್‌ಗಳು ಅವರ ಪಂಚಪ್ರಾಣಗಳಾಗಿ ಬಿಟ್ಟಿದ್ದವು! ಆದರೆ ಅವತ್ತು ಮಾತ್ರಾ ಕುಕ್ಕರಿನ ಕೋಗಿಲೆ – 'ಹೌ ಐ ವಂಡರ್ವಾಟ್' – ಅಂತಷ್ಟೇ ಹಾಡಿ, ಟಪಕ್ ಅಂತ ಹಾಡು ನಿಲ್ಲಿಸೇಬಿಡ್ತು!

ಎಷ್ಟೇ ಪ್ರಿಯವಾದರೂ ಅಲ್ಲಿಯ ಎಲೆಕ್ಟ್ರಾನಿಕ್ ಮತ್ತು ಎಲೆಕ್ಟ್ರಿಕಲ್ ಸಾಮಾನುಗಳನ್ನು ಕಂಡರೆ ಸಿಕ್ಕಾಪಟ್ಟೆ ಭಯ ಇರೋ ಕಮಲಮ್ಮಂಗೇ ಹೀಗಾಗ್ಬೇಕೇ ಪಾಪ! ಅವರಿಗಂತೂ ಟೂಟ್ವೆಂಟಿ ವೋಲ್ಟ್ ಶಾಕೇ ಹೊಡೆದ ಹಾಗಾಗೋಯ್ತು!

ಕೋವಿಡ್ ಲಾಕ್ ಡೌನ್ ಆದಾಗಿಂದ ಮನೆಯೋರಿಗೆಲ್ಲಾ ಈಗ ಬೆಳಗಾಗ್ತಿರೋದೇ ಒಂಭತ್ತಾದ್ಮೇಲೆ. ಬೆಳಗ್ಗೆ ಕಣ್ಣು ಬಿಟ್ಟ ತಕ್ಷಣ ತಿಂಡೀನೂ ತಿನ್ನದೇ, ಓಡಿಹೋಗಿ ತಂತಮ್ಮ ಕಂಪ್ಯೂಟರಿನ ಮುಂದೆ ಕೂತು ಮನೆಯಿಂದಲೇ ಕೆಲಸ ಮಾಡಕ್ಕೆ ಶುರುಮಾಡಿದರೆ, ಇನ್ನು ಹನ್ನೆರಡಕ್ಕೇ ಹಸಿದ ಹೆಬ್ಬುಲಿಗಳ ಹಾಗೆ ತಟ್ಟೆ ಹಿಡ್ಕೊಂಡು ಊಟಕ್ಕೆ ಬಂದುಬಿಡೋದು. ಇವತ್ತೀಗ ಹಾಗಾದರೆ ಏನ್ ಮಾಡೋದು ಅಂತ ಕಮಲಮ್ಮನಿಗೆ ದಿಗಿಲಾಯ್ತು. ಹಾಗೆ ಅಂದ್ಕೊಂಡಿನ್ನೂ ಒಂದು ಕ್ಷಣವೂ ಆಗಿಲ್ಲ, ಅವರವರ ಕಂಪ್ಯೂಟರಿನ ಮುಂದಿಂದ ಮಗ–ಸೊಸೆ–ಮೊಮ್ಮಕ್ಕಳು ಮತ್ತು ಯೂಟ್ಯೂಬ್ ಮುಂದಿಂದ ಕತ್ತು ಹಿಡಿದು ತಳ್ಳಿದರೂ ಎದ್ದೇಳದ ಅವರ ಗಂಡ ಕೃಷ್ಣಮೂರ್ತಿಗಳು, ಎಲ್ಲರೂ ಸೀದಾ ಅಡಿಗೆಮನೆಗೆ ಒಟ್ಟಿಗೇ ಧಾಳಿ ಇಡೋದೇ? ಇನ್ನೇನು ಗತಿ, ಒಂದು ಅನ್ನವಾದರೂ ಆಗಿದ್ದಿದ್ದರೆ ಮಕ್ಕಳಿಗೆ ಉಪ್ಪು ತುಪ್ಪ ಅನ್ನ ಕಲಸಿಕೊಟ್ಟು, ದೊಡ್ಡೋರಿಗೆ ಚಟ್ನಿಪುಡಿ ಅನ್ನಾನಾದರೂ ತಿನ್ನೀ ಅಂತ ಹೇಳಿ ತಟಾಯಿಸ್ಕೋಬಹುದಾಗಿತ್ತು, ಹೇಗಿದ್ರೂ ನಿನ್ನೇ ರಾತ್ರಿ ತಾನೇ



ಹೆಪ್ಪಾಕಿದ್ದ ಮೊಸರಂತೂ ಥಂಡಿಯಾಗಿದೆ ಅಂತೆಲ್ಲಾ ಒದ್ದಾಟ ಆಕೆಗೆ. ಬರೀ ಅಡಿಗೆ ತಡವಾಗಿದ್ದಿದ್ದರೂ ಪರ್ವಾಗಿರ್ಲಿಲ್ಲ, ಆದರೆ ಹಾಗೆ ಕುಕ್ಕರ್ರೇ ಏಕ್ದಂ ಕೆಟ್ಟುಹೋಗಿದ್ದು ಅವರ ಅಂದಿನ ಗಾಬರಿಗೆ ಕಾರಣವಾಗಿತ್ತು. ಆದರೆ ಮಾಡೋದೇನು? ಸತ್ಯ ಹರಿಶ್ಚಂದ್ರನ ಅರಮನೆ ಪಾಕಶಾಲೇಲಿ ತಮ್ಮ ವಂಶಿಕರು ದಿನಾ ಕೊತ್ತಂಬರಿ ಸೊಪ್ಪು ಹೆಚ್ಚಿಕೊಡೋ ಕೆಲಸ ಮಾಡೋರಂತೆ ಗೊತ್ತಾ ಅಂತ ಅವರು ಅವರು ಜಂಭ ಕೊಚ್ಚಿಕೊಳ್ತಿದ್ದಕ್ಕೆ ಸರಿಯಾಗಿ, ಸೀದಾ ಮಗನ ಹತ್ತಿರ ಹೋಗಿ – "ನಾನು ಸರಿಯಾಗೇ ಕುಕ್ಕರ್ ಸೆಟ್ ಮಾಡಿದ್ರೂ ಹೀಗಾಗಿಬಿಟ್ಟಿತು ಕಣೋ ಮರೀ. ಪ್ಲಗ್ಗನ್ನ ತೆಗೆದೂ ಹಾಕೀ ಮಾಡಿದರೂ ಆನ್ ಆಗ್ತಿಲ್ಲ' – ಅಂತ ಅಲವತ್ತುಕೊಂಡರು. ಆಗ ಗೊತ್ತಾಯ್ತು ಅವರೆಲ್ಲಾ ಧಾವಿಸಿ ಬಂದಿದ್ದು ಊಟಕ್ಕಲ್ಲ, ಮೈಸೂರಲ್ಲಿ ಸರ್ವೇ ಸಾಧಾರಣವಾಗಿ ಎರಡು ಹನಿ ಮಳೆ ಬಂದರೂ ಕರೆಂಟ್ ಹೋಗೋ ಹಾಗೆ ಅಲ್ಲೂ ಕರೆಂಟ್ ಹೋಗಿತ್ತೂಂತ!

ಮುಂದೆ ನಡೆದಿದ್ದೆಲ್ಲಾ ಇತಿಹಾಸ. ಕುಕ್ಕರಿನ ಕೋಗಿಲೆಗೆ ಗಂಟಲು ಕಟ್ಟಿಕೊಂಡಿದ್ದರಲ್ಲಿ ತನ್ನ ತಪ್ಪೇನೂ ಇಲ್ಲಾಂತ ಕಮಲಮ್ಮನಿಗೆ ನಿರಾಳ ಆಯ್ತು. ಆದರೆ ಯಃಕಶ್ಚಿತ್ ಕರೆಂಟ್ ಹೋಗಿದ್ದಕ್ಕೇ, ತೀರಾ, ಕೂರೆಗೆ ಹೆದರಿ ಸೀರೆ ಬಿಚ್ಚಿದೋರ ತರ – ಎಲ್ಲರೂ ಗಾಬರಿಪಡ್ತಿರೋದು ನೋಡಿ ಅವರಿಗೆ ಒಳಗೊಳಗೇ ನಗು, ಪುಕ್ಸಟ್ಟೆ ಎಂಟರ್ಟೈನ್ಮೆಂಟು! ಸದ್ಯ, ಈ ಹಾಳು ಕೋವಿಡ್ ರಗಳೇಲಿ ನಗೋದು ಮರ್ತುಹೋಗಿಲ್ಲವಲ್ಲ ಅಂತಾನೇ ಖುಷಿಯಾಯ್ತು ಆಕೆಗೆ. ಆಗಿದ್ದಿದ್ದಿಷ್ಟೇ, ಇಪ್ಪತ್ತು ವರ್ಷ ಆ ದೇಶದ ಮಣ್ಣು ಹೊತ್ತಿರೋದ್ರಿಂದ ತವರೂರಿನ ಕೇ ಇ ಬಿ ಉಪದ್ವ್ಯಾಪಗಳೆಲ್ಲಾ ಅವರ ಮಗ–ಸೊಸೇಗೆ ಮರೆತುಹೋಗಿ ಆಕಾಶವೇ ತಲೇ ಮೇಲೆ ಬಿದ್ದುಹೋದ ಹಾಗಾಗಿತ್ತು..

ಅವರಿಬ್ಬರಿರಲಿ, ಹುಟ್ಟಿದಾರಭ್ಯ ಕರೆಂಟು ಹೋದರೆ ಹೇಗಿರಬಹುದೂನ್ತ ಗೊತ್ತೇ ಇಲ್ಲದ ಎಂಟು ವರ್ಷದ ಮೊಮ್ಮಗಳು – 'ವೈಫೈ ಇಲ್ದೇ ಈಗೇನ್ ಮಾಡ್ಲಿ ಮಾಮ್? ನಾಳೇನೇ ನನ್ನ ಆರ್.ಎಸ್.ಎಂ. (ರಷ್ಯನ್ ಮ್ಯಾತ್ಸ್) ಕ್ಲಾಸಿನ ಲಾಸ್ಟ್ ವೀಕ್ದೂ–ಈ ವೀಕ್ದೂ, ಅಸ್ಸೈನ್‌ಮೆಂಟನ್ನ ಸಬ್ಮಿಟ್ ಮಾಡಬೇಕಿತ್ತು' – ಅಂತ ಗೋಳುಗುಟ್ಟಿತು. 'ಅಮೆರಿಕಾದಲ್ಲೆಂಥಾ ರಷ್ಯನ್ ಮ್ಯಾತ್ಸು? ಮಗು ಇನ್ನೂ ಹುಟ್ಲಿಲ್ಲ ಬೆಳೀಲಿಲ್ಲ' – ಅಂತ ಮಗ–ಸೊಸೆ ಹತ್ತಿರ ಚಚ್ಚಿಕೊಳ್ಳೋ ಕಮಲಮ್ಮನಿಗಂತೂ ಇದ್ದಿದ್ದೂ ಸಂಕಟ ಆಗಿಹೋಯ್ತು.

**ಘಂಟೆ ಮಧ್ಯಾಹ್ನ ಹನ್ನೆರಡು.**

ರಾಮನವಮಿ, ಗೋಕುಲಾಷ್ಟಮಿ ಎರಡನ್ನೂ ಸೇರಿಸಿ ಮೆಣಸಿನಕಾಯಿ ಒಗ್ಗರಣೆಯಿಲ್ಲದಿದ್ದರೂ ಉಪ್ಪು, ನಿಂಬೆ ಹಣ್ಣು, ಕೊತ್ತಂಬರಿ ಸೊಪ್ಪಷ್ಟರಿಂದ್ಲೇ ಹದವಾದ ಕೋಸಂಬರಿ, ಮೊಸರವಲಕ್ಕಿ ಕಲಸಿ, ಸೌತೆಕಾಯಿ–ಟೊಮ್ಯಾಟೋ ರಾಯಿತ ಮಾಡಿ, ಜೊತೆಗೆ ಒಂದಿಷ್ಟು ಕೋಡ್ಬಳೆ, ಚಕ್ಲಿ ರವೇಉಂಡೆ ಟೇಬಲ್ ಮೇಲೆ ಇಟ್ಟರು ಕಮಲಮ್ಮ. ಅತ್ಯುಗ್ರವಾಗಿ ಡಯಟ್ ಮಾಡೋ ನೀಮಾ, ಅಷ್ಟೊತ್ತಿಗೆ ಚೇಷ್ಟೆ ಶುರು ಮಾಡ್ಕೊಂಡಿದ್ದ ಮಕ್ಕಳ ಕೈಲಿ ಪ್ಲಾಸ್ಟಿಕ್ ಚಾಕು ಕೊಟ್ಟು ಮೂರು ಜನಾನೂ ತರಕಾರಿ ಹೆಚ್ಚಿದ್ದರಲ್ಲಿ ಬಣ್ಣಬಣ್ಣದ ಸ್ಯಾಲಡ್ ಮಾಡಿದಳು. ಮಗ ತಾನು ಡೆಸರ್ಟ್ ಮಾಡ್ತೇನೀಂತ ಹೇಳಿ ಬಾಳೆಹಣ್ಣಿಗೆ ಹಾಲು ಸಕ್ಕರೆ ಹಾಕಿ ಗೊಟಾಯಿಸಿ ಇಟ್ಟ.

ಮೊಸರವಲಕ್ಕಿ ಹತ್ತಿದ್ದ ಕೈಬೆರಳು ಚೀಪ್ತಾ, ಸ್ಟೋವಿಲ್ಲದೇದ್ದಾಗ್ಲೂ ರುಚಿಯಾದ ಅಡಿಗೆ ಮಾಡಿದ ತಾಯಿಯ ಜಾಣ್ಮೆಯನ್ನ ಮನಸಾರೆ ಹೊಗಳಿ ಅಟ್ಟಕ್ಕೇರಿಸಿದ್ದಕ್ಕೆ ಇನ್ನೊಂದ್ಸಲ ದುರುಗುಟ್ಟಿಸಿಕೊಂಡ ಸುನಿಲ್. ಟೀವಿ ಇಲ್ಲದೇ ಊಟ ಮಾಡಕ್ಕೆ ಗಲಾಟೆ ಮಾಡಿದ ಮಕ್ಕಳಿಗೆ ಕಮಲಮ್ಮ ರವೇ ಉಂಡೆ, ಚಕ್ಕುಲಿಯ ಆಮಿಷ

ತೋರಿಸಿ, ನೆಲ್ಲೀಕಾಯಿ ಉಪ್ಪಿನಕಾಯಿಯ ಜೊತೆ ಮೊಸರವಲಕ್ಕಿಯ ಕೈತುತ್ತು ಹಾಕಿದರು. ಕೋಸಂಬರಿ, ರಾಯತಾನೂ ಮಕ್ಕಳು ಚಪ್ಪರಿಸಿಕೊಂಡು ತಿಂದವು. ಪುಣ್ಯಕ್ಕೆ ಇದ್ಯಾವುದರ ಪರಿವೆಯೂ ಇಲ್ಲದೇ ಮಾಮೂಲಿನ ಹಾಗೆ ನಲ್ಲೀಲಿ ನೀರಂತೂ ಧಾರಾಕಾರವಾಗಿ ಬರ್ತಿತ್ತು!

**ಘಂಟೆ ಸಂಜೆ ಐದು.**

ಬಾತ್ರೂಮಿಗೆ ಹೋದ ಚಿಕ್ಕದು ಕಿಟಾರಂತ ಕಿರಿಚ್ಕೊಂಡು ಅತ್ಕೊಂಡು ಆಚೆ ಬಂತು. ಯಾರಾದರೂ ಬಾತ್ರೂಮಿನೊಳಗೆ ಹೆಜ್ಜೆಯಿಟ್ಟ ತಕ್ಷಣವೇ ಆಟೋಮ್ಯಾಟಿಕ್ ಆಗಿ ಮುಚ್ಚಳ ತೆರೆದುಕೊಳ್ಳುವ ಕಮೋಡು, ಕರೆಂಟಿಲ್ಲದೇದ್ರಿಂದ ತನ್ನಷ್ಟಕ್ಕೆ ತಾನೇ ಮುಚ್ಚಳ ತೆಕ್ಕೊಂಡಿಲ್ಲದೇ ಇದ್ದದ್ದು ಮಗೂ ಗಾಬರಿಗೆ ಕಾರಣವಾಗಿತ್ತು! ಅದರಪ್ಪ ಹೋಗಿ ಮುಚ್ಚಳಾನ ಕೈಯಿಂದಲೂ ತೆಗೀಬಹುದು ಅಂತ ತೋರಿಸಿಕೊಟ್ಟಮೇಲೆ ಮನೆಯಲ್ಲಿ ಶಾಂತಿ ನೆಲೆಸಿತು. ಸಂಜೆ ಟೀವಿಯಿಲ್ಲದಿದ್ದರಿಂದ ಹಾಲು ಕುಡಿಯಕ್ಕೆ ಇನ್ನೊಂದ್ಸಲ ರಗಳೆ. 'ಅತ್ಲಾಗಿ ನಿನ್ನ ಫೋನ್ ಮೇಲೇ ಏನಾದ್ರೂ ಕಾರ್ಟೂನ್ ಹಾಕಬಾರ್ದೇನೋಂತ' – ಕಮಲಮ್ಮ ಅವರ ಜ್ಞಾನ ಪ್ರದರ್ಶಿಸಕ್ಕೆ ಹೋದರು. ವೆಬಿನಾರನ್ನ ಫೋನ್ ಮೇಲೇ ಮಾಡಿದ್ದರಿಂದ ಕಾಲು ಘಂಟೆ ಕಳೆಯೋಷ್ಟರಲ್ಲಿ ಮಗನ ಫೋನ್ ಬ್ಯಾಟರಿ ಡೆಡ್ ಆಗಿದ್ದು ಅವರಿಗೇನು ಗೊತ್ತು ಪಾಪ! ಅಷ್ಟರಲ್ಲಿ, ಮರೆತಿದ್ದ ಇನ್ನೊಂದು ಗಂಡಾಂತರ ವಕ್ಕರಿಸಿತು. ಅಂದರೆ ಫ್ರಿಜ್ಜಲ್ಲಿದ್ದ ನಾಲ್ಕು ಗ್ಯಾಲನ್ ಹಾಲಿನ ಕ್ಯಾನ್ಗಳು, ಜ್ಯಾಮು– ಚೀಸುಗಳು, ನಮ್ಮೋರಿಗಂತೂ ಇಲ್ಲಿರುವಾಗ ಅತೀ ಮುಖ್ಯವಾಗಿ ಬೇಕಾದ ಉಪ್ಪಿನಕಾಯಿ–ತೊಕ್ಕುಗಳು, ಫ್ರೀಝರ್‌ನಲ್ಲಿದ್ದ ಐಸ್ ಕ್ರೀಮು, ಫ್ರೋಝನ್ ತರಕಾರಿಗಳೆಲ್ಲಾ ನೀರಾಡಿ ಕೆಟ್ಟು ಹೋಗುವುದರ ಭಯ.. ಸರಿ, ಮರೆತಿದ್ದಕ್ಕೆ ತನ್ನನ್ನೇ ಬೈಕೊಳ್ತಾ ಸುನಿಲ್ ತಕ್ಷಣ ಗರಾಜಿಗೆ ಓಡಿಹೋಗಿ ಉಪಯೋಗಿಸದೇ ಇಟ್ಟಿದ್ದ ಮಣಭಾರದ ಡೈನಮೋ ಹೊತ್ತುಕೊಂಡು ಬಂದು ಬ್ಯಾಕ್ ಯಾರ್ಡ್‌ಲ್ಲಿಟ್ಟು ಆನ್ ಮಾಡಿ, ಫ್ರಿಜ್ಜಿಗೆ ಕನೆಕ್ಟ್ ಮಾಡಿ ಅವನ ಫೋನನ್ನೂ ಅದರಲ್ಲೇ ಚಾರ್ಜ್ ಮಾಡಕ್ಕಿಟ್ಟ. ಸದ್ಯ ಗೊಟಕ್ ಅಂದಿದ್ದ ಫ್ರಿಜ್ಜಿಗೆ ಜೀವ ಬಂತು!

**ಘಂಟೆ ರಾತ್ರಿ ಎಂಟು.**

ಆಗಷ್ಟೇ ಕತ್ತಲಾಗ್ತಿದ್ದಿದ್ರಿಂದ ಪೂರಾ ಕಾಣಿಸದೇ ಇರಕ್ಕೆ ಮುಂಚೆಯೇ ಎಲ್ಲಾ ಬಾತ್ ರೂಮ್ ಕನ್ನಡಿಗಳ ಮುಂದೆ ರೂಮ್ ಫ್ರೆಷನರಿನ ತರ ಇಟ್ಟಿದ್ದ ದೊಡ್ಡ ದೊಡ್ಡ ಪರ್ಫ್ಯೂಮ್ಡ್ ಕ್ಯಾಂಡಲ್ಗಳನ್ನೂ ಆಚೆ ತಂದು ಡೈನಿಂಗ್ ಟೇಬಲ್ ಮೇಲೆ ಜೋಡಿಸಿದ ಸುನಿಲ್. ನೀಮಾ ಮಕ್ಕಳ ಗಲಾಟೆ ತಡಿಯಲಾರದೇ ಇಪ್ಪತ್ತು ಮೈಲಿ ದೂರದಲ್ಲಿದ್ದ ತಂಗಿ ಮನೇಲಿ ಕರೆಂಟು ಇರೋದನ್ನ ತಿಳ್ಕೊಂಡು, ಕೇವಲ ಹತ್ತು ಪರ್ಸೆಂಟ್ ಬ್ಯಾಟರಿ ಇದ್ದ ತನ್ನ ಫೋನನ್ನೂ ಚಾರ್ಜ್ ಮಾಡಿಕೊಂಡು ಬರ್ತೀನೀಂತ ಹೇಳಿ, ಗದ್ದಲ ಎಬ್ಬಿಸಿದ್ದ ಅವನ್ನೂ ಕರ್ಕೊಂಡು ದಿಢೀರಂತ ಲಾಂಗ್ ಡ್ರೈವ್ ಹೋದಳು. ಈ ಕಡೆ, ಬೆಳಗಿನ ಕೋಸಂಬರಿ, ಮೊಸರವಲಕ್ಕೀನ ಮೋಂಬತ್ತಿ ಬೆಳಕಲ್ಲಿ ತಿನ್ನಕ್ಕೋಸ್ಕರ, ತಟ್ಟೆ ಹಾಕಿ, ನೀರಿಟ್ಟು ಟೇಬಲ್ ರೆಡಿ ಮಾಡಿದ ಮಗ. ತೆಪ್ಪಗಿರಲಾರದೇ ಕೃಷ್ಣಮೂರ್ತಿಗಳು – 'ನನಗೂ ಬೋರು. ಏನ್ಮಾಡಕ್ಕೂ ಇಲ್ಲ' ಅಂತ ಗೊಣಗಿದರು. ಕಮಲಮ್ಮ ಅವರ ಸೂಟ್ಕೇಸಿಂದ ಒಂದು ಪುಸ್ತಕ ಹಿಡ್ಕೊಂಡು ಬಂದು – 'ಮಗ ಹಚ್ಚಿರೋ ಕ್ಯಾಂಡಲ್ ಹತ್ತಿರ ಕೂತ್ಕೊಂಡು ರಾಮನಾಮ ಬರೀರಿ. ಇಲ್ಲಿಗೆ ಬರುವಾಗ ನಾನು ರಾಮನಾಮದ ಪುಸ್ತಕ ತೊಗೋತೀನಿ ಅಂದಿದ್ದಕ್ಕೆ ಹಾಸ್ಯ ಮಾಡಿದ್ರಲ್ಲ.' – ಅಂತಂದು ಅವರ ಕೈಗೆ ಪುಸ್ತಕ, ಪೆನ್ನು ಕೊಟ್ಟು, ತಾವು ದೀಪಂ ಜ್ಯೋತಿ ಹೇಳ್ತಾ, 'ದೇವರ ದೀಪ ಹಚ್ತೀನಿ' – ಅಂತ ಹೋದರು.

■

# ದಾರಿ ಕಾಣದಾಗಿದೆ ರಾಘವೇಂದ್ರನೆ

♦ಡಾ. ಶ್ಯಾಮಲಾ ರವಿಶಂಕರ್

ನಮ್ಮೆಲ್ಲರಿಗೂ ಒಂದಲ್ಲ ಒಂದು ದಿನ ದಾರಿ ತೋರಿಸುವವರ ಅವಶ್ಯಕತೆ ಬಂದಿರುತ್ತದೆ. ನಾನು ಹೇಳೋದು ಜೀವನ ಮಾರ್ಗದರ್ಶಕರ ಬಗ್ಗೆ ಅಲ್ಲ. ಹೀಗೆ ಎಲ್ಲೋ ಯಾರದೋ ಮನೇನೋ ಅಥವಾ ಇನ್ನೇನೋ ಹುಡುಕುತ್ತಾ ಇರೋವಾಗ ದಾರಿ ಕಾಣದಾಗಿ ರಸ್ತೇಲಿ ಸಿಕ್ಕಿ ಸಿಕ್ಕಿದವರನ್ನೆಲ್ಲಾ ಕೇಳೋ ಪರಿಸ್ಥಿತಿಗೆ ಒಳಗಾಗ್ತೀವಲ್ಲ, ಆ ಥರದ್ದು. ಅದೇನು ಮಹಾ. ಜಿಪಿಎಸ್ ಹಾಕ್ಕೊಂಡ್ರೆ ಯಾರ್ ಮುಲಾಜೂ ಇಲ್ಲದೆ ಹೋಗಬಹುದು. ಯಾರನ್ನ ಯಾಕೆ ಕೇಳಬೇಕು ಅನ್ನಬಹುದು ಈ ಕಾಲದವರು. ಓಲಾದಲ್ಲೂ ಜಿಪಿಯೆಸ್ ಎಷ್ಟೋ ಕೈ ಕೊಡುತ್ತೆ. ಉದಾಹರಣೆಗೆ, ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನ, ಬೇಡ, 15ನೇ ಕ್ರಾಸ್–ಸಂಪಿಗೆ ರೋಡ್ ಕೂಡ ಲೊಕೇಶನ್ ನಾಟ್ ಫೌಂಡ್ ಅಂತ ಬಂತು. ಆಗಿನಿಂದ ಈ ಮಾರ್ಗದರ್ಶನ ಎಷ್ಟೂ ಉಪಯೋಗಕ್ಕೆ ಬಾರದೆ, ಸಮಯಕ್ಕೆ ಕೈ ಕೊಟ್ರೆ ಅನ್ನೋ ಸಂಶಯ ಬರತ್ತೇ ತಾನೇ?

ಅದಕ್ಕೆ ನಾವು ಹಲವಾರು ಸಲ ಕಂಡವರ ಮೊರೆಹೊಕ್ಕು ಕೇಳಬೇಕಾಗುತ್ತೆ ಹಿಂದಿನ ಬೆಂಗಳೂರಿನಲ್ಲಿ ಎಲ್ಲರಿಗೂ ಅವರವರ ನೆರೆಹೊರೆ ಪರಿಚಯವಿರುತ್ತಿತ್ತು. ಇಂಥ ಡಾಕ್ಟರ ಕ್ಲಿನಿಕ್ ಎಲ್ಲಿ ಅಥವಾ ಇಂಥ ಬೇಕರಿ ಎಲ್ಲಿ ಅಂತ ಕೇಳಿದ್ರೆ ಚೆನ್ನಾಗಿ ಗುರ್ತು ಹೇಳುತ್ತಿದ್ರು. ಈಗ "ನಹಿ ಮಾಲೂಂ" ಅನ್ನೋದು ಕಟ್ಟಿಟ್ಟ ಉತ್ತರ. ಅದೃಷ್ಟವಶಾತ್ ಕನ್ನಡದವರು ಸಿಕ್ಕಿದರೆ ಮಾತೇ ಆಡದೆ ತಪ್ಪಿಸ್ಕೊಳ್ಳೋ ಯತ್ನದಲ್ಲಿರ್ತಾರೆ. ನಾವೇನೋ ಟೆರರಿಸ್ಟ್‌ಗಳೋ, ಭೂತಾನೋ ಅನ್ನೋ ಹಾಗೆ. ಅಪ್ಪರ ಮೇಲೂ ಮಾತಿಗೆ ನಿಂತರೆ, "ಗೊತ್ತಿಲ್ಲ, ನಾನೂ ಹೊಸಬನೆ, ನೆಲಮಂಗಲದಿಂದಲೋ, ಬಾಗಲೂರಿನಿಂದ ಬಂದಿದ್ದೀನಿ" ಅಂದ್ರೆ ಅಲ್ಲಿಗೆ ಮುಗೀತು.

ಇದು ನಮ್ಮೂರು ಕಥೆ ಆದರೆ ಬೇರೆ ಬೇರೆ ಕಡೆ ನನಗಾದ ಹಲವು ಅನುಭವಗಳು: ನ್ಯೂ ಜಯ್ಪಾಲ್ ಗುರಿ ಸ್ಟೇಷನ್‌ನಲ್ಲಿ ಇಳಿದು ಟಾಯ್ ಟ್ರೈನ್ ತೊಗೊಂಡು ಡಾರ್ಜಿಲಿಂಗ್‌ಗೆ ಹೋಗಬೇಕು. ಅಲ್ಲಿ ಒಬ್ಬನನ್ನು ನನ್ನ ಮಗಳು ಹಿಂದಿಲಿ ಟಾಯ್ ಟ್ರೈನ್ ಎಲ್ಲಿ ಯಾವಾಗ ಬರುತ್ತೆ ಅಂತ ಕೇಳಿದ್ದಕ್ಕೆ ಬಡ ಬಡ ಅಂತ ಸಿಟ್ಟು ಮಾಡಿಕೊಂಡವನ ಹಾಗೆ ಒದರಿಬಿಟ್ಟು ಸ್ವಲ್ಪ ಕೂಲ್ ಡೌನ್ ಆಗಿ ಹೀಗೆಂದ : ನೋಡೋಕೆ ಬೆಂಗಾಲಿ ಹಾಗಿದ್ದೀಯ. ಹಿಂದೀಲಿ ಕೇಳೋಂತಾ ದುರ್ಗತಿ ಏಕೆ?" ಅಂತ ಹಿಂದಿ ಮೇಲಿನ ಕೋಪ ತೀರಿಸಿಕೊಂಡ.

ಇನ್ನು ದೆಹಲಿಯ ಕರೋಲ್‌ಬಾಗ್‌ನಲ್ಲಿ ಎಟಿಎಂ ಎಲ್ಲದೆ ಅಂತ ಒಬ್ಬಾತನ್ನ ಕೇಳಿದಕ್ಕೆ ಅವ್ನು ನಮ್ಮನ್ನ ತನ್ನ ಮನೆಗೆ ಕರ್ಕೊಂಡು ಹೋಗೋಕೆ ರೆಡಿಯಾಗಿದ್ದ. ಬನ್ನಿ ನನ್ನ ಕಾರಿನಲ್ಲಿ./ ಸುಮಾರು ದೂರ ಆಗತ್ತೆ. ಪಾಪ, ನೀವ್ಯಾಕೆ ಅಷ್ಟು ದೂರ ನಡೀಬೇಕು" ಅನ್ನೋದೇ? ಪರ್ವಾಗಿಲ್ಲ ನಾವು ನಡೀತೀವಿ ಅಂತ ಹೇಳಿ ತಪ್ಪಿಸ್ಕೊಂಡ್ವಿ.

ಇನ್ನು ಚೆನ್ನೈಯಲ್ಲಿ ಯಾರನ್ನ ಎಲ್ಲಿಗೆ ದಾರಿ ಕೇಳಿದ್ರೂ ತಮಿಳಿನಲ್ಲಿ ಮಾತ್ರ ಉತ್ತರ. 'ಓ ಅದುವಾ, ಇಪ್ಪಡಿಯೇ ನೇರಂ ಪೋಯಿಟ್ಟು ಮೂನಾವದು ರೊಟು ಕಟ್ ಪಣ್ಣುಂಗೊ, ಅಂಗೆಯೇ...." ರೋಡ್ ಯಾಕೆ ಕಟ್ ಮಾಡ್ಬೇಕು ನಮ್ಮ ಶಾರ್ಟ್‌ಕಟ್‌ಗೋಸ್ಕರ ಅಂತ ಅಂದ್ಕೊಂಡು ಹೆಜ್ಜೆ ಹಾಕ್ತೀರಾ.




ಇನ್ನು ಹೈದರಾಬಾದಿನಲ್ಲಿ ಹೀಗಿರತ್ತೆ ಅವ್ರ ದಾಟಿ "ಇಲಾಗೆ, ಇಲಾಗೆ.... ಬಕ್ಕಗಾ ಸೀದಾ ಪೋತೋ ಉಂಟೆ" ಅಂತ ಅದೇ ರಸ್ತೇಲೇ ನಡೆದು ನಡೆದು ಚಕ್ಕಗ ಅಂತ ಆಕಾಶದವರೆಗೂ ಕೈ ಎತ್ತಿ ತೋರಿಸಿ "ಅಕ್ಕಡ ಒಕ ಇರಾಜಿ ಹೋಟೆಲು ಉಂದಿ, ಆ ಪಕ್ಕನ ಚಿನ್ನಗಾ ರೆಂಡೋವ. ಲೆಫ್ಟ್ ಪಟ್ಟುಕೊಂಡಿ" ಅಂತ ಹೇಳ್ತ ಹೇಳ್ತನೇ ಅವನು ಫಾಯಬ್ .. ಈಗ ನಾವು ಸೀದಾ ಮೇಲಕ್ಕೆ ಹೋಗಿ ಎರಡನೇ ಲೆಫ್ಟ್‌ನ ಹೇಗೆ ಹಿಡಿಕೊಳ್ಳೋದೂ ಅಂತ ಯೋಚಿಸ್ತಾ ನಡೀತೀರಾ.

ಇನ್ನು ಅಮೇರಿಕದಲ್ಲಿ ರೋಡ್‌ನಲ್ಲಿ ಯಾರೂ ಸಿಕ್ಕೋದೂ ಇಲ್ಲ, ಸಿಕ್ಕಿದರೂ ಅವ್ರನ್ನ ಮಾತಿಗೆಳೆಯೋದೂ, ದಾರಿ ಕೇಳೋದೂ, ಉತ್ತರ ಸಿಗೋದೂ ಎಲ್ಲ ಗಗನ ಕುಸುಮ. ನಾವೊಮ್ಮೆ ಎರಡು ದಶಕಗಳ ಹಿಂದಿನ ಮಾತು. ಆಗೆಲ್ಲಾ ರೋಡ್ ಮ್ಯಾಪ್ನ ಪ್ರಿಂಟೌಟ್ ಹಿಡ್ಕಂಡು ಹೊರಡಬೇಕಾಗಿತ್ತು. ಪಿಟ್ಸ್‌ಬರ್ಗ್ ವೆಂಕಟೇಶ್ವರ ಸ್ವಾಮಿ ದೇವಾಲಯಕ್ಕೆ ಹೊರಟು, ಸಖತ್ತಾಗಿ ದಾರಿ ತಪ್ಪಿ ತಿರುಗಿದ ರಸ್ತೆಲೇ ತಿರುಗಿ ತಿರುಗಿ ಅಪ್ಪಾಲೆ ತಿಪ್ಪಾಲೆ ಮಾಡ್ತಾ ಇದ್ದಾಗ ಒಂದೆರಡು ಗ್ಯಾರೇಜು ತೆಗೆದಿದ್ದವು. ನಮ್ಮನ್ನು ಕಂಡ ಕ್ಷಣ ಬಾಗಿಲು ಡೌನ್ ಮಾಡಿಬಿಡ್ತಿದ್ರು. ಕಡೆಗೊಬ್ಬ ಪುಣ್ಯಾತ್ಮ ಬಾಗಿಲು ಮುಚ್ಚೋಕೆ ಮುಂಚೆ ಸರ್ ಸರ್, ಅಂತ ಕೂಗಿದ್ದಕ್ಕೆ, ಸ್ವಲ್ಪಾನೇ ಬಾಗ್ಲು ತೆಗೆದು ಏನು ಅಂತ ವಿಚಾರಿಸಿದ. ನಮ್ಮ ಬೇಡಿಕೆ ಕೇಳಿ "ಓ ಇಂಡಿಯನ್ಸ್? ನಿಮ್ಮ ಟೆಂಪಲ್ಲಾ? ಅದು ನೀವು ಅದನ್ನ ದಾಟಿ ಒಂದು ಮೈಲಿ ಒಂದು ಬಿಟ್ಟಿದ್ದೀರಿ. ಕನ್ಫ್ಯೂಷನ್ ಬೇಡ. ಇದೇ ರೋಡ್ ವಾಪಸ್ ಹೋಗಿ ಬಲಗಡೆಗೆ ಇರೋದೇ ಒಂದು ಟರ್ನ್. ಅದೇ ನಿಮ್ಮ ದೇವಾಲಯ" ಅರ್ಧ ಫರ್ಲಾಂಗ್ ದೂರದಿಂದಲೇ ದಾರಿ ತೋರಿದ ಮಹಾನ್ ವ್ಯಕ್ತಿಗೆ ಕೈಮುಗಿದು ಅಂತೂ ಮುಸ್ಸಂಜೆ ಒಳಗೆ ದರ್ಶನ ಮಾಡಿ ಹೋಟೆಲ್ ದಾರಿ ಹಿಡಿದೆವು.

ಹೀಗೆ ಭೌತಿಕ ದಾರೀನೇ ಕಾಣದೇ ತಡವರಿಸ್ತಾ ಇರೋವಾಗ ಪಾರಮಾರ್ಥಿಕ ದಾರಿ ಕಾಣೋದು ಹೇಗಪ್ಪಾ ಅಂತ ದಾಸರು ದಾರಿ ಕಾಣದಾಗಿದೆ ರಾಘವೇಂದ್ರನೆ ಅಂತ ಹಾಡಿದ್ದಾರೇನೋ.

■

# ಮಹಿಳೆ ಮತ್ತು ಗಣಕ ಯಂತ್ರ

**♦ಸಹನಾ ಪ್ರಸಾದ್**

ಸಾಧಾರಣವಾಗಿ "ಮಹಿಳೆ", "ಹೆಣ್ಣು" ಅಂದ ತಕ್ಷಣ ಮನಸ್ಸಿಗೆ ಬರುವುದು "ಸೀರೆ", "ಮಲ್ಲಿಗೆ", "ಬಳೆ", "ಗೆಜ್ಜೆ" ಇತ್ಯಾದಿ. ಇನ್ನೂ ಮುಂದುವರಿದರೆ "ನಲ್ಲಿ ಕಟ್ಟೆ ಜಗಳ", "ಬಜಾರಿ", ಹೆಂಡತಿ–ಪ್ರಾಣ ಹಿಂಡುತಿ", "ಗಯ್ಯಾಳಿ" ಮುಂತಾದವು. ಪ್ರೇಯಸಿ ಹೆಂಡತಿಯಾದರೆ ಗಂಡಿನ ವಿವರಣೆ ಕೂಡ ಬೇರೆ ದಾರಿ ಹಿಡಿಯುತ್ತದೆ. ಮನದನ್ನೆಯನ್ನು ವರ್ಣಿಸುವಾಗ ಇದ್ದ ಉತ್ಸಾಹ ಮಡದಿಯನ್ನು ಬಣ್ಣಿಸುವುದರಲ್ಲಿ ಇಲ್ಲ, ಅಲ್ಲವೇ?

ಇರಲಿ, ಗೆಳತಿಯರೆ, ನಾವ್ಯಾಕೆ ಗಂಡಸರನ್ನು ನೆಚ್ಚಿ ಕೂರಬೇಕು? " ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾಳೆ" ಎಂದಿದಾರೆ ಹೊರತು "ಪ್ರತಿ ಯಶಸ್ವಿ ಮಹಿಳೆಯ ಹಿಂದೆ ಪುರುಷ" ಎಂದು ಹೇಳಿಲ್ಲ, ಅಲ್ಲವೇ? ಇರಲಿ, ಆದರೂ  ನಮ್ಮ ನಮ್ಮ ಬದುಕಲ್ಲಿ ತಂದೆ, ಸಹೋದರ, ಪ್ರಿಯತಮ, ಗಂಡ, ಸಹೋದ್ಯೋಗಿ ಮುಂತಾದ ಗಂಡಸರಿಗೆ ಸಲಾಂ ಹೇಳುತ್ತಾ ಈಗ ನಮ್ಮೆಲ್ಲರ ಜೀವನದ ಅವಿಭಾಜ್ಯ ಅಂಗವಾಗಿರುವ ಗಣಕ ಯಂತ್ರಕ್ಕೆ ಬರೋಣ. "ಅನ್" ಮಾಡಲು ಒಂದು ಬಟನ್ ಸಾಕು, ಒಂದು ಸಲ ಚಾರ್ಜ್ ಮಾಡಿಟ್ಟರೆ ಸುಮಾರು ಗಂಟೆ ಕೆಲಸ ಮಾಡುತ್ತಾ ಇರುತ್ತದೆ. ನಾವು ಯಾವುದಾದರೂ ಕಡತವನ್ನು ಸೇವ್ ಮಾಡಲು ಮರೆತರೆ ಅದೇ ಮಾಡುತ್ತದೆ, ಮಾತನಾಡುವುದಿಲ್ಲ, ನಮ್ಮ ಮನದಾಳದ ಮಾತುಗಳು, ಗುಟ್ಟುಗಳು, ಗೋಳನ್ನೆಲ್ಲಾ ಬರೆದಿಟ್ಟು ಪಾಸ್ವರ್ಡ್ ಹಾಕಿದರೆ ಸಾಕು, ಮಾಹಿತಿ ಸುರಕ್ಷಿತವಾಗಿರುತ್ತದೆ.

ಗಣಕ ಯಂತ್ರ ನಮ್ಮನೆಯ ಶೋಭೆ. "ಆಹಾ ಇವರ ಮನೆಯಲ್ಲಿ ಎರಡೆರಡು ಲ್ಯಾಪ್ಟಾಪ್, ಒಂದು ಡೆಸ್ಕಾಪ್, ಒಂದು ಟ್ಯಾಬ್ ಇದೆ ಕಣೆ. ಗಂಡ ಒಳ್ಳೆಯವನು. ಅವನು ಆಫೀಸಿಗೆ ಹೋದರೆ ಅವನ ನೆನಪೂ ಬರದಂತೆ ವ್ಯವಸ್ಥೆ ಮಾಡಿದಾನೆ!" ಎಂದು ಹೇಳಿದ ಸ್ನೇಹಿತೆಯನ್ನು ಅಚ್ಚರಿಯಿಂದ ಕೇಳಿದೆ" ಅದ್ಸರಿ, ಅಷ್ಟೊಂದು ಯಾಕೆ. ಒಂದಿದ್ದರೆ ಸಾಕಿತ್ತು ಅಲ್ವಾ". ನಕ್ಕು ನುಡಿದಳು" ಹಿಂದೆಲ್ಲಾ ನಿಮ್ಮ ಮಗಳಿಗೆ ಯಾವುದಕ್ಕೂ ಕೊರತೆ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ಭರವಸೆ ಕೊಡುತ್ತಿರಲಿಲ್ಲವೇ ಅತ್ತೆ ಮಾವನಿಗೆ. ಹಾಗೆ ಈತ ನಿಮ್ಮ ಮಗಳಿಗೆ ಒಂದಲ್ಲ ಒಂದು ಗಣಕ ಯಂತ್ರ ಜತೆಯಲ್ಲಿ ಇರೋ ಹಾಗೆ ಮಾಡುತ್ತೇನೆ. ಒಂದು ಹಾಳಾದರೂ ಮತ್ತೊಂದು ಇರುತ್ತದೆ" ಎಂದು ಮಾತು ಕೊಟ್ಟಿದ್ದಾನೆ" ... ಮಾತೇ ಬಾರದೆ ಮೂಕಾದೆ!!

ನಮಗೊಂದು ಹೊಸ ಪ್ರಪಂಚ ತೆರೆದಿಟ್ಟಿದೆ ಈ ಯಂತ್ರ. ಇಂಟರ್ನೆಟ್ ಈಗ ನಮ್ಮ ಮನೆ ದೇವರಂತಾಗಿದೆ. " ಮೊದಲು ಬಡಿಸೇ, ಆಮೇಲೆ ಫೋಟೊ ತೆಗೆವಂತಿ" ಎಂಬುದು ಎಲ್ಲ ಗಂಡರ ಒಕ್ಕೊರಳಿನ ಮಾತಾಗಿದೆ. ಅಲ್ರೀ, ನಾವು ಮಾಡಿದ ಅಡುಗೆಯನ್ನು ನೋಡಿಯೇ, ತಿನ್ನದೇನೆ " ಆಹಾ", " ಬಾಯಲ್ಲಿ ನೀರು", " ಸೊಗಸಾಗಿದೆ" ಇತ್ಯಾದಿ ಅಣಿಮುತ್ತುಗಳು ಗಂಡನ ಬಾಯಿಯಿಂದ ನಿರೀಕ್ಷಿಸಲಾಗುತ್ತದೆಯೇ? ಮದುವೆಯಾದ ಹೊಸತರಲ್ಲಿ ಅಡುಗೆ ಹೇಗೇ ಇರಲಿ, ಕಣ್ಣು, ಬಾಯರಳಿಸಿ ತಿಂದ ಪತಿರಾಯ ಈಗ ಎಷ್ಟೇ ರುಚಿಯಾದ ಅಡುಗೆಯಿರಲಿ ಮೊಬೈಲ್ ಅಲ್ಲಿ ಕಣ್ಣು ಕೀಲಿಸಿ, ಅಲ್ಲಿರುವ ಚಂದದ ಪಟಗಳನ್ನು ನೋಡುತ್ತಾ ಯಾಂತ್ರಿಕವಾಗಿ ತಿಂದು ಎದ್ದು ಹೋದರೆ ಹೆಣ್ಣು ಮಕ್ಕಳೇನು ಮಾಡಬೇಕು? ಸೋಶಿಯಲ್ ಮೀಡಿಯಾದ ಮೊರೆ ಹೋಗುವುದು ತಾನೇ?

ಫ್ರಾನ್ಸ್ ದೇಶದಲ್ಲಿ ಒಂದು ತರಲೆ ಹುಡುಗ ಟೀಚರನ್ನು ಕುರಿತು ಕೇಳಿದನಂತೆ, ಗಣಕ ಯಂತ್ರ ಹೆಣ್ಣೊ, ಗಂಡೊ ಎಂದು. ಇದನ್ನು ಬಗೆ ಹರಿಸಲು ಮ್ಯಾಡಮ್ ತರಗತಿಯನ್ನು ಎರಡಾಗಿ ವಿಭಜಿಸಿ ನಿಮ್ಮ ಅನಿಸಿಕೆ ಬರೆಯಿರಿ ಅಂದರಂತೆ.ಹೆಣ್ಣು ಗಂಡು ಮಕ್ಕಳು ತಮಗೆ ತೋಚಿದ್ದನ್ನು ಬರೆದರಂತೆ. ಹೆಣ್ಣುಮಕ್ಕಳ ಪ್ರಕಾರ ಗಣಕಯಂತ್ರ "ಗಂಡು". ಸಾಕಷ್ಟು ಡೇಟಾ ಇದ್ದರೂ ತಮಗೆ ತಾವೇ ಯೋಚಿಸುವ ಶಕ್ತಿ ಕಡಿಮೆ, ಏನಾದರೂ ಕೆಲಸ ಮಾಡಿಸಬೇಕಾದರೆ ಕಷ್ಟ ಪಟ್ಟು "ಆನ್" ಮಾಡಬೇಕು, ಸಮಸ್ಯೆಗಳನ್ನು ಪರಿಹಾರ ಮಾಡಲು ಕೊಂಡರೆ ಬಹುಪಾಲು ಸಮಯ ಅವೇ ಸಮಸ್ಯೇ. ಎಲ್ಲದಕ್ಕಿಂದ ನಗು ಬರೆಸುವುದು" ಚೆನ್ನಾಗಿದೆ ಮಾಡಲ್ ಎಂದು ಕೊಂಡುಕೊಂಡರೆ ಹೊಸದೊಂದು ಮಾಡಲ್ ಮಾರ್ಕೆಟ್ಟಿಗೆ ಬಂದು ಅಯ್ಯೊ, ಇನ್ನೊ ಸ್ವಲ್ಪ ಕಾಯಬೇಕಿತ್ತು" ಅನಿಸುವುದು!!

ಗಂಡು ಹುಡುಗರೇನು ಕಮ್ಮಿ, "ಇಲ್ಲಾ, ಗಣಕ ಯಂತ್ರ ಹೆಣ್ಣು" ಎಂದು ಪ್ರತಿವಾದ ಮಾಡಿದರಂತೆ. ಅವರೆಲ್ಲಾ ಏನೆಂದು ಬರೆದರು ಎಂದಿರಾ? ಹೋಗ್ರೀ ಈ ಗಂಡಸರ ಮಾತಿಗೆ ಬೆಲೆ ಕೊಡುವುದಾ? ಉಹೂ ಅದೂ ಮಹಿಳೆಯರ ಸಂಚಿಕೆಯಲ್ಲಿ!! ■

---




## ಪುಸ್ತಕ ಪರಿಚಯ

ತುಂತುರು ಹನಿಗಳು
ಪುಟಗಳು 80 – ಬೆಲೆ ರೂ. 50/–
ಸಪ್ನಲೋಕ
ಪುಟಗಳು 101 – ಬೆಲೆ ರೂ. 100/–
ಲೇಖಕರು – **ಸಪ್ನ ದಿನಕರ್**




ಪ್ರಕಾಶಕರು – ಸಪ್ನಾ ಪ್ರಕಾಶನ, ಉಪ್ಪಿನಂಗಡಿ. ಮೊಬೈಲ್ 7259887117

ದಕ್ಷಿಣ ಕನ್ನಡದ ಪ್ರತಿಭೆ ಸಪ್ನಾ ದಿನಕರ್ ಅವರು ಇತ್ತೀಚೆಗೆ ಕಾವ್ಯಲೋಕಕ್ಕೆ ಪ್ರವೇಶ ಮಾಡಿ ಅನೇಕ ಚುಟುಕುಗಳನ್ನು ಬಹಳ ಸ್ವಾರಸ್ಯವಾಗಿ ಬರೆಯುತ್ತಿದ್ದಾರೆ. ಅವರ ಇತ್ತೀಚಿನ ಕವನ ಸಂಕಲನಗಳು ಸ್ವಪ್ನ ಲೋಕ ಮತ್ತು ತುಂತುರು ಹನಿಗಳು ಬಹಳ ಜಪ್ರಿಯವಾಗಿವೆ. ಎಲ್ಲ ವಿಷಯಗಳ ಬಗೆಗೆ ಇಣುಕು ನೋಟ ಬೀರಿ ಅದನ್ನು ಕೆಲವೇ ಶಬ್ದಗಳಲ್ಲಿ ಅಭಿವ್ಯಕ್ತಿಗೊಳಿಸುವ ಜಾಣ್ಮೆ ಲೇಖಕಿಗಿದೆ. ವಿಪರ್ಯಾಸ ಎನ್ನುವ ಒಂದು ಕವನದಲ್ಲಿ ಅವರು ಕಂಡಿರುವ ಸತ್ಯ ಹೀಗಿದೆ

**ಹಿಂದಿನ ಕಾಲದಲ್ಲಿ**
**ಕಪ್ಪು ಮಸಿಮಸಿ**
**ಹಲ್ಲು ಬಿಳಿ ಬಿಳಿ**
**ಈಗ ಪೇಸ್ಟು ಬಿಳಿ ಬಿಳಿ**
**ಹಲ್ಲು ಕರಿ ಕರಿ**

ಲೇಖಕಿಯ ಸಾಹಿತ್ಯ ಯಾತ್ರೆಗೆ ಅಪರಂಜಿ ಶುಭ ಕೋರುತ್ತಾಳೆ.


# ನನ್ನ ಇಂಗ್ಲೀಷ್ ಕಲಿಕೆ

♦ಕುಮುದಾ ಪುರುಷೋತ್ತಮ್

ನಾನು ಪ್ರಪ್ರಥಮವಾಗಿ ಶಾಲೆಗೆ ಸೇರುವ ವೇಳೆಗೆ ನಮಗೆ ಸ್ವಾತಂತ್ರ್ಯಬಂದು ಹಲವು ವರ್ಷಗಳಾಗಿದ್ದುವಷ್ಟೇ. ಬ್ರಿಟೀಷರು ನಮ್ಮನ್ನಾಳಿದ್ದರೂ ಇಂಗ್ಲೀಷನ್ನು ಜನಸಾಮಾನ್ಯರಿಗೆ ಕಡ್ಡಾಯಗೊಳಿಸಿರಲಿಲ್ಲ. ಜನರ ದಿನನಿತ್ಯದ ವ್ಯವಹಾರ ಸಂಪೂರ್ಣವಾಗಿ ಕನ್ನಡದಲ್ಲೇ ನಡೆಯುತ್ತಿತ್ತು. ಆಗಿನ್ನೂ ಮಮ್ಮಿಡ್ಯಾಡಿ, ಆಂಟಿಅಂಕಲ್ಗಳ ಹಾವಳಿ ಇಲ್ಲದೆ ಬಾಯ್ತುಂಬಾ ಕರೆಯುವ ಅಮ್ಮ, ಅಪ್ಪ, ಅಜ್ಜ, ಅಜ್ಜಿ, ಚಿಕ್ಕಮ್ಮ, ದೊಡ್ಡಪ್ಪ, ಸೋದರಮಾವ, ಅತ್ತೆ ಎಂದು ಸಂಬಂಧಗಳನ್ನು ನಿಖರವಾಗಿ ಸೂಚಿಸುವ ಸಂಬೋಧನೆ ರೂಢಿಯಲ್ಲಿತ್ತು. ಎಲ್ಲೆಲ್ಲೂ ಕನ್ನಡದ ಕಂಪು.

ಪ್ರಾಥಮಿಕ ಶಿಕ್ಷಣ ಸಂಪೂರ್ಣವಾಗಿ ಕನ್ನಡ ಮಾಧ್ಯಮದಲ್ಲೇ ನಡೆಯಿತು. ನೀನ್ಯಾರಿಗಾದೆಯೋ ಎಲೆ ಮಾನವಾ, ಬಣ್ಣದ ತಗಡಿನ ತುತ್ತೂರಿ, ಬಂದಾ ಬಂದಾ ಸಣ್ತಮ್ಮಣ್ಣ, ನಾಗರ ಹಾವೇ ಹಾವೊಳುಹೂವೇ... ಹೀಗೆ ಕಿರಿಯರಿಗಾಗಿ ಹಿರಿಯ ಕವಿಗಳು ಬರೆದ ಕವಿತೆಗಳನ್ನು ಹಾಡುತ್ತಾ ಆಡುತ್ತಾ ಬೆಳೆದೆವು. ನಮ್ಮ ಮೇಡಮ್ಮುಗಳು ಕೂಡಾ ಇದಕ್ಕೆ ಪೂರಕವಾಗಿ ಬೈಯುವಾಗಲೂ ಶುದ್ಧ ಕನ್ನಡದಲ್ಲೇ ಬೈದು ನಮ್ಮ ಭಾಷಾ ಸಂಪತ್ತನ್ನು ಸಾಕಷ್ಟು ಶ್ರೀಮಂತ ಗೊಳಿಸಿದ್ದರು! ಅಂತೂ ಇಂತೂ ಪ್ರಾಥಮಿಕ ಶಿಕ್ಷಣ ಮುಗಿಸಿ ಮಾಧ್ಯಮಿಕ ಶಾಲೆಗೆ ಸೇರಿದೆ. ಅಲ್ಲಿಂದ ನನ್ನ ಇಂಗ್ಲೀಷ್ ಕಲಿಕೆ ಶುರುವಾಯ್ತು.

ಇಂಗ್ಲೀಷ್ ಅಂದರೆ ಎಂಥದ್ದೋ ಭಯ, ಗಾಬರಿ. ಇದನ್ನು ನನ್ನಿಂದ ಕಲಿಯಲು ಸಾಧ್ಯವೆ ಎಂಬ ಕೀಳರಿಮೆಯಿಂದ ಇದ್ದಬದ್ದ ಆತ್ಮವಿಶ್ವಾಸ ಕರಗಿಹೋಗುತ್ತಿತ್ತು. ಮೊದಲಿಗೆ ಎ ಬಿ ಸಿ ಡಿ ಅಕ್ಷರಮಾಲೆಯ ಪರಿಚಯ. ಅದೂ ಕ್ಯಾಪಿಟಲ್ ಹಾಗೂ ಸಣ್ಣಕ್ಷರದಲ್ಲಿ ಕಲಿಯಬೇಕಿತ್ತು. ಇತರ ಭಾಷೆಯಲ್ಲಿಲ್ಲದ ಈ ವಿಂಗಡಣೆ ಬೇಕೇ? ಕೇವಲ ನಮ್ಮ ಪ್ರಾಣ ಹಿಂಡಲೆಂದೇ ಮಾಡಿದ್ದಾರೆಯೇ? ಇದು ನನ್ನ ಬಗೆಹರಿಯದ ಪ್ರಶ್ನೆಯಾಗಿಉಳಿಯಿತು. ಪುಟ್ಟ ಪುಟ್ಟ ಪದಗಳ ಪರಿಚಯವಾದಾಗ ತರ್ಕಕ್ಕೆ ಒಗ್ಗದ ಸ್ಪೆಲ್ಲಿಂಗ್ ತಲೆತಿನ್ನುತ್ತಿತ್ತು. ಈ ಹಂತವನ್ನು ದಾಟಿ ಚಿಕ್ಕ ಚಿಕ್ಕ ವಾಕ್ಯರಚನೆಯ ಪಾಠ ಆರಂಭವಾಯಿತು. ಅಂದಿನ ಇಂಗ್ಲೀಷ್ ಕಲಿಕೆಯ ವಿಶೇಷವೆಂದರೆ ಅದನ್ನು ಕನ್ನಡದ ಮೂಲಕ ಕಲಿಸುವಿಕೆ. ಇದರಿಂದಾಗಿ ಇಂಗ್ಲೀಷಿನಲ್ಲಿ ಒಂದು ಪುಟ್ಟ ವಾಕ್ಯ ರಚಿಸಬೇಕಾದರೂ ಮೊದಲದನ್ನು ಕನ್ನಡದಲ್ಲಿ ರೂಪಿಸಿಕೊಂಡು ತರುವಾಯ ಇಂಗ್ಲೀಷಿಗೆ ಭಾಷಾಂತರ ಮಾಡಿಕೊಳ್ಳುವ ಪರಿಪಾಟವಾಯಿತು. ಎರಡೂ ಭಾಷೆಯ ರೀತಿ ರಿವಾಜುಗಳು ಬೇರೆಬೇರೆಯೇ ಇದ್ದು ಭಾಷಾಂತರವಮಾಡುವಾಗ ಸಾಕಷ್ಟು ಎಡವಟ್ಟಾಗುತ್ತಿತ್ತು. 'ಇಂದು ಶಾಲೆಗೆ ರಜೆ ಇದೆ' ಎನ್ನುವುದನ್ನು ನಾವು ಸುಲಲಿತವಾಗಿ ' ಟುಡೇ ಟು ಸ್ಕೂಲ್ ಲೀವ್ ಈಸ್' ಎಂದು ಬರೆದು ಬಿಡುತ್ತಿದ್ದೆವು. ಅದೇ ರೀತಿ ಮತ್ತೊಮ್ಮೆ " ನೆನ್ನೆ ನಾನು ಶಾಲೆಗೆ ಹೋಗಲಿಲ್ಲ. ಏಕೆಂದರೆ ನನಗೆ



ಜ್ವರ ಬಂದಿತ್ತು' ಎಂಬುದನ್ನು ಬಹಳ ಸ್ವಾಭಾವಿಕವಾಗಿ ' ಯಸ್ಟರ್ ಡೇ ಐ ಸ್ಕೂಲ್ ಗೋ ನಾಟ್ ಬಿಕಾಸ್ ಟು ಮಿ ಫೀವರ್ ಕೇಮ್' ಎಂದು ಬರೆದಾಗ ಮೇಡಮ್ಮು ತಲೆ ಚಚ್ಚಿಕೊಂಡರೂ ಒಂದಿನಿತೂ ಪ್ರಯೋಜನ ವಾಗಿರಲಿಲ್ಲ. ನಾವು ಹಾಕಿಕೊಂಡ ಹಾದಿಯಲ್ಲೇ ನಡೆಯುತ್ತಿದ್ದೆವು. ಇಂತಹ ಭಾಷಾಂತರ ಪರಾಕಾಷ್ಟೆಗೆ ಹೋದದ್ದು ವಾರ್ಷಿಕ ಪರೀಕ್ಷೆಯಲ್ಲಿ.

ಭಾಷಾಂತರ ಮಾಡಲು ಕೊಟ್ಟಿದ್ದ ಹಲವು ವಾಕ್ಯಗಳಲ್ಲಿ ಇದೊಂದಿತ್ತು.

'ಅಡುಗೆ ಮಾಡುವುದು ಒಂದು ಕಲೆ.' ಎಷ್ಟೆಷ್ಟು ಯೋಚಿಸಿದರೂ ಉತ್ತರ ಹೊಳೆಯಲೇ ಇಲ್ಲ. ಸಹಪಾಠಿಗಳ ಮುಖ ನೋಡಿದೆ. ಎಲ್ಲರ ಮುಖದಲ್ಲೂ ಪ್ರಶ್ನಾರ್ಥಕ ಚಿಹ್ನೆಯೇ. ಸಾಮೂಹಿಕವಾಗಿ ಕಾಪಿ ಮಾಡಲಾದರೂ ಒಬ್ಬರಿಗಾದರೂ ಗೊತ್ತಿದ್ದರೆ ತಾನೇ? ಛಲಬಿಡದ ತ್ರಿವಿಕ್ರಮನಂತೆ ನಾನು ಯೋಚನೆ ಮಾಡಿಮಾಡಿ ಕೂಡಿಕಳೆದು ಗುಣಿಸಿಭಾಗಿಸಿ ಉತ್ತರ ಕಂಡುಕೊಂಡೇ ಬಿಟ್ಟೆ. ಬರೆದದ್ದೂ ಆಯಿತು. ವಿಜಯೋತ್ಸವದ ನಗೆ ಬೀರುತ್ತಾ ಹೊರಬಂದೆ. ಯಾರೂ ಮಾಡದ ಸಾಧನೆ ಮಾಡಿದ ತೃಪ್ತಿಯಿಂದ ಮನೆಕಡೆ ಹೆಜ್ಜೆ ಹಾಕಿದೆ. ಬಾಗಿಲಬಳಿಯೇ ನನ್ನ ತಾತ ನಿಂತಿದ್ದರು. " ಪರೀಕ್ಷೆ ಹೇಗಾಯ್ತು?"

"ತುಂಬಾ ಚನ್ನಾಯ್ತು. ಒಂದು ಪ್ರಶ್ನೆಗೆ ಉತ್ತರ ಯಾರ್ಗೂ ಗೊತ್ತಿರ್ಲಿಲ್ಲ. ನಾನೊಬ್ಬೆ ಬರ್ದಿದ್ದು. ಈ ಸಲ ನನಗೆ ನೂರಕ್ಕೆ ನೂರು ಗ್ಯಾರಂಟಿ."

"ಏನು ಉತ್ತರ ಬರ್ದೆ?" ಪ್ರಶ್ನಪತ್ರಿಕೆ ನೋಡುತ್ತಾ ಕೇಳಿದರು.

"ಕುಕ್ ಈಸ್ ಅ ಡ್ಯಾನ್ಸ್ " ಅಂತ ಬರ್ದೆ. ಒದು ಕ್ಷಣ ಎಲ್ಲೆಲ್ಲೂ ನೀರವ. ಮರುಕ್ಷಣ ಮನೆಯ ಮೂಲೆಮೂಲೆಯಿಂದ ನಗೆ ಆಸ್ಫೋಟಿಸಿತು. ಇದರಲ್ಲಿ ನನ್ನದೇನು ತಪ್ಪಿತ್ತು? ನಾನು ಹಾಗೆ ಬರೆಯಲು ಬಲವಾದ ಕಾರಣ ಇತ್ತು.

ಹಿಂದೊಮ್ಮೆ ನಮ್ಮೂರಿನ ಜಡ್ಜಿಗಳ ಹೆಂಡ್ತಿ ಮನೆಗೆ ಬಂದಾಗ ನಮ್ಮಮ್ಮ ಗುಂಡುಕಲ್ಲಿನಲ್ಲಿ ಚಟ್ನಿಗೆ ರುಬ್ಬುತ್ತಿದ್ದರು. " ಓ! ನಿಮ್ಮನೇಲಿ ಈ ಕೆಲ್ಸವೆಲ್ಲಾ ನೀವೇ ಮಾಡ್ತೀರಾ? ನಮ್ಮನೇಲಿ ನಾನು ಮಾಡೋಲ್ಲಪ್ಪ. ಮನೇಲಿ ಕುಕ್ ಇದ್ದಾನೆ"ಎಂದಿದ್ದರು ಜಂಭದಿಂದ.

ಹಾಗಾಗಿ ಕುಕ್ಕಿಗೂ ಅಡುಗೆಗೂ ಸಂಬಂಧ ಕಲ್ಪಿಸಿಕೊಂಡಿದ್ದೆ. ಮತ್ತೊಮ್ಮೆ ಡ್ಯಾನ್ಸ್ ಮಾಸ್ತರೊಬ್ಬರು ಶಾಲೆಯಲ್ಲಿ ಸಂಜೆತರಗತಿಗಳನ್ನು ಆರಂಭಿಸಿದ್ದರು. ಅದರ ಉದ್ಘಾಟನೆಯ ದಿನ ಭಾಷಣ ಮಾಡುತ್ತಾ ಡ್ಯಾನ್ಸ್ ಒಂದು ಕಲೆ ಎಂದು ಸಾರಿಸಾರಿ ಹೇಳಿದ್ದು ನೆನಪಿನಲ್ಲಿತ್ತು.

ಅವೆರಡು ಪದಗಳನ್ನು ಸಮೀಕರಿಸಿ ಉತ್ತರ ಬರೆದು ಬಿಟ್ಟಿದ್ದೆ. ಮುಂದಿನ ಹಲವು ದಿನಗಳು ಮೇಡಮ್ಮುಗಳು ನನ್ನನ್ನುಕಂಡಾಗಲೆಲ್ಲಾ

ಪರಸ್ಪರ ಮುಖ ನೋಡಿಕೊಂಡು ಮುಸಿಮುಸಿ ನಗುವುದು ನಡೆಯಿತು.

ಇಂಗ್ಲೀಷಿನ ಜೊತೆ ಹೀಗೆಯೇ ಹೋರಾಡುತ್ತಾಮುನ್ನಡೆಯುತ್ತಿದ್ದಾಗ ಆ ಭಾಷೆಯ ಕಥೆ ಪುಸ್ತಕಗಳನ್ನು ಓದುವ ಅವಕಾಶ ಒದಗಿಬಂತು. ಓದುತ್ತಾ ಓದುತ್ತಾ ಅದೇ ಚಟವಾಗಿ ನನಗರಿಯದಂತೆಯೇ ಭಾಷೆಯ ಸ್ವರೂಪವನ್ನು,ವೈಚಿತ್ರಗಳನ್ನು ಹೀರಿಕೊಳ್ಳುತ್ತಾ ಇಂಗ್ಲೀಷನ್ನು ಕಲಿತುಬಿಟ್ಟಿದ್ದೆ! ■

● ದಂನಆ

3 ನನ್ನ ಗಂಡನ ಹೆಂಡತಿ ಒಬ್ಬ ಅದ್ಭುತ ವ್ಯಕ್ತಿ!

3 ಎಲ್ಲರೂ ಒಂದೇ ತರಹದ ಡ್ರೆಸ್ ಹಾಕಿಕೊಂಡು ಸಾರ್ವಜನಿಕವಾಗಿ ಕಾಣಿಸಿಕೊಳ್ಳಬೇಕಾಗಿ ಬಂದರೂ ಹೆಣ್ಣು ಮಕ್ಕಳು ಪಂದ್ಯಗಳಲ್ಲಿ ಭಾಗವಹಿಸುತ್ತಿರುವುದು ಆಶ್ಚರ್ಯ.

3 ಎ ವುಮನ್ ಈಸ್ ಲೈಕ್ ಎ ಟೀ ಬಾಗ್. ಯು ವಿಲ್ ನೆವರ್ ನೊ ಹೌ ಸ್ಟ್ರಾಂಗ್ ಷಿ ಈಸ್ ಟಿಲ್ ಷಿ ಗೆಟ್ಸ್ ಇಂಟು ಹಾಟ್ ವಾಟರ್.

3 'ಏನೆಂದ್ರಿ?' ಎಂದು ಹೆಂಡತಿ ಕೇಳಿದರೆ ಅವಳಿಗೆ ಕೇಳಿಸಲಿಲ್ಲ ಎಂದಲ್ಲ, ನೀವು ಹೇಳಿದ್ದನ್ನು ಬದಲಾಯಿಸಿ ಹೇಳಲು ಇನ್ನೊಂದು ಅವಕಾಶ ಕೊಡುತ್ತಿದ್ದಾಳೆ ಎಂದರ್ಥ.

3 ಗಂಡಸರೊಂದಿಗೆ ವ್ಯವಹರಿಸಬೇಕಾಗಿರುವದರಿಂದ ಮಹಿಳೆಯಾಗಿರುವುದು ಒಂದು ಕಷ್ಟದ ಕೆಲಸವೇ ಸೈ

3 ಪುರಾತತ್ವ ತಜ್ಞ ಒಬ್ಬ ಅತ್ಯುತ್ತಮ ಪತಿ, ಏಕೆಂದರೆ ಹೆಂಡತಿಗೆ ವಯಸ್ಸಾದಷ್ಟೂ ಆಕೆಯ ಮೇಲಿನ ಆಸಕ್ತಿ ಹೆಚ್ಚಾಗತೊಡಗುತ್ತದೆ.

3 ವುಮೆನ್ ಆರ್ ಲೈಕ್ ಸೆಲ್ ಫೋನ್. ದೆ ಲೈಕ್ ಟು ಬೆ ಹೆಲ್ಡ್ ಅಂಡ್ ಟಾಕ್ಡ್ ಟು ಬಟ್ ಇಫ್ ಯು ಪ್ರೆಸ್ ದಿ ರಾಂಗ್ ಬಟನ್ ಯು ವಿಲ್ ಬೆ ಡಿಸ್‌ಕನೆಕ್ಟಡ್.

3 ಗಂಡಸಿಗೆ ಮನಸ್ಸಿರಬಹುದು ಆದರೆ ಮಾರ್ಗ ಇರುವುದು ಹೆಣ್ಣಿಗೆ.

3 ಮಹಿಳಾ ದಿನ ಮಾರ್ಚ್ 6 ರಂದು ನಿಗದಿ ಮಾಡಲಾಗಿತ್ತು ಆದರೆ ಅವರು ತಯಾರಾಗಲು ಎರಡು ದಿನ ಬೇಕಾಯಿತು. ಹಾಗಾಗಿ ಅದನ್ನು ಮಾರ್ಚ್ 8ಕ್ಕೆ ಮುಂದೂಡಲಾಯಿತು. ಪುರುಷರ ದಿನವೂ ಯೋಜಿಸಲಾಯಿತು ಆದರೆ ಎಂದಿನಂತೆ ದಿನಾಂಕ ಮರೆತೇ ಹೋಯಿತು.

3 'ಏನಾದರೂ ಮಾಡಿಕೊಳ್ಳಿ' ಎಂದು ಹೆಣ್ಣು ಹೇಳಿದರೆ ನಿಮಗೆ ಏನು ಬೇಕೋ ಅದನ್ನು ಮಾಡಲು ಹೋಗದಿರಿ.

3 'ನನ್ನ ಬಳಿ ಸಾಕಷ್ಟು ಡ್ರೆಸ್‌ಗಳಿವೆ ಷಾಪಿಂಗ್‌ಗೆ ಹೋಗುವ ಅವಶ್ಯಕತೆ ಇಲ್ಲ..' ಎಂದು ಹೇಳಿರುವ ಮಹಿಳೆಯನ್ನು ನೀವು ಕಂಡಿದ್ದೀರಾ?

3 ಬಿ ಎ ಸ್ಟ್ರಾಂಗ್ ವುಮನ್ ಸೊ ದಟ್ ಯುವರ್ ಡಾಟರ್ ವಿಲ್ ನೊ ಹೌ ಟು ಬಿಕಮ್ ಒನ್ ಅಂಡ್ ಯುವರ್ ಸನ್ ವಿಲ್ ನೊ ವಾಟ್ ಟು ಲುಕ್ ಫಾರ್ ಇನ್ ಅ ವುಮನ್.

3 ಸಮಸ್ಯೆಗಳನ್ನು ತಬ್ಬಿಕೊಳ್ಳಬೇಕು ಎಂದು ನಮ್ಮ ಗುರುಗಳು ಹೇಳಿದ್ದಾರೆ ಎಂದು ಹೆಂಡತಿಗೆ ಹೇಳಿದರೆ ಆಕೆ ಬಂದು ನನ್ನನ್ನೇ ತಬ್ಬಿಕೊಳ್ಳುವುದೆ?

3 ಕನ್ನಡಿಯನ್ನು ಕಂಡು ಹಿಡಿದ ವ್ಯಕ್ತಿ ಯಾರು ಗೊತ್ತೆ? 'ನಾನು ಹೇಗೆ ಕಾಣುತ್ತೇನೆ?' ಎಂದು ಪದೇ ಪದೇ ಕೇಳುತ್ತಿದ್ದ ಹೆಂಡತಿಯ ಪತಿ.

3 ಮಹಿಳೆಯರ ಜತೆ ವಾದಿಸಲು ಎರಡು ಉತ್ತಮ ಮಾರ್ಗಗಳಿವೆ. ಆದರೆ ಎರಡೂ ಕೆಲಸ ಮಾಡದು.

3 ಪ್ರತಿ ಯಶಸ್ವಿ ಗಂಡಸಿನ ಹಿಂದೆ ಚಕಿತಗೊಂಡ ಮಹಿಳೆಯೊಬ್ಬಳು ಇರುತ್ತಾಳೆ. ■

# ಶ್ರೀ ಟಿ ವಿ ಗುರೂಜಿ!

**♦ಸವಿತಾ ನಾಗೇಶ್**

ಎಲ್ಲ ಒಳ್ಳೆಯವರಲ್ಲೂ ಒಂದು ಕೆಟ್ಟ ಬುದ್ಧಿ ಇದ್ದೇಯಿರುತ್ತೆ, ಎಲ್ಲ ಕೆಟ್ಟವರಲ್ಲೂ ಒಂದು ಒಳ್ಳೇ ಬುದ್ಧಿ ಇರುತ್ತೆ ಅನ್ನೋದು ಎಲ್ಲರಿಗೂ ತಿಳಿದ ವಿಷಯ. ಜೀವಸಂಕುಲ ಎಂದ್ಮೇಲೆ ರೋಗ ರುಜಿನಗಳು, ನೋವು ದುಃಖಗಳು, ತೊಂದರೆ ತಾಪತ್ರಯಗಳು ಇದ್ದೇಯಿರುತ್ತದೆ. ಅದರಲ್ಲೂ ಸಂಗಜೀವಿ ಮಾನವನಿಗೆ ಬಂದಾಗ ದುಃಖ ತೋಡಿಕೊಳ್ಳಲು ಆತ್ಮೀಯರದೋ ಸ್ನೇಹಸಂಕುಲದ್ದೋ ಸಾಂತ್ವನ ಬೇಕೆನಿಸುತ್ತದೆ. ಅದು ಯಾರೇ ಆಗಿರಬಹುದು. ಅಪ್ಪ, ಅಮ್ಮ, ಸೋದರ; ಸೋದರಿ ಹೀಗೇ. ಕೆಲವರುಗಳಿಗಂತೂ ಜ್ಯೋತಿಷಿಗಳು ಎಂದರೆ ಎಲ್ಲಿಲ್ಲದ ಭಕ್ತಿ ಗೌರವ. ಹೆಚ್ಚಾಗಿ ನಂಬಿಕೆ! ನಿಜ ಜ್ಞಾನಿಗಳ ಬಗ್ಗೆ ನನ್ನದಿಲ್ಲಿ ಚಕಾರವೇನಿಲ್ಲ! ಗುರುವೆಂದು ಮುಖವಾಡ ಹಾಕಿ ಸಕಲಾಲಕೃಂತರಾಗಿ ಟಿವಿ ಪರದೆ ಮೇಲೆ ಬಂದು ಮುಗ್ಧ ಮನಸುಗಳೊಡನೆ ಚಲ್ಲಾಟವಾಡೋ ಇವರುಗಳನ್ನ ನೋಡಿದರೆ ಬೇಜಾರಾಗುತ್ತದೆ. ಆರೋಗ್ಯ ಸಮಸ್ಯೆಗಳಿಗೆ ನುರಿತ ವೈದ್ಯರಿರುತ್ತಾರೆ, ಆಸ್ತಿ ಅಂತಸ್ತುಗಳಿಗೆ ಲಾಯರ್ರು ಕೋರ್ಟ್‌ಗಳಿರುತ್ತವೆ, ಮದುವೆಗಳಿಗೆ ಮ್ಯಾಟ್ರಿಮೋನಿಯಲ್‌ಗಳಿರುತ್ತವೆ...ಹೀಗೇ ಒಂದೊಂದಕ್ಕೂ ಒಬ್ಬೊಬ್ಬರಿರುತ್ತಾರೆ. ಇಷ್ಟು ಮುಂದುವರೆದ ದಿನಗಳಲ್ಲೂ ಜನ ಈ ತರನಾದ ಭವಿಷ್ಯವನ್ನು ನಂಬಿ ತಮ್ಮ ಜೀವನವನ್ನ ಸಾಗಿಸ್ತಾರೆ ಎಂದರೆ ಅವರಲ್ಲಿ ಎಷ್ಟು ಮುಗ್ಧತೆ ನಂಬಿಕೆಗಳಿವೆ ಎನಿಸುತ್ತೆ. ಕಷ್ಟ ಬಂದಾಗ ಆಸರೆಗೊಂದು ಹುಲ್ಲುಕಡ್ಡಿ ಸಿಕ್ಕರೂ ಎಷ್ಟೋ ಧೈರ್ಯ ಇನ್ನೆಷ್ಟೋ ಆತ್ಮವಿಶ್ವಾಸ. ಇಂಥವರ ನಂಬುಗೆಗಳೊಂದಿಗೆ ಆಟವಾಡೋದು ಅದೆಷ್ಟು ಸಮಂಜಸ?

ಆಧ್ಯಾತ್ಮ ಅಥವಾ ಧಾರ್ಮಿಕ ಮಾರ್ಗಗಳೆಂದರೆ ಧನಾತ್ಮಕ ಶಕ್ತಿ ಚಿಂತನೆಗಳು. ಅದನ್ನನುಸರಿಸೋ ಗುರುಗಳಲ್ಲಿ ಮನದ ನಿವೇದನೆ ಮಾಡಿಕೊಂಡಾಗ ಸಿಗುವ ಸುಖ! ಸಾಂತ್ವಾನ ಬದುಕಲೆಷ್ಟೋ ಬಲ ಕೊಡುತ್ತದೆ. ಆ ಕ್ಷಣದಲ್ಲಿ ಅವರು ನೀಡುವ ಸಮಾಧಾನದ ಮಾತುಗಳಲ್ಲಿರೋ ಆತ್ಮವಿಶ್ವಾಸ ಹೇಗಿರುತ್ತದೆಯೆಂದರೆ ಗುರುಗಳು ಹೇಳಿದ ಇಂತಿಷ್ಟು ಮಾತುಗಳನ್ನು ಕೇಳಿದರೆ ನಮ್ಮ ಕಷ್ಟವೆಲ್ಲಾ ನೀಗೇ ಹೋಯಿತು ಎಂದು ಕೊಂಡುಬಿಡುತ್ತಾರೆ. ಅದನ್ನೇ ನಂಬಿ ಫೋನಿಡುತ್ತಾರೆ. ನಂತರದಲ್ಲಿ ಅವರ್ಯಾರೋ ಇವರ್ಯಾರೋ. ಇನ್ನು ಗುರುಗಳು ಹೋಗೋ ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಇವರ ಕಣ್ಣಿಗೂ ಸಿಗದಷ್ಟು ದೂರ! ಇನ್ನು ಅವರನ್ನು ಭೇಟಿ ಮಾಡಿ ಏಕೆ ಹೀಗಾಯ್ತು ಎಂದು ಕೇಳೋದಂತೂ ಗಗನಕುಸುಮವೇ ಆಗಿಹೋಗುತ್ತೆ. ಸರಿ ವೈಯುಕ್ತಿಕವಾಗಿ ಕೇಳಲು ಹೋಗೋಣವೆಂದರೆ ಒಂದು



ಪ್ರಶ್ನೆಗೆ ದುಬಾರಿ ಮೊತ್ತವನ್ನು ಕೇಳುವ ಪರಿ! ಪಾಪ ಬಡ ಮುಗ್ಧ ಜನರ ಮನಸುಗಳೊಟ್ಟಿಗೆ ಅವರ ಭಾವನೆಗಳೊಟ್ಟಿಗೆ ಆಡುವ ಇಂಥವರಿಗೇನನ್ನಬೇಕು!

ಘಟನೆ: ಹಲೋ ಹಲೋ ನಮಸ್ಕಾರಾಮಾ...ನಮಸ್ಕಾರ, ಏನು ನಿಮ್ಮ ಹೆಸರು, ಎಲ್ಲಿಂದ ಕರೆ ಮಾಡ್ತಿದೀರ? ಹೆಸರು ಊರು ಬೇಡಾ ಮೇಡಂ. ಸರಿ ಗುರುಗಳ ಹತ್ತಿರ ಮಾತಾಡಿ....ಗುರುಗಳೇ ನಿಮಗೆ ಕೋಟಿ ಕೋಟಿ ನಮಸ್ಕಾರ (ಫೋನು ಮಾಡೋರೆಲ್ಲಾ ಇಷ್ಟು ಕೋಟಿ ಕೋಟಿ ನಮಸ್ಕಾರಗಳನ್ನ ಕೊಟ್ರೆ ಆ ಗುರುಗಳು ಎಲ್ತಾನೆ ಇಟ್ಕೊಂಡಾರು, ಆ ಪಂಚೆಶಲ್ಯದಲ್ಲಿ ಜೇಬೂ ಇರೋಲ್ಲ) ಹೇಳ್ತಾಯಿ ಎಂದು ಗುರುಗಳು ಅಂದದ್ದೇ ತಡ ಅವಳ ದುಃಖದ ಕಟ್ಟೆ ಒಡೆದೇ ಬಿಡುತ್ತದೆ. ಒಂದೇ ಸಮ ತನ್ನ ಹೊಟ್ಟೆ ಸಂಕಟವನ್ನ ಜೋರಾಗಿ ಅಳುತ್ತ ಹೇಳಲಾರಂಭಿಸುತ್ತಾಳೆ. ಅಳುವಿನಿಂದಾಗಿ ಅವಳ ಸಂಕಟವೇನೆಂಬುದೇ ತಿಳಿಯದಷ್ಟು, ಪದಗಳು ಗೋಚರವಾಗದಷ್ಟು ವ್ಯಥೆ ತುಂಬಿರುತ್ತೆ. ಆ ಕ್ಷಣಕ್ಕೆ ಇಂಥವರಿಂದ ಸಾಂತ್ವನ ದೊರೆಯುತ್ತೆ ಖಡಾಖಂಡಿತವಾಗಿ! ಆದರಿದು ಶಾಶ್ವತ ಪರಿಹಾರವಂತೂ ಅಲ್ಲವೆಂಬುದು ಆ ಮುಗ್ಧ ಜನರ ಅರಿವೆಗೆ ಬಾರದಿರುವುದೇ ವಿಷಾದನೀಯ ! ಕೆಲವೊಮ್ಮೆ ಪರಿಹಾರ ಸಿಕ್ಕರೂ ಸಿಗಬಹುದು....ಕಾಕತಾಳೀಯವೆಂಬಂತೆ, ಇಲ್ಲವೇ ಅವರ ಅದೃಷ್ಟದ ಮೇಲೆ ಅವಲಂಬಿತವಾಗಿರುತ್ತದೆ.

ಮದುವೆಯಾಗಿ 25 ವರುಷವಾಗಿದೆ ಗುರುಗಳೆ ಇತ್ತೀಚೆಗೆ ನನ್ನ ಗಂಡ ನನ್ನೊಂದಿಗೆ ಸರಿಯಾಗಿ ಬಿಹೇವ್ ಮಾಡ್ತಿಲ್ಲ, ಯಾಕೋ ನನಗೆ ಡೌಟ್ ಆಗ್ತಿದೆ ಗುರುಗಳೆ ಬೇರೆ ಯಾರ ಸಂಗವಾದರೂ ಮಾಡಿದ್ದಾರಾ? ಎಂದು ಇಂಥ ಪ್ರಶ್ನೆ ಬಂದಾಗ ಗುರೂಜಿಯವರು ಕೂಡ ಕೊಂಚ ವಿಚಲಿತರಾಗುತ್ತಾರೆ. ತಾಯಿ ಇಷ್ಟು ವರುಷ ದಾಂಪತ್ಯ ಮಾಡಿರುವ ನೀವು ಈ ಕಾಲದಲ್ಲಿ ಗಂಡನ ಮೇಲೆ ಅನುಮಾನ ಪಡೋದು ಸಮಂಜಸವಲ್ಲಮ್ಮ. ಬೆಳೆದ ಮಕ್ಕಳು ಇರ್‍ತಾರೆ. ಈಗ ನಿನ್ನ ಸ್ವಂತ ಗಂಡನ ಮೇಲೆ ಅನುಮಾನಬೇಡ ತಾಯಿ. ನಿನ್ನ ಸ್ವರತರಂಗದ ಪ್ರಕಾರ ಆ ತರನಾದ ತೊಂದರೆಯೇನಿಲ್ಲ. ಆದರೂ ನಿನ್ನ ಮನಸಿನ ಸಮಾಧಾನಕ್ಕೆ ನಿಮ್ಮ ಮನೆದೇವರ ಮುಂದೆ 11 ದಿನ ತಪ್ಪದೇ 2 ಲೋಟ ಹಾಲು ಇಟ್ಟು ಶುಭಸಾಯಂಕಾಲ ಒಂದು ಲೋಟ ಹಾಲನ್ನು ನೀನು ನಿನ್ನ ಗಂಡ ಹಂಚಿಕೊಂಡು ಕುಡಿಯಿರಿ ಇನ್ನೊಂದು ಲೋಟ ಹಾಲನ್ನು ಕಪ್ಪು ಬಣ್ಣದ ನಾಯಿಗೆ ಹಾಕಿ ನಮಸ್ಕರಿಸಿ, ಎಲ್ಲಾ ಒಳ್ಳೇದಾಗುತ್ತೆ. ಅಷ್ಟರಲ್ಲಿ ಫೋನ್ ಕಟ್ ಆಗೇ ಹೋಗಿರುತ್ತೆ.

ಗುರೂಜಿ 2 ವರುಷದಿಂದ ನಿಮಗೆ ಫೋನ್ ಮಾಡ್ತಿರೋದು ಇವತ್ತು ನಿಮ್ಮ ಫೋನ್ ಸಿಕ್ಕಿದ್ದು ನನ್ನ ಪುಣ್ಯ ಗುರೂಜಿ ನನ್ನ ಪುಣ್ಯ! ನನ್ನ ಮಗ ನಿಮ್ಮ ಫೋಟೋನ ಪ್ರಿಂಟ್ ಹಾಕ್ಸಿ ನನ್ನ ಹುಟ್ಟಿದ ಹಬ್ಬಕ್ಕೆ ಗಿಫ್ಟ್ ಕೊಟ್ಟ. ನಿಮಗೆ ದಿನಾ ತಪ್ಪದೆ ಪೂಜೆ ಮಾಡಿ ನಮಸ್ಕಾರ ಮಾಡ್ತೀನಿ. ಈ ರೀತಿ ಮಾಡೋದು ನನ್ನ ಗಂಡನಿಗೆ ಇಷ್ಟಾನೇಯಿಲ್ಲ. ನನಗೋ ನಿಮ್ಮ ಫೋಟೋ ತೆಗೆಯೋಕೆ ಮನಸಿಲ್ಲ. ಮನೆಯಲ್ಲಿ ನೆಮ್ಮದೀನೇ ಇಲ್ಲವಾಗಿದೆ ಗುರೂಜಿ! ತಾಯಿ ಬೇಸರಿಸಿಕೊಳ್ಳಬೇಡ...ಈಗ ನಿನ್ನ ಗಂಡನಿಗೆ ಅಪ್ಪಾವ್ರು ಬೆನ್ನ ಮೇಲೆ ಬಂದಿದ್ದಾರೆ ಅದಕ್ಕೆ ಹೀಗೆಲ್ಲಾ ಮಾಡ್ತಿದ್ದಾರೆ. ದಯಮಾಡಿ ಫೋನ್ ಮಾಡಿ ನನ್ನ ಹತ್ರ ಕರ್‍ಕೊಂಡ್ಬಾಮ್ಮಾ ಎಲ್ಲಾ ಸರಿ ಮಾಡ್ತೀನಿ.....ಫೋನ್ ಕಟ್ ಆಗುತ್ತೆ.

ಮದುವೆ ಆಗಿ 14 ವರುಷವಾಗಿದೆ ಗುರೂಜಿ ಮಕ್ಕಳೇ ಆಗಿಲ್ಲ. ಎಲ್ಲ ಡಾಕ್ಟರಿಗೂ ತೋರಿಸಿದ್ದಾಯಿತು. ವ್ರತ ಹರಕೆಗಳೂ ಆಯಿತು ಆದರೂ ಮಕ್ಕಳಾಗಿಲ್ಲ, ಅದೇ ದೊಡ್ಡ ಚಿಂತೆಯಾಗಿದೆ. ತಾಯಿ ನಿನ್ನ ಸ್ವರತರಂಗದ ಪ್ರಕಾರ ಯಾವ ದೋಷವೂ ಇಲ್ಲ. ನೀವು ಗಂಡಾ ಹೆಂಡತಿ ಚೆನ್ನಾಗಿದ್ದೀರಾವ್ಮಾ...ಹೌದು ಗುರುಗಳೆ ಚೆನ್ನಾಗಿದ್ದೀವಿ...ಹಾಗಲ್ಲಮ್ಮಾ ನಾ ಕೇಳ್ತಿರೋದು....ಅರ್ಥ ಆಯ್ತು ಅಂದುಕೊಂಡೆ...ಗಂಡ ಹೆಂಡತಿ ಸದಾ ನಗುನಗುತ್ತಾ ಅನ್ಯೋನ್ಯವಾಗಿದ್ದರೆ ಖಂಡಿತಾ ಮಕ್ಕಳಾಗುತ್ತೆ. ಇನ್ನೆರಡು ತಿಂಗಳು ಕಳೀಲಿ ನೋಡು ಎಂಥಾ ಅದೃಷ್ಟ ನಿನಗೊಲಿಯುತ್ತೆ. ಶುಭ ಸೂಚನೆಯಿದೆ. ಶುಭವಾಗಲಿ ಒಳ್ಳೇದಾಗಲಿ.

ಒಟ್ಟಿನಲ್ಲಿ ಇಂಥಾ ಗುರುಗಳ ಮೊರೆ ಹೋದದ್ದಕ್ಕೆ ಮುಗ್ಧಜನರ ಭಾವನೆಗಳೊಟ್ಟಿಗೆ ಆಟವಾಡಿ ಅವರನ್ನ ನಂಬಿಸಿ ಅವರಲ್ಲಿ ದುಃಖವನ್ನು ಉಳಿಸಿ, ಮುಂದಿನ ದಿನಗಳಲ್ಲಿ ಗುರುಗಳ ಪರಿಹಾರಕ್ಕಾಗಿ ಕಾದು ಕುಳಿತಿರುತ್ತಾರೆ......ಸಮಸ್ಯೆ ಬಗೆಹರಿಯೋಲ್ಲ! ಇವರ ಕೊರಗು ನೀಗೋಲ್ಲ!

■

---

ವ್ಯಂಗ್ಯಚಿತ್ರ ಕಲಾವಿದೆ

# ವಸುಧಾ ಹೆಗಡೆ

(ಕಾವ್ಯ ನಾಮ : ವಸುಧಾ ಶೀಗೇಹಳ್ಳಿ)

ವೃತ್ತಿಯಿಂದ ಶಿಕ್ಷಕಿಯಾಗಿರುವ ವಸುಧಾ ಹೆಗಡೆ ಅವರು ಚಿಕ್ಕಂದಿನಿಂದಲೂ ವ್ಯಂಗ್ಯಚಿತ್ರಕಲೆಯಲ್ಲಿ ಆಸಕ್ತಿ ಬೆಳಸಿಕೊಂಡಿದ್ದರು. ೨೦೦೩ರ ಕರ್ಮವೀರ ದೀಪಾವಳಿ ವಿಶೇಷಾಂಕದಲ್ಲಿ ಇವರ ವ್ಯಂಗ್ಯಚಿತ್ರ ಪ್ರಥಮವಾಗಿ ಪ್ರಕಟವಾಯಿತು. ಅಲ್ಲಿಂದ ಮುಂದೆ ಇವರು ನಿರಂತರ ವ್ಯಂಗ್ಯಚಿತ್ರಗಳನ್ನು ರಚಿಸುತ್ತಾ ಬಂದಿದ್ದಾರೆ. ತರಂಗ ಪತ್ರಿಕೆಯವರು ಇವರನ್ನು ಗುರುತಿಸಿ ಪ್ರೋತ್ಸಾಹಿಸಿದ್ದನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಇತ್ತೀಚೆಗೆ ಇವರು ಉತ್ತರ ಕನ್ನಡ ಜಿಲ್ಲಾ ವ್ಯಂಗ್ಯಚಿತ್ರ ಪ್ರದರ್ಶನದಲ್ಲಿ ಭಾಗವಹಿಸಿ ತಮ್ಮ ವ್ಯಂಗ್ಯಚಿತ್ರಗಳನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದಾರೆ. ತಮ್ಮ ವ್ಯಂಗ್ಯಚಿತ್ರಕಲೆಗೆ ಎನ್.ಆರ್. ಹೆಗಡೆ ಬೊಮ್ನಳ್ಳಿ, ಇವರಿಂದಲೇ ಪ್ರೇರೇಪಿತರಾಗಿ ಪ್ರೋತ್ಸಾಹ ಗಳಿಸಿಕೊಂಡು ವ್ಯಂಗ್ಯಚಿತ್ರ ರಚಿಸಿಲು ಪ್ರಾರಂಭಿಸಿ ಇದೀಗ ಶ್ರೀಧರ ಹುಂಚ, ಏಕನಾಥ್ ಬೊಂಗಾಳೆ ಮುಂತಾದವರಿಂದ ಸ್ಫೂರ್ತಿ ಪಡೆಯುತ್ತಿದ್ದಾರೆ. ಇವರಿಗೆ ಅಪರಂಜಿ ಶುಭ ಹಾರೈಸುತ್ತದೆ.



# ಸಿನಿಕರೊಡನೆ ಶುಭಸಂಜೆ!

**♦ಜಯಶ್ರೀ ದೇಶಪಾಂಡೆ**

ಆಕೆ ಇರ್ತಾ ಇದ್ದದ್ದು ನಮ್ಮ ಬಡಾವಣೆಯದೇ ಇನ್ನೊಂದು ರಸ್ತೆಯಲ್ಲಿ. ಹೀಗೇ ಒಂದಿಷ್ಟು ಪರಿಚಯ. ಒಮ್ಮೆ ಅಕಸ್ಮಾತ್  ದಾರಿಯಲ್ಲಿ ಸಿಕ್ಕ ಆಕೆಯನ್ನು ನಗುತ್ತ ಕುಶಲೋಪರಿ ವಿಚಾರಿಸಿದೆ  "ಏನು ಮಾವಶೀ? ಹೇಗಿದ್ದೀರಿ? ಸಂಜೆಯ ಕಾಫಿ ಆಯಿತಾ"?

" ಅಯ್ಯೋ ಎಲ್ಲೀದ್ರೀ ಆ ಸುಡುಗಾಡು ಮುಸುಡಿಯವ ಇವತ್ತು ಹಾಲೇ ತಂದ್ ಕೊಡ್ಲಿಲ್ಲ. ಮುಂಜಾನೆ ಏನೋ ನಿನ್ನೆ ಉಳ್ದಿದ್ದರೊಳಗೆ ಮಾಡ್ಕೊಂಡು ಕುಡಿದ್ವಿ, ಅವೂ ಮುಗದ್ವು.. ಈಗ ಹಾಲು ತರಲಿಕ್ಕೆ ಹೊರಟೀನಿ..ಹಾಲು ಸಿಕ್ರೆ ಕಾಫಿ, ಇಲ್ಲಾಂದ್ರ ಗೋಓಓಓವಿಂದ" ಅಂತ ಸಿಡಕ್ಕೆಂದಳು. ಕಣ್ಣು ಅಗಲವಾಗಿ, ಮೂಗಿನ ಹೊರಳೆಗಳು ಹಿಗ್ಗಿ  ಮುಖದಲ್ಲಿ ನಾನೇ ಅವಳಿಗೆ ಹಾಲು ಬರೋದನ್ನು ತಪ್ಪಿಸಿ ಕಾಫಿ ಇಲ್ಲದಂತೆ ಮಾಡಿ ಶಿಕ್ಷೆ ಕೊಟ್ಟಂಥ ನಮೂನೆಯ  ಭಾವ ಧಾರಾಳ ಮೂಡಿತ್ತು!

"ಅರೇ..  ನಾ ಕೇಳಿದ್ದೇನು? ಬರೀ ಒಂದು ಸೀದಾ ಸಿಂಪಲ್ ಪ್ರಶ್ನೆ. ಅದಕ್ಕೇ ಇಷ್ಟುದ್ದ ಕೊರೆತವಾ?" ಅನಿಸಿ

"ಆತು ಬಿಡ್ರಿ, ಬರ್ತೀನಿ" ಅಂದೆ.

ಜಗತ್ತು ವಿಚಿತ್ರವೋ ಸಚಿತ್ರವೋ ಗೊತ್ತಿಲ್ಲ ಆದರೆ ಇಂಥ ಸಿನಿಕರು ಮಾತ್ರ ಸುತ್ತ ಮುತ್ತ ಸಿಕ್ಕೇ ಸಿಗ್ತಾರೆ. ಅಲ್ಲ, ಅವಳು ನನ್ನ ಹಾಗೇನೇ ಒಂದೇ ಮಾತಿನಲ್ಲಿ ಸರಳವಾಗಿ " ಇಲ್ಲಮ್ಮ ಹಾಲು ಮುಗ್ದಿತ್ತು, ತರೋಕೆ ಹೊರಟಿದ್ದೆ " ಅಂದಿದ್ದರೂ ಅದರ ಸೂಚ್ಯಾರ್ಥ ನನಗೆ ತಿಳಿದೇ ತಿಳೀತಿತ್ತು.ಕಾಫಿ ಆಗಿಲ್ಲ ಅಂತ. ಅಥವಾ ' ಓ.. ನೀನೂ ಸಿಕ್ಕೆಯಲ್ಲಾ, ನಡೀ ಇಲ್ಲೇ ಹಾಲು ತೊಗೊಂಡು ನಮ್ಮನೆಗೆ ಹೋಗೋಣ, ಕಾಫಿ ಮಾಡ್ತೀನಿ ಕುಡಿದು ಹೋಗು ಅಂದಿದ್ದರಂತೂ 'ಸೋನೇಪೇ ಸುಹಾಗಾ' ಆಗ್ತಿತ್ತು.



ಮಸಲಾ ಆಕೆಗೆ ಹಾಲಿನ ಮೇಲೆ ಸಿಟ್ಟೋ? ಹಾಲು ತಾರದ 'ಹಾಲಾಡಿಗ' ಅಥವಾ ಮಿಲ್ಕ್ ಸಪ್ಲೈಯರ್ ಮೇಲೆ ಸಿಟ್ಟೋ? ಅದೂ ಇಲ್ಲಾಂದ್ರೆ ಹೊತ್ತಲ್ಲದ ಹೊತ್ತಿನಲ್ಲಿ ಕಾಫಿ ಇಲ್ಲದೆ ಒದ್ದಾಡುವ ಅವಳನ್ನು ನಾನು ಅದೇ ಮಾತೆತ್ತಿ 'ಕುಡಿದಿರಾ!' ಅಂದಿದ್ದು  ಸಿಟ್ಟೋ? ಅಲ್ಲ ನನಗೇನು ಗೊತ್ತಿತ್ತು ಅವಳದು ಬೆಳಗಿನಿಂದ ಕಾಫಿಯ ಏಕಾದಶಿ ನಡೆದಿದೆ  ಅಂತ?

ಮಾವಶಿಯ ಸುಡುಗಾಡು ಮುಖದ ಹಾಲಿನವ ನಾಳೆಯಾದರೂ ಸರಿಯಾಗಿ ಬರಲಿ ಅಂತ ಹಾರೈಸಿ,  ನಾನು

ಅವಳನ್ನು ಯಾವತ್ತೂ ಈ ಪ್ರಶ್ನೆ ಇನ್ನೊಂದು ಸಲ ಕೇಳಬಾರದು ಅಂತ ಪ್ರತಿಜ್ಞೆಗೈದು ಅಲ್ಲಿಂದ ಜಾಗ ಖಾಲಿ ಮಾಡಿದೆ.

ಏತಿ ಅಂದಾಗ ಪ್ರೇತಿ ಅನ್ನದಿದ್ದರೆ ಅವರ ಹೆಸರು ಬದಲಿಸಬೇಕು ಎನ್ನುವ ಕೆಟಗರಿಯವರು ಅಲ್ಲಿ ಇಲ್ಲಿ, ಎತ್ತೆತ್ತಲೂ ಎದುರಾಗ್ತಾರೆ ಅನ್ನೋದು ನಿಜವಾ ಸುಳ್ಳಾ ಹೇಳಿ... ಸೀದಾ ಸಾದಾ ಮಾತಾಡುವುದು ಅವರ ಜಾಯಮಾನಕ್ಕೇ ಗೊತ್ತಿಲ್ಲ. ಇಡೀ ಪ್ರಪಂಚವೇ ತಪ್ಪು, ನಡೆಯೋದ್ಯಾವುದೂ ಸರಿಯಿಲ್ಲ, ಎಲ್ಲಾನೂ ತಾನು ಹೇಳಿದಂತೆ ಬದಲಿಸಿದ್ರೆ ಮಾತ್ರ ಸರಿಯಾಗುತ್ತೆ..ಎಟ್ಸೆಟ್ರಾ ಎಟ್ಸೆಟ್ರಾ.. ಮಾತಷ್ಟೇ ಅಲ್ಲ, ಪ್ರಪಂಚ ಬದಲಿಸುವ ಘನಕಾರ್ಯವೂ ತಮ್ಮ ತಲೆ ಮೇಲೆ ಬಿದ್ದ ಛಾಪನ್ನು ಮುಖದಲ್ಲಿ ಹೊತ್ತು ತಿರುಗ್ತಾರೆ. ಒಟ್ಟಿನಲ್ಲಿ ಉಲ್ಟಾ ಥಿಂಕರ್ಸ್ ಇವರು,

ಇದ್ದೀತು ಬಿಡಿ, ಆದರೆ ಏನು?

ಅವರು ಹೇಳಿದರು ಅಂದಾಕ್ಷಣ ಪ್ರಪಂಚ ಹಾಗೆ ಕೇಳುತ್ತಾ? ಕೇಳಬೇಕಾ? ಪಕ್ಕಾ ಸಿನಿಕ ಶಿಖಾಮಣಿಗಳ ಕಂತೆ ಪುರಾಣಕ್ಕೆ ಗಾಳಿ ಬೀಸಬೇಕಾ?

ಒಂದು ಸಾಯಂಕಾಲ ಅದಾವ ಮುಹೂರ್ತ ಒದಗಿ ಬಂದಿತ್ತೋ ಮನೆಬಾಗಿಲಲ್ಲೇ ಪ್ರತ್ಯಕ್ಷನಾಗಿದ್ದ ಸೋದರತ್ತೆಯ ನಾದಿನಿಯ ಮಗ ಬಂಡೂ, ಒಬ್ಬನೇ ಅಲ್ಲ, ಅವನ ಜೊತೆ ಇನ್ನೊಬ್ಬಾತ ಬಾಳೂ..ಅವನೂ ಈ ಸ್ಪೆಶಲ್ ಕೆಟಗರಿಯವನೇ. ಸಹಿಸಿಕೊಳ್ಳಲೇಬೇಕಲ್ಲ? ದೂರದ ನೆಂಟರು!

" ಎಲ್ಲಾ ಕಲ್ಯಾಣಮಂಟಪಗಳನ್ನು ಮೊದಲು ಮುಚ್ಚಿ ಬೀಗ ಜಡೀಬೇಕು" .ಅಂದ ಬಂಡೂ..'ಹೌದೌದು' ಎಂದು ಕೋರಸ್ ದನಿ ಕೊಟ್ಟ ಬಾಳೂ.

"ಯಾಕೆ ಮುಚ್ಚಬೇಕು ಕಲ್ಯಾಣ ಮಂಟಪಗಳನ್ನ? ಈಗ ಇದ್ದಕ್ಕಿದ್ದಂತೆ ಆ ಅಗತ್ಯ ಯಾಕೆ ಬಿತ್ತು? " ಅಂದೆ.

"ಯಾಕಂದ್ರೆ? ಜನಸಂಖ್ಯೆ ನೋಡ್ತಾ ಇಲ್ವಾ? ಹೇಗೆ ರಾಕೆಟ್ ಥರ ಏರ್ತಾ ಇದೆ. ಅದಕ್ಕೆ ಕಲ್ಯಾಣ ಮಂಟಪಗಳನ್ನು ಮುಚ್ಚೋದೊಂದೇ ಹಾದಿ!"

ನನ್ನ ನಗು ಅವರಿಗೆ ಕಾಣಬಾರದಲ್ಲ.. ಅದಕ್ಕೇ ಕೆಳಗೆ ಬಿದ್ದ ಏನೋ ಎತ್ತಿಕೊಂಡಂತೆ ನಟಿಸಿದೆ.

"ಅಂದರೆ, ಕಲ್ಯಾಣ ಮಂಟಪ ಮುಚ್ಚಿದರೆ ಜನ ಹೆರುವುದನ್ನು ಬಿಡ್ತಾರಾ?" ಅಂದೆ.

ಇಬ್ಬರೂ ಮುಖ ಮುಖ ನೋಡಿಕೊಂಡರು.

"ಅಲ್ಲ , ಎಷ್ಟು ಮದುವೆಗಳೋ ಅಷ್ಟು ಮಕ್ಕಳು ಮಾಡುವ ಲೈಸೆನ್ಸ್ ತಾನೇ? ಅದೇ ಕ್ಯಾನ್ಸಲ್ ಆದರೆ ಜನಸಂಖ್ಯೆ ತಾನಾಗೇ ಇಳಿಯುತ್ತೆ" ಬಾಳೂ ಉವಾಚ.

"ಹೋಗಲಿ ನಿಮ್ಮ ಮಾತೇ ಒಪ್ಪೋಣ, ಕಲ್ಯಾಣ ಮಂಟಪ ಇಲ್ಲ ಅಂದರೆ ಕೋರ್ಟ್ ಮದುವೆ, ರಿಜಿಸ್ಟ್ರಾರ್ ಆಫೀಸಿನ ಮದುವೆ, ಕುಬೂಲ್ ಕುಬೂಲ್ ಮದುವೆ, ರಿಂಗ್ ಎಕ್ಸ್ ಚೇಂಜ್ ಮದುವೆ ಎಲ್ಲ ಉಂಟಲ್ಲ..ಅದನ್ನೂ ಬಂದ್ ಮಾಡಿಸ್ತೀರಾ?"

ಇಬ್ಬರಿಗೂ ಕೋಪ ಬಂತು."ಅಲ್ಲ ನಾವು ದೇಶಕ್ಕೆ ಪ್ರಯೋಜನ ಆಗಲಿ ಅಂತ

ಎಷ್ಟೊಂದು ಯೋಚನೆ ಮಾಡಿ ಸಲಹೆ ಕೊಟ್ರೆ ಒಪ್ಪಲ್ಲ ನೋಡು. ಜನಕ್ಕೆ ಬುದ್ಧಿ ಇಲ್ಲ. ನಮ್ಮಂಥವರ ಮಾತು ಕೇಳಲ್ಲ. ಛೇ! ಈ ಜಗತ್ತೇ ಮೂರ್ಖರಿಂದ ತುಂಬಿದೆ."

"ವಂಶ ಮತ್ತೆ ಸಮಾಜ ಮುಂದುವರಿಯುವುದು ಹೇಗೆ? ಎಲ್ಲಾ ಮದುವೆ ಕ್ಯಾನ್ಸಲ್ ಮಾಡಿದರೆ?"

"ನಿನಗೆ ಗೊತ್ತಾಗಲ್ಲ... ಈಗಾಗಲೇ ವಂಶಗಳೂ ಸಮಾಜವೂ ವಿಪರೀತ ಮುಂದುವರೆದಿವೆ.. ಈಗ ಅದಕ್ಕೆ ಬ್ರೇಕ್ ಬೇಕಾಗಿದೆ ತಿಳ್ಕೋ" ಅಂದ ಬಂಡೂ.

ತಲೆ ಚಚ್ಚಿಕೊಂಡ್ರೆ ನನ್ನ ತಲೆಗೇ ಏಟು ಅಲ್ವಾ?

"ಹೋಗಲಿ ನಿಮ್ದೇ ಸರಿ, ಈಗ ಕಾಫಿ ಕುಡೀತೀರಾ ಮಾಡ್ತೀನಿ" ಅಂದೆ.

" ಏನೂ ಬೇಡ ಈ ಪ್ರಪಂಚ ಎಂದು ಸರಿಯಾಗುತ್ತೋ ಏನೋ.. ನಡಿಯೋ ಹೋಗೋಣ" ಅಂದ ಬಾಳೂ.

ಇಬ್ಬರೂ ಎದ್ದು ಬಾಗಿಲು ದಾಟಿದರು...

ಹಿಂದಿನಿಂದ ಕೂಗಿದೆ, "ನಿಮ್ಮಿಬ್ರಿಗೂ ಹೆಣ್ಣು ಸಿಕ್ಕು ಮದುವೆ ಗೊತ್ತಾದರೆ ಹೇಳಿ ನಾನೇ ಒಳ್ಳೆಯ ಕಲ್ಯಾಣ ಮಂಟಪ ಫಿಕ್ಸ್ ಮಾಡಿಸಿ ಕೊಡ್ತೀನಿ. ಆಗ ಪ್ರಪಂಚ ಸರಿಹೋಗುತ್ತೆ" ಅಂದು,

'ನಿಮ್ಮದು'

ಅಂತ ಮನಸ್ಸಿನಲ್ಲೇ ಹೇಳಿಕೊಂಡೆ!!

(ಮ. ಮಾ. ಸಿನಿಕರು ಇಷ್ಟ್ಯಾಕೆ ಸಿ..ನಿ..ಕರಾಗಿರ್ತಾರೆ ಅಂತ ನಿಮಗೇನಾದರೂ ಗೊತ್ತಾ?)

■

---

# ಕಾದಂಬರಿ ಉಪಯೋಗ

ಮದುವೆಯಾದ ಮೊದಲ ವರ್ಷ ಗೌರೀ ಹಬ್ಬದ ದಿನ ಹೆಣ್ಣುಮಕ್ಕಳು ಹದಿನಾರು ಜೊತೆ ಮೊರದ ಬಾಗಿನ ಕೊಡುತ್ತಾರೆ. ನಾನು ಈ ಬಾರಿ ಇಪ್ಪತ್ನಾಲ್ಕು ಜೊತೆ ಹಂಚಿದೆ. ಪ್ರಕಾಶಕರು ಕಾಂಪ್ಲಿಮೆಂಟರಿಯಾಗಿ ಕೊಟ್ಟ ಕಾದಂಬರಿ ಪ್ರತಿ ಒಂದೊಂದನ್ನು ಕುಪ್ಪಸದ ಕಣಕ್ಕೆ ಬದಲಾಗಿ ಮೊರದೊಳಗಿಟ್ಟೆ. ಇಪ್ಪತ್ನಾಲ್ಕು ಸಂಸಾರದವರು ಓದಿ ಅವರ ನೆಂಟರಿಗೆ, ಗೆಳೆಯರಿಗೆ ಹೇಳಿ ಪ್ರಶಂಶಿಸಿ, ಪ್ರಚಾರ ಮಾಡದೇ ಇದ್ದಾರೇ ಎಂಬ ಹೆಮ್ಮೆಯಿಂದ ಓಡಾಡಿದೆ. ಪತ್ರಿಕಾ ಪ್ರತಿನಿಧಿಗಳ ಆಕಾಶವಾಣಿಯವರ ಸಂದರ್ಶನಕ್ಕಾಗಿ ಕಾದು ಕುಳಿತೆ. ಈಗಲಾದರೂ ನನ್ನ "ಬಿರುದು" ಬೆಳಗಲೇಬೇಕೆಂದು. ನವರಾತ್ರಿಗೆ ನಾನು ಮೊರದ ಬಾಗಿನ ಕೊಟ್ಟ ಮಾನಿನಿಯರೆಲ್ಲ ಆಹ್ವಾನ ಪತ್ರಿಕೆ ಕಳಿಸಿದ್ದರು. ಅವರು ಕೊಟ್ಟ ಕೊಬ್ಬರಿಸಕ್ರೆ, ಕಡ್ಲೆಹಿಟ್ಟಿನ ಪೊಟ್ಟಣಗಳನ್ನು ಕಟ್ಟಿದ್ದು ನನ್ನ ಕಾದಂಬರಿ ಹಾಳೆಗಳು. ಮೇಲು ಹೊದಿಕೆ ಕತ್ತರಿಸಿ ಗೊಂಬೆಮನೆ, ಪಾರ್ಕಿನ ಗೇಟು, ಬೆಟ್ಟಕ್ಕೆ ಮೆಟ್ಟಿಲು ಮಾಡಿದ್ದರು. ಅಷ್ಟೇ ಅಲ್ಲ "ಹಳಸಿದ ಕಾದಂಬರಿ ಬದಲಿಗೆ ಹೊಸದಾಗಿ ಘಮ್ಮಗೆ ಇಂಗು ತೆಂಗು ಕಲೆಸಿದ ಕೊಸಂಬರಿ ಕೊಟ್ಟರೆ ಎಷ್ಟೋ ಚನ್ನಾಗಿರುತ್ತೆ ಅಲ್ವೇನ್ರೀ ಎನ್ನುತ್ತಾ ಒಬ್ಬರಿಗೊಬ್ಬರು ಕಣ್ಣು ಹರಿಸಿ ನನ್ನೆದುರಿಗೇ ನಗುವುದೇ. ಹೀಗೂ ಉಂಟೇ.

***(ಟಿ. ಸುನಂದಮ್ಮ ಅವರ ಹೀಗೂ ಉಂಟೇ ಲೇಖನದಿಂದ )***

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ರೇಡಿಯೋ ನಾಟಕಗಳು | ಬೀಚಿ | 70 |
| ಮಾತ್ರೆಗಳು | ಬೀಚಿ | 125 |
| ತಿಂಮನ ತಲೆ | ಬೀಚಿ | 70 |
| ಹುಚ್ಚು ಹುರುಳು | ಬೀಚಿ | 50 |
| ಸತೀ ಸೂಳೆ | ಬೀಚಿ | 110 |
| ಖಾದಿ ಸೀರೆ | ಬೀಚಿ | 170 |
| ಸತ್ತವನು ಎದ್ದು ಬಂದಾಗ | ಬೀಚಿ | 60 |
| ಕಾಣದ ಸುಂದರಿ | ಬೀಚಿ | 150 |
| ಕಲ್ಲು ಹೇಳಿತು | ಬೀಚಿ | 150 |
| ತಿಂಮ ರಸಾಯನ | ಬೀಚಿ | 120 |
| ದೇವನ ಹೆಂಡ | ಬೀಚಿ | 170 |
| ಮೇಡಮ್ಮನ ಗಂಡ | ಬೀಚಿ | 110 |
| ಟೆಂಟ್ ಸಿನಿಮಾ | ಬೀಚಿ | 100 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 |
| ಮುರಿದ ಬೊಂಬೆ | ಬೀಚಿ | 100 |
| ಸೀತೂ ಮದುವೆ | ಬೀಚಿ | 80 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಲೇವಡಿ ಟ್ವಿಸ್ಟ್ | ಬೀಚಿ | 100 |
| ಬೆಳ್ಳಿ ಪತ್ರಗಳು | ಬೀಚಿ | 100 |
| ಮಹಾಯುದ್ಧ | ಬೀಚಿ | 100 |
| ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಕತ್ತಲಲ್ಲಿ ಬಂದವಳು | ಬೀಚಿ | 90 |
| ಮಾತನಾಡುವ ದೇವರುಗಳು | ಬೀಚಿ | 75 |
| ಮನೆತನದ ಗೌರವ | ಬೀಚಿ | 100 |
| ಗರತಿಯ ಗುಟ್ಟು | ಬೀಚಿ | 60 |
| ನಂಬರ್ ಐವತ್ತೈದು | ಬೀಚಿ | 60 |
| ಉತ್ತರ ಭೂಪ | ಬೀಚಿ | 250 |
| ನರಪ್ರಾಣಿ | ಬೀಚಿ | 75 |
| ನನ್ನ ಭಯಾಗ್ರಫಿ | ಬೀಚಿ | 270 |
| ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಅಂದನಾ ತಿಂಮ | ಬೀಚಿ | 125 |
| ಹೆಂಡತಿ ನಕ್ಕಾಗ | ಬೀಚಿ | 125 |
| ಕಮಲಮ್ಮನ ಕುಂಕುಮ ಬಲ | ಬೀಚಿ | 125 |

| | | |
|---|---|---|
| ಬೀchi ಬುಲ್ಲೆಟಿನ್ | ಕೇಶವ ರಾವ್ | 200 |
| ಬೀchi ತೋಚಿದ್ದು ಗೀಚಿದ್ದು | ಸ್ವಾಮಿ ರಾವ್ ಕುಲ್ಕರ್ಣಿ | 120 |
| ಬೊಂಬಾಟ್ ಬೀಚಿ | ಬೇಲೂರು ರಾಮಮೂರ್ತಿ | 60 |
| ವಾಗ್ಬಾಣಗಳು | ಗಂಗಾವತಿ ಪ್ರಾಣೇಶ್ | 50 |
| ನಗಿಸುವವನ ನೋವುಗಳು | ಗಂಗಾವತಿ ಪ್ರಾಣೇಶ್ | 50 |
| ಪೋಲೀಸ್ ಎನಕೌಂಟರ್ | Dr..ಡಿ.ವಿ.ಗುರುಪ್ರಸಾದ್ IPS | 200 |
| ಪೋಲೀಸ್ ಜೀವನದಲ್ಲಿ ಹಾಸ್ಯ | Dr.ಡಿ.ವಿ.ಗುರುಪ್ರಸಾದ್ IPS | 200 |
| ವಿಶ್ವಪರ್ಯಟನೆ | Dr.ಡಿ.ವಿ.ಗುರುಪ್ರಸಾದ್ IPS | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | Dr.ಡಿ.ವಿ.ಗುರುಪ್ರಸಾದ್ IPS | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**

# ನಮ್ಮ ಮಾಮಿ!

♦ನುಗ್ಗೆಹಳ್ಳಿ ಪಂಕಜ

"ನೋಡಿಲ್ಲಿ, ಒಂದು ಅಪರೂಪದ ಬಹುಮಾನವನ್ನ ನಿಂಗೆ ಕೊಡ್ತಿದೀನಿ– ಅದಕ್ಕಾಗಿ ನೀನು ನಂಗೆ ಅದೆಷ್ಟು ಥ್ಯಾಂಕ್ಸ್ ಹೇಳಿದ್ರೂ ಸಾಲದು,"– ಎಂದು ಅತ್ತೆಮ್ಮ ನುಡಿದ ಕೂಡಲೇ, ಒಂದೇ ಸಂಭ್ರಮದಿಂದ ಎದ್ದು ನಿಂತೆ–ಸೆಲ್ಯೂಟ್ ಮಾಡೋ ರೀತಿಯಲ್ಲಿ. ಸದಾ ಅವರ ಕತ್ತಿಗೇ ಅಂಟಿಕೊಂಡಿದ್ದ ಅರ್ಧಸೇರು ಚಿನ್ನದ ಮೂರೆಳೆ ಸರವನ್ನ ನನ್ನ ಕತ್ತಿಗೆ ಟ್ರಾನ್ಸ್ಫರ್ ಮಾಡ್ತಾರೇನೋ ಎಂಬ ಆಸೆ. . . . ಆದ್ರೆ, ಆಕೆ ನೀಡಿದ್ದು ಒಬ್ಬ ಬೃಹನ್ನಳೆಯನ್ನ!, ಅವಳನ್ನ ಹೊಗಳಿ ಅಟ್ಟದ ಮೇಲೆ ಕೂರಿಸಿ, ನನ್ನ ತಲೆಗೆ ಕಟ್ಟಿದರು! "ಹುಶಾರ್, ಅವಳನ್ನ ಚೆನ್ನಾಗಿ ನೋಡಿಕೋ; ನಾನೇ ಅವಳು ಅಂತ ಭಾವಿಸಿ, ತುಂಬಾ ಮರ್ಯಾದೇನ ಕೊಡು; ನಿನ್ನ ಗಂಡ ಆಗಾಗ ಟೂರ್ ಹೋಗ್ತಾನೇ ಇರ್ತಾನೆ, ಆಗ ಇವಳೇ ಕಾವಲು–ಯಾವ ದರೋಡೆಗಾರನಾದರೂ ಒಳಗೆ ಕಾಲಿಟ್ರೆ ಕೇಳು!. ಮತ್ತು. . . . ." –ಹೀಗೆ ಒಂದೇ ರಾಗದಲ್ಲಿ ಪಠಿಸುತ್ತಾ, ನಿಶ್ಕ್ರಮಣ!

ಇತ್ತ ಮಾಮಿ ಹಾಯಾಗಿ ತನ್ನದೇ ಮನೆ ಎಂಬಂತೆ ನಾಲಕ್ಕೂ ಕಡೆ ಸುತ್ತಾಡಿದರು! "ತುಂಬಾ ಚಿಕ್ಕ ಮನೆ"–ಗೊಣಗಿದರು–" ಇನ್ನೊಂದೆರಡು ಕೋಣೆ ಸೇರಿಸಿದ್ದರೆ ಏನಾಗ್ತಿತ್ತು? ನನ್ನ ಕೇಳಿದ್ರೆ, ಮನೇನ ಇನ್ನಾ ಚೆನ್ನಾಗಿ ಕಟ್ಟಬಹುದಿತ್ತು. . .ಯಾರು ಇಂಜನೀಯರ್?"

ನಮ್ಮ ಯಜಮಾನರು, ಎಂಬುದನ್ನ ತಿಳಿಸಲು ಹಿಂತೆಗೆದೆ. ರಾಂಕ್ ಸ್ಟೂಡೆಂಟ್ ಆದ ಅವರನ್ನೂ ಅಲ್ಲಗೆಳೆದುಬಿಟ್ಟರೆ? ವಿಚಿತ್ರ ವ್ಯಕ್ತಿ! ಯಾವ ಮ್ಯೂಸಿಯಮ್ ಇಂದ ಹುಡುಕಿ ತಂದರು, ಈಕೆಯನ್ನ? ಅತ್ತೆಮ್ಮಾ? ಎಲ್ಲಾ ಬಿಟ್ಟು ನಮ್ಮ ಮನೆಗೇ ತಂದಿಡಬೇಕೇ, ಏನೇನೊ ಪರಾಕುಗಳನ್ನ ಊದುತ್ತಾ! ಯಾಕೆ, ಈಗ ತೆರೆಮರೆಯಲ್ಲಿ ಕೊಡ್ತಿರೋ ಕಿರುಕುಳ ಸಾಲದೆಂದೆ? ಅಥವಾ– ಹೊಸ ಯೋಚನೆಯೊಂದು ಅಂಕುರಿಸಿ, ಭಯವಾಯಿತು–'ನಮ್ಮ ಮನೇಲಿ ಗುಪ್ತಾಚಾರಿಣಿಯಾಗಿ ಇರಲೆಂದೋ!'.

ಆದಷ್ಟೂ ಆಕೆಯ ಹತ್ತಿರ ಚೆನ್ನಾಗಿದ್ದು, ಒಳ್ಳೆಯ ಹೆಸರನ್ನ ಗಳಿಸಿ, ಅತ್ತೆಯ ಸರವನ್ನ ಲಪಟಾಯಿಸಬೇಕೆಂದು ಪ್ಲಾನ್ ಹಾಕಿದೆ.

"ಎಲ್ಲೆಲ್ಲೂ ಈರುಳ್ಳೀ, ಈರುಳ್ಳಿ, ತಥ್! ನಂಗೆ ಈರುಳ್ಳಿಯನ್ನ ಕಂಡ್ರೆ ಆಗಲ್ಲ!– "– ಕಹಿಮುಖ ಮಾಡಿದಳು.

ಸಿಡಿಲು ಬಂಡಿದಂತಾಯಿತು. . . . ನಮಗೆಲ್ಲಾ ಈರುಳ್ಳಿ ಎಂದರೆ ಪ್ರಾಣ!. ಅದಿಲ್ಲದೆ ಅಡುಗೆಯೇ ಇಲ್ಲ!

ನನ್ನ ಮುಖಭಾವ ನೋಡಿಯೇ ಅರ್ಥ ಮಾಡಿಕೊಂಡಳೇನೋ ಮಹರಾಯತಿ, ನೆಟ್ಟಗೆ, ಹರಿಕಥೇನೇ ಆರಂಭಿಸಿಬಿಡಬೇಕೇ–"ಹಿಂದೆ ವಿಶ್ವಾಮಿತ್ರ ಎಂಬ ಋಷಿಯಿದ್ದ.."

ಪುರಾಣಕ್ಕೂ ನಂಗೂ ಬಹಳ ದೂರ! ಅಂತೆಯೇ ಈರುಳ್ಳಿ ಹೊತ್ತ ದೊಡ್ಡ ಬುಟ್ಟಿಯನ್ನ ಮಹಾರಾಯತಿಯ ಕೈಲಿ ಕುಕ್ಕಿದವಳೇ, ಜಾಗ ಖಾಲಿ ಮಾಡಿಬಿಟ್ಟೆ.

ಬೆಳಿಗ್ಗೆ ಎದ್ದು ಬಂದು ನೋಡ್ತೀನಿ, ನನ್ನ ಅಚ್ಚುಕಟ್ಟಾಗಿದ್ದ ಅಡಿಗೆಮನೆಯಲ್ಲಿ ಒಂದೇ ಅವ್ಯವಸ್ಥೆ! ಎಲ್ಲೆಲ್ಲೂ ನೀರು, ನೀರು, ನೀರು! ಕಾವೇರಮ್ಮ ಸಿಟ್ಟಾಗಿ ನಮ್ಮ ಮನೆಯನ್ನೇ ಮುಳುಗಿಸಹತ್ತಿದಳೋ–ಎಂಬಂತೆ! ಕಲಾತ್ಮಕವಾಗಿ ಮೇಲೆ ಜೋಡಿಸಿಟ್ಟಿದ್ದ ಪಾತ್ರೆಗಳೆಲ್ಲ ಕೆಳಗೆ, ಚೆಲ್ಲಾಪಿಲ್ಲಿಯಾಗಿ! ಸ್ಟೋರ್ ರೂಮಿಗೆ ಕಾಲಿಟ್ಟರೆ, ಅಲ್ಲಿ ಇನ್ನೂ

ಭೀಕರ ದೃಶ್ಯ! ನಾಜೋಕಾಗಿ ಇಟ್ಟಿದ್ದ ನನ್ನ ಫಾರಿನ್ ಕಟ್ಲರಿ ಇತ್ಯಾದಿಗಳೆಲ್ಲ ಅನಾಥರಂತೆ ಧರಾಶಾಯಿಯಾಗಿದ್ದವು! ನೋಡಿ ಮೂರ್ಛೆ ಬೀಳುವಂತಾಯಿತು. ಬಾಟಲ್‌ಗಳದ್ದೂ ಅದೇ ಗತಿ! ಮುಚ್ಚಳಗಳೆಲ್ಲಾ ಕಳಚಿಕೊಂಡು ನೊಣ ಜಿರಲೆ, ಇವುಗಳಿಗೆ ಮನರಂಜನೆಯಾಗಿದ್ದವು.



"ಹೋ! ಅಲ್ಲಿ ಕಾಲಿಡಬೇಡ! ಇಲ್ಲೇ ನಿಂತಿರು!"– ಕೈಲಿದ್ದ ಪರಕೆಯನ್ನ ಬ್ರಹ್ಮಾಸ್ತ್ರದಂತೆ ಆಡಿಸುತ್ತಾ ಕಿರುಚಿಕೊಂಡರು! ಒಂದೇ ಗಾಭರಿಯಿಂದ ನಿಂತುಬಿಟ್ಟೆ.

"ನಾನಿಲ್ಲೆಲ್ಲಾ ಕ್ಲೀನ್ ಮಾಡ್ತಿದೀನಿ–ಅಷ್ಟೂ ಗೊತ್ತಾಗೊದಿಲ್ವೆ? ಹಾಗ್ಯಾಕೆ ನೋಡ್ತಿ, ಭೂತ ನೋಡ್ತಿರೊ ಹಾಗೆ? ನಡಿ ನಡಿ,ಒಳಕ್ಕೆ. " ಬೆಚ್ಚಿ ಒಳಗೋಡಿದೆ.

"ನೋಡಿಲ್ಲಿ, ಈ ಅಡಿಗೆಮನೆ, ಸ್ಟೋರ್ ರೂಮು, ಎಲ್ಲಾ ನನ್ನ ಡಿಪಾರ್ಟ್‌ಮೆಂಟ್, ನನ್ನ ಜವಾಬ್ದಾರಿಗೇ ಬಿಟ್ಟುಬಿಡು–ತಲೆಹಾಕ್ಬೇಡ! ಏನಿದ್ರೂ, ನಿನ್ನ ಬೆಡ್ರೂಮು, ತೊಟ್ಟಿ, ಅವನ್ನೆಲ್ಲಾ ನೋಡಿಕೋ ಹೋಗು. . . ."–ಒಂದೇ ಉಸಿರಿನಲ್ಲಿ ಆಜ್ಞೆ ಮಾಡೋದೇ? ರಾಮ ರಾಮ! ದಬಾಯಿಸಲು ಬಾಯಿ ತೆಗೆದೆ, ಆದರೆ ಅತ್ತೆಮ್ಮನ ಮೊಗ ಕಣ್ಮುಂದೆ ಬಂತು; ಗಪ್‌ಚಿಪ್ಪಾಗಿ ಕೋಣೆ ಸೇರಿದೆ.

ನೋಡನೋಡುವಲ್ಲಿ ಆಕೆಯ ದರ್ಬಾರು ವಿಸ್ತಾರಗೊಳ್ಳಹತ್ತಿತು ! ಮೊಟ್ಟಮೊದಲ ಕೃಪಾದೃಷ್ಟಿ ನಾನು ತುಂಬು ಆಸೆಯಿಂದ ಅಲಂಕರಿಸಿದ್ದ ಕಿಟಕಿಯ ಕರ್ಟನ್‌ಗಳು ಮತ್ತುಬಾಗಿಲ ಪರದೆಗಳ ಮೇಲೆ!

"ತಥ್! ಎಲ್ಲೆಲ್ಲೂ ಚಿತ್ರವಿಚಿತ್ರ ಬಟ್ಟೆಗಳು! ಮೇಜಗಳ ಮೇಲೂ! ಇದೇನು ಅವತಾರ, ನಮ್ಮ ಭಾರತ ದೇಶದಲ್ಲಿ ಬಟ್ಟೆಬರೆ ಇಲ್ದೆ ಜನ ಒದ್ದಾಡ್ತಿರೋವಾಗ! ಬಾಗಿಲು–ಕಿಟಕಿಗಳಿಗೆಲ್ಲಾ ಈ ಅಲಂಕಾರ ಬೇಕಿತ್ತೇ? ಗಾಂಧೀಜಿ ಹೇಳಿದ್ರು. ... "

ನಿಂತಲ್ಲೇ ಆ ಕರ್ಟನ್‌ಗಳನ್ನ – ಟೇಬಲ್‌ಕ್ಲಾತ್‌ಗಳನ್ನ ಕಳಚಿ, ಉಂಡೆಮಾಡಿ, ಬಿಸಾಕಿದೆ ಡೋಬಿಯ ಬುಟ್ಟಿಗೆ. ಗಾಂಧೀಜಿಯ ಆತ್ಮ ನೊಂದುಕೊಳ್ಳಬಾರದು. . . . . . .ಅಲ್ಲಿಗೇ ನಿಂತಿತೇ,ಆಕೆಯ ಬೋಧನೆ? ಹದ್ದಿನ ಕಣ್ಣು ನಮ್ಮ ಮನೆಯ ವಾಸ್ತುಶಾಸ್ತ್ರದ ಮೇಲೆ ನಾಟಿತು.

"ಸ್ವಲ್ಪಾನು ಚೆನ್ನಾಗಿಲ್ಲ, ಈ ಮನೆಯ ವಾಸ್ತುಶಾಸ್ತ್ರ!"– ತೀರ್ಪಿಟ್ಟಿತು. ಅಡಿಗೆಯ ಮನೆ ಇಲ್ಲಿರಬೇಕಿತ್ತು. . . ಸ್ನಾನದ ಕೋಣೆ ಅಲ್ಲಿ. . .ಬೆಡ್ ರೂಮು. . . . ."

ಕೇಳಿ ಕೇಳಿ ತಲೆ ಚಿಟ್ಟುಹಿಡಿದು ಹೋಯಿತು. ಮೊದಲೇ ಸರಿ, ಬಿ ಪಿ!

ಮಾಮಿಗೆ ಸೂಪರ್‌ಸ್ಟಿಶನ್ಸ್ ಜಾಸ್ತಿ; ಹಾಗಾಗಿ, ನನಗೇ ತಿಳಿಯದಂತೆ ಮೂಢಭಕ್ತಿಗಳು ನಮ್ಮ ಕುಟುಂಬವನ್ನು ಆವರಿಸತೊಡಗಿದವು– 'ರಾಹುಕಾಲ,ಯಮಗಂಡಕಾಲ, ಅನಿಷ್ಟಮಂಗಳವಾರ, ಎಂದೆಲ್ಲಾ! ಈವರೆಗೂ ಪ್ರಾಕ್ಟಿಕಲ್ ಆಗಿದ್ದ ಮಕ್ಕಳೂ ಸಹ ಆ ನಂಬಿಕೆಗಳ ಅನುಯಾಯಿಗಳಾಗತೊಡಗಿದರು! ಮಾತೆತ್ತಿದರೆ

ಸರಿ, ಪಂಚಾಂಗ! ಸರಿದಾರಿಗೆ ತರಲು ಹೋದ ನಾನು ಕೂಡ ಅದಕ್ಕೆ ಬಲಿ! ಇದೇನಪ್ಪಾ ಹೀಗಾಯ್ತು!

ಏನು ಮಾಡಲೂ ತೋಚದೆ, ತಲೆಯ ಮೇಲೆ ಕೈಯಿಟ್ಟು ಕುಳಿತುಬಿಟ್ಟೆ. ಚೇತರಿಸಿಕೊಳ್ಳುವಷ್ಟರಲ್ಲಿ ಇನ್ನೊಂದು ದೊಡ್ಡ ಶಾಕ್! ಒಂದು ಸಂಜೆ ಮನೆಗೆ ಬಂದು ನೋಡ್ತೀನಿ–ಶೋಕೇಸ್‌ನಲ್ಲಿ ನಾಜೂಕಾಗಿ ಇರಿಸಲ್ಪಟ್ಟಿದ್ದ ಗಾಜಿನ ಬೊಂಬೆಗಳು, ಪ್ರಾಣಿಗಳು, ಸಮಸ್ತವೂ ಬಾಗಿಲ ಉದ್ದಕ್ಕೂ ಹರಡಲ್ಪಟ್ಟಿವೆ! ಅಜ್ಜಿಯ ಕಾಲದಿಂದ ನಾಜೂಕಾಗಿ ಶೇಖರಿಸಲ್ಪಟ್ಟಿದ್ದ ಸಂಗ್ರಹ–ಹೀಗೆ ಬೇಕಾಬಿಟ್ಟಿಯಾಗಿ ಹರಡಿದಲ್ಲಿ ಏನಾಗಬೇಕು?

"ಹುಶ್! ಫೆಂಗೂಶಿ! ಯಾವುದನ್ನೂ ಮುಟ್ಟಬೇಡ ಅನರ್ಥವಾದೀತು!"–ಎಂದು, ಮಕ್ಕಳು ಆಟವಾಡಲು ಮುಂದಾದಾಗ,, ತಡೆದು ಆಸೆ ತೋರಿಸಿದಳು–"ಇನ್ಮೇಲಿಂದ ಹಣ ಗಂಗೆಯ ಹಾಗೆ ಹರಿಯತ್ತೆ ನೋಡ್ಕೊಂಡಿರಿ!"–

ಹೌದು, ಹಣ ಗಂಗೆಯ ಹಾಗೆ ಹರಿದುಹೋಗಹತ್ತಿತು– ಮನೆಯಿಂದ!

ಮುಂದೆ ಆಕೆಯ ಕೃಪಾದೃಷ್ಟಿ ನಮ್ಮ ಟೀವಿಯ ಮೇಲೆ! ಕ್ರಿಕೆಟ್ ಬಲೇ ಇಷ್ಟವಂತೆ–ನೋಡಿದ್ದೂ ನೋಡಿದ್ದೇ! ಆ ಆಟಗಾರರಿಗೆ ಸಲಹೆ ಕೊಟ್ಟಿದ್ದೂ ಕೊಟ್ಟಿದ್ದೇ! ಈ ಕಡೆ ತಮ್ಮ ಪ್ರೋಗ್ರಾಮ್ಗಳನ್ನು ಮಿಸ್ ಮಾಡಿದ ಮಕ್ಕಳ ಅಕ್ರೋಶ ಹೇಳತೀರದು! ಅದನ್ನ ಹತ್ತಿಕ್ಕಲು ಮಾಮಿಗೆ ಮೊಬೈಲ್ ತೆಗೆದುಕೊಟ್ಟೆ ನೋಡಿ, ಇನ್ನೋದು ಬಿರುಗಾಳಿ! ಕೆಲಸಕಾರ್ಯಗಳನ್ನೆಲ್ಲಾ ಬಿಟ್ಟು, ಮನೆಯೆಲ್ಲಾ (ಕಿಚನ್ ಒಂದನ್ನ ಬಿಟ್ಟು) ಸುತ್ತಾಡತೊಡಗಿದಳು–ಹರಟುತ್ತಾ, ನಗುತ್ತಾ, ಜಗಳ ಕಾಯುತ್ತಾ, ಒಳ್ಳೆ ಲೌಡ್ ಸ್ಪೀಕರ್ ದನಿಯಲ್ಲಿ! ಮಕ್ಕಳ ಓದಿಗೆ ಭಂಗ ಬರುವುದಿಲ್ಲವೇ? ಉಪಾಯದಿಂದ ಆ ಮೊಬೈಲ್‌ಅನ್ನು ಕದಿಯಲು ನೋಡಿದೆ–––ಇಲ್ಲ, ಒಳ್ಳೆ ಕರ್ಣನ ಕವಚದಂತೆ ಅಂಟಿಕೊಂಡಿತ್ತು ಆಕೆಯ ಕಿವಿಗಳಿಗೆ! ಮಲಗುವಾಗ, ಸ್ನಾನ ಮಾಡುವಾಗ, ಇಪ್ಪತ್ನಾಲ್ಕು ಗಂಟೆಯೂ! ಮೂಕಸನ್ನೆಯಲ್ಲಿ ನಾನು ಮಕ್ಕಳೊಡನೆ ಮಾತನಾಡಬೇಕಾಯಿತು; ಖುಶಿಯಿಂದ ಮಕ್ಕಳು ಆ ಭಾಷೆಯನ್ನು ಕಲಿತವು, ಮತ್ತು ಅದರಲ್ಲೇ ವ್ಯವಹರಿಸತೊಡಗಿದವು! ಹೇ ಭಗವಾನ್, ನೋಡನೋಡುವಲ್ಲಿ ಮೂಕಸನ್ನೆಯೇ ನಮ್ಮ ಮನೆಯ ಸಂಪರ್ಕ ಭಾಷೆಯಾಗತೊಡಗಿತು! ಪುಟ್ಟ ಕಂದಮ್ಮನಿಗೂ!

ಒಂದು ಸಂಜೆ, ಇದ್ದಕ್ಕಿದ್ದಂತೆ ರಾಯರ ಆಗಮನವಾಯಿತು. ಬಂದವರೇ ಮಾಡಿದ್ದು ಮೊದಲ ಕೆಲಸ–ಮನೆಯ ಖರ್ಚುವೆಚ್ಚಗಳನ್ನೆಲ್ಲಾ ಪರಿಶೀಲಿಸುವುದು. ಸಿಟ್ಟಾಗಿ ಪ್ರಶ್ನಿಸಿದರು–" ಎಂದಿಗಿಂತ ಹೆಚ್ಚು ಖರ್ಚಾಗಿದೆ! ಯಾವ ಅತಿಥಿ ಬಂದು ಕುಕ್ಕರಿಸಿದ್ದಾನೆ!"

"ಮಾಮಿ. . . . ."–ಉಸುರಿದೆ.

"ನಮ್ಮ ಟಿವಿಯನ್ನೆಲ್ಲಾ ಕೆಡಿಸಿಬಿಟ್ಟಿದ್ದಾಳೆ ಮಾಮಿ–ಡ್ಯಾಡೀ. . . . ."ಮಕ್ಕಳು ಹೇಳಲಾರಂಭಿಸಿದವು.

"ಮಾಮಿ?ಯಾರು ಈ ಮಾಮಿ?_– ಗರ್ಜಿಸಿದರು,ರಾವಣಾಸುರನ ಹಾಗೆ. . .

"ನಿಮ್ಮ ಅಮ್ಮ ತಂದಿಟ್ಟ ಹೆಲ್ಪರ್. . . . . ."

ಅಮ್ಮ, ಎಂದು ಹೇಳುತ್ತಲೂ, 'ಅಮ್ಮನ ಮಗನ' ಪೌರುಷವೆಲ್ಲಾ ಅಡಗಿಹೋಯಿತು, ನಿಮಿಶಾರ್ದದಲ್ಲಿ! ಪುಸ್ಸೆಂದು ಕೂತುಬಿಟ್ಟರು!

"ಡಬ್, ಡಬ್,"–ಹೊರಗಡೆ ಹೊಗಿದ್ದ ಮಾಮಿಯ ಹೆಜ್ಜೆಗಳ ಸಪ್ಪಳ ಕೇಳಿಸತೊಡಗಿತು.

■

# ರಂಗಣ್ಣನ ಮುರಿದ ಕಾಲೂ...

**♦ಎಸ್. ವಿಜಯ ಗುರುರಾಜ**

ಕೌಸಲ್ಯಾ ಸುಪ್ರಜಾ ರಾಮಾ ಪೂರ್ವಾ ಸಂಧ್ಯಾ ಪ್ರವರ್ತತೇ...

ರೇಡಿಯೊ ಉದಯರಾಗವನ್ನು ಹಾಡುತ್ತಿದ್ದರೆ, ತುಂಗಮ್ಮ ಬಾಗಿಲಿಗೆ ನೀರು ಚೆಲ್ಲಿ ಚಂದನ್ನ ರಂಗೋಲಿ ಬರೆದು "ರಂಗಾ ಶ್ರೀ ಹರಿ ಕಾಪಾಡು" ಎಂದು ಒಳಬಂದಾಗ ಇನ್ನೂ ಪಟ್ಟಾಗಿ ಮುಸುಗುಬೀರಿ ಮಲಗಿದ್ದ ಗಂಡನನ್ನು ನೋಡಿ ತುಂಗಮ್ಮನ ಸಿಟ್ಟು ನೆತ್ತಿಗೇರಿತ್ತು. ಈ ಕಾಲು ಮುರಿದುಕೊಂಡ ಮೇಲೆ ಇವರ ನಿದ್ರೆಗೆ ಉದಯರಾಗವೂ ಇಲ್ಲ, ಸೋನೆ ರಾಗವೂ ಇಲ್ಲ ಎಂದು ಪಿಟ, ಪಿಟನೆ ರೇಗುತ್ತಾ, ರ‍್ರೀ ಏಳ್ರಿ, ಹೊತ್ತು ಮೇಲೇರಿ ಮಾಡಿನ ಮೇಲೆ ಸೂರ್ಯನಾರಾಯಣ ಬಂದು ಎಷ್ಟೊತ್ತಾಯ್ತು ಎಂದು ಹೊದ್ದಿಕೆಯನ್ನು ಎಳೆದು ಗಲಾಟೆ ಮಾಡಿದಳು.

ಆಗಷ್ಟೇ ಸಕ್ಕರೆ ನಿದ್ರೆಯಿಂದ ಹೊರಬಂದ ರಂಗಣ್ಣ ಹೊದಿಕೆಯನ್ನು ಸ್ವಲ್ಪವೇ ಸರಿಸಿ ಪಿಳಿ ಪಿಳಿ ಕಣ್ಣು ಬಿಟ್ಟು ಪತ್ನಿಯನ್ನು ನೋಡಿ ಏಕೇ ನನ್ನ ನಿದ್ರೆ ಹಾಳ್ಮಾಡ್ದೆ, ಹೋಗೇ ನಿನ್ನ ಸೂರ್ಯನಾರಾಯಣನಿಗೂ, ನಿನಗೂ ಬೇರೇನೂ ಕೆಲ್ಸವಿಲ್ಲ. ಕರಾರುವಾಕ್ಕಾಗಿ ಇಬ್ರೂ ಬೆಳಿಗ್ಗೆ , ಬೆಳಿಗ್ಗೇನೆ ಎದ್ದು ನಿಂತಿರ್ತೀರಿ.. ಎಂದ ರಂಗಣ್ಣ ಮತ್ತೆ ಮುಸುಗು ಬೀರಿದ. ತುಂಗಕ್ಕ ಬಿಸಿಬಿಸಿ ಕಾಫಿ ತಂದು ರಂಗಣ್ಣನ ಮೂಗಿನ ಬಳಿ ಹಿಡಿದಾಗ ಅದರ ಪರಿಮಳಕ್ಕೆ ಮನಸೋತು ಚಟಕ್ಕನೆ ಎದ್ದು ಕಣ್ಣು ಮುಚ್ಚಿ ಕಾಫಿ ಹೀರುತ್ತಾ ತುಂಗಾ, ತುಂಗಾ ಎಂದು ಪ್ರೀತಿಯಿಂದ ಹೆಂಡತಿಯನ್ನು ಕರೆದ.

ಏನ್ರೀ ಮತ್ತೆ ನಿಮ್ಮ ರಾಗ, ಅಡಿಗೆ ಮನೇಲಿ ರಾಶಿ ಕೆಲ್ಸ ಬಿದ್ದಿದೆ. ರಾತ್ರಿ ಸರಿಹೊತ್ತಿನ ತನಕ ನೀವು ಗೀಚುತ್ತಿದ್ದ ಆ ಪೇಪರ್‌ಗಳನ್ನೆಲ್ಲಾ ಎತ್ತಿ ಜೋಡಿಸೊ ಹೊತ್ತಿಗೆ ನನ್ನ ಸೊಂಟ ಬಿದ್ದುಹೋಗುತ್ತೆ.

ಆಹಾ? ಎಂತಾ ದಿವಿನಾದ ಕನಸು ಕಣೆ ಹೇಳ್ತೀನಿ ಬಾರೆ ಇಲ್ಲೀ. ರಿಟಾಯ್ಡ್ ಆದಾಗ್ಲಿಂದ ಬರೆದೂ, ಬರೆದೂ ಸಾಹಿತಿ ಎನಿಸಿಕೊಂಡಿದ್ದು ಸಾರ್ಥಕವಾಯ್ತು ನೋಡು. ಅದೂ ಬೆಳಗಿನ ಜಾವ ಬಿದ್ದ ಕನಸು ನಿಜವಾಗುತ್ತಂತೆ ಕಣೆ. ನೀನೇನಾದ್ರು ಅದನ್ನ ಕೇಳಿದ್ರೆ, ನನ್ನ ಪಕ್ಕಾನೇ ಕೂತ್ಕೊತೀಯ ನೋಡು.

ಅಯ್ಯೋ ನಿಮ್ಗೇನ್ರಿ ರಿಟಾಯ್ಡ್ ಆಗಿದೆ. ಕಾಲ್ ಮೇಲೆ ಕಾಲ್ ಹಾಕ್ಕೊಂಡು ಕೂತ್ಕೋತೀರ. ನನ್ನ ಕೆಲ್ಸಕ್ಕೆ ಬಿಡುಗಡೇನೇ ಇಲ್ವಲ್ಲ. ಅದೇನು ಬೇಗ ಹೇಳಿ ಅಡಿಗೆ ಮನೆ ಕರೀತಾ ಇದೆ.

ಆಯ್ತು ಕೇಳಿಲ್ಲಿ ಮುಂಜಾನೆ ಸಕ್ಕರೆ ನಿದ್ರೇಲಿ ತೂಗಾಡ್ತಾ ಇದ್ನಾ.. ಅದೇ ನಮ್ಮ ಸಾಹಿತ್ಯ ಪೋಷಕರಾದ ರುದ್ರಪ್ಪನವರಿಂದ ಒಂದು ಫೋನ್ ಬಂತು ಕಣೆ." ರಂಗಣ್ಣ ಸಾರ್ ನಿಮಗೆ ಈ ಸಲ ಅವಾರ್ಡ್ ಕೊಟ್ಟು ಸನ್ಮಾನ



ಎಲ್ಲಾ ಇಟ್ಕೊಂಡಿದ್ದೀವಿ. ನಿಮ್ಮಂತಹ ಸಾಹಿತಿಗಳಿಗೆ ಸನ್ಮಾನಿಸುವುದು ನಮ್ಮ ಭಾಗ್ಯ" ಎಂದರು ಕಣೆ ಎನ್ನುತ್ತಾ ರಂಗಣ್ಣ ಹಗಲು ಗನಸಿನಲ್ಲಿ ತೇಲಿಹೋಗುತ್ತಿದ್ದರು.

"ಅಯ್ಯೋ,ಅದು ಕನಸು ಕಣ್ರೀ .ಹೋಗಲಿ ಏಳಿ ನಿಮ್ಮ ಕುಂಟ್ಕಾಲಲ್ಲಿ ಎಲ್ಲೂ ಹೋಗಕ್ಕಾಗಲ್ಲ. ಸದ್ಯಕ್ಕೆ ಈಗ ಬಚ್ಚಲು ಮನೆಗೆ ನಡೀರಿ" ಎಂದು ರಂಗಣ್ಣನನ್ನು ಕರೆದೊಯ್ದರು . ನೋವಿನ ಕಾಲನ್ನು ಎಳೆದುಕೊಂಡು ಕುಂಟುತ್ತಾ ..ಸರಿ ಹೋಗುತ್ತೆ ಇನ್ನು ಸ್ವಲ್ಪ ದಿನ ಅಷ್ಟೆ ಎಂದು ತಮಗೆ ತಾವೆ ಸಮಾಧಾನ ಹೇಳಿಕೊಂಡರು.

ವಾರಕ್ಕೆ ಮುನ್ನ ತುಂಗಮ್ಮನ ತಮ್ಮನ ಮಗನ ಮುಂಜಿ ಎಂದು ಮೈಸೂರಿಗೆ ಹೊರಟಿದ್ದರು.

"ರೀ, ಮನೆ ಕಡೆ ಜೋಪಾನ.  ಅಡಿಗೆ ಮನೇಲಿ ಗ್ಯಾಸು ಅದೂ ಇದೂ ಎಂದು ಪರದಾಡೋಕ್ಕೋಗ್ಬೇಡಿ. ಮೂರು ದಿನ ಆ ಶೇಶಣ್ಣಿ ಹೋಟ್ಲಲ್ಲಿ ತಿಂಡಿ, ಊಟ ಮಾಡ್ಕೊಳಿ".. ಎಂದು ತುಂಗಮ್ಮನ ಉವಾಚ.

ಅಂದು ರಾತ್ರಿ ರಂಗಣ್ಣ ಹೆಂಡತಿ ಮಾಡಿಟ್ಟ ರಸಕವಳ ಮೆದ್ದು ಬರೆಯುತ್ತಾ ಹಾಗೇ ಜೂಗರಿಸಿ ನಿದ್ರೆ ಹತ್ತಿತ್ತು. ಮುಂಜಾನೆ ಹಾಲೂ.. ಎನ್ನುವ ಧ್ವನಿಗೆ ಗಡಬಡಿಸಿ ಎದ್ದಾಗ ಮನೆಗೆಲ್ಲಾ ತಾನೊಬ್ಬನೇ ಎನಿಸಿದರೂ ಆದರೇನು ಮಹಾ ಒಂದು ಸಾರನ್ನ, ಕಾಫಿ ಮಾಡಿ ಜಂಬ ತೋರಿಸ್ತಾಳಲ್ಲ. ಇರ್ಲಿ, ಒಂದ್ ಕೈ ನೋಡೇ ಬಿಡ್ತೀನಿ ಎಂದವರೆ ಅಡ್ಡ ಪಂಚೆ ಬಿಗಿದು, ತಲೆಗೆ ಟವಲ್ ಕಟ್ಟಿ" ಭೀಮಸೇನ ನಳಮಹರಾಜರು ಗಂಡಸರಲ್ಲವೆ" ಎಂದು ಹಾಡುತ್ತ ಬೀಗುತ್ತ ಅಡಿಗೆ ಮನೆಗೆ ಹೊರಟಿತು ಸವಾರಿ.

ಅರೆಗತ್ತಲಿನ ಅಡಿಗೆ ಮನೆ ಲೈಟ್ ಸ್ವಿಚ್ ಒತ್ತಿದಾಗ ಊಹು; ಬಲ್ಬ್ ಬರ್ನಾಗಿತ್ತೇನೊ ಅದು ಹತ್ತಲಿಲ್ಲ. ರೂಮಿನ ಕಪಾಟಿನಲ್ಲಿದ್ದ ಹೊಸ ಬಲ್ಬನ್ನು ತಂದು ಹತ್ತಲು ಸ್ಟೂಲ್‌ಗಾಗಿ ಸುತ್ತ ನೋಡಿದರು. ಅದೆಲ್ಲಿತ್ತೋ ಸಿಗಲಿಲ್ಲ ಮತ್ತೇನೆಂದು ಚಿಂತಿಸಿದವರೇ ಹನುಮಂತನಂತೆ ಅಡಿಗೆ ಕಟ್ಟೆಯ ಮೇಲೇರಿ ಬಲ್ಬನ್ನು ಸಿಕ್ಕಿಸಿದ ಕೂಡ್ಲೆ ಝುಗ್‌ನೆ ಬೆಳಕೇನೊ ಆಯಿತು. ಅದರೊಂದಿಗೇ ಅಮ್ಮಾ ಎನ್ನುತ್ತಾ ರಂಗಣ್ಣ ಕೆಳಗೆ ಬಿದ್ದಿದ್ದರು.

ಹಳೇ ಕಾಲದ ಅಡಿಗೆ ಕಟ್ಟೆಯ ಬಿರುಕಿನ ಮೇಲೆ ಕಾಲಿಟ್ಟಿದ್ದೇ...ಇವರ ಭಾರ ತಡೆಯಲಾರದೆ ಕಟ್ಟೆ ತಾನೂ ಒಡೆದು ಇಬ್ಭಾಗವಾಗಿ ರಂಗಣ್ಣನ ಕಾಲನ್ನೂ ಮುರಿದುಹಾಕಿತ್ತು. ಅವರ ಕೂಗಾಟ ಕೇಳಿ ಅಕ್ಕ, ಪಕ್ಕದವರೆಲ್ಲಾ ಬಂದು ಆಸ್ಪತ್ರೆಗೆ ಸೇರಿಸಿದ್ದರು. ಡಾಕ್ಟರು ಬ್ಯಾಂಡೇಜ್ ಬಿಗಿದು ಬೆಡ್ ಮೇಲೆ ಮಲಗಿಸಿದರು. ವಿಷಯ ತಿಳಿದ ತುಂಗಕ್ಕ ಎದ್ದೆನೋ ಬಿದ್ದೆನೊ ಎಂದು ಊರಿಂದ ಬಂದವರೇ ಸೆರಗು ಕಟ್ಟಿ ರಂಗಣ್ಣನ ಸೇವೆಗೆ ನಿಂತರು.

ಒಂದು ವಾರದ ನಂತರ ಡಿಸ್ಚಾರ್ಜ್ ಆಗಿ ಮನೆಯೊಳಕ್ಕೆ ಬರುತ್ತಿದ್ದಂತೆ ಫೋನ್ ಕಾಲ್ ಬಂತು. ಅತ್ತ ಕಡೆಯಿಂದ ರಂಗಣ್ಣಾ ನಾನಪ್ಪ ಜನಮನ ಪತ್ರಿಕೆಯ ರುದ್ರಪ್ಪ. ಮುಂದಿನವಾರ ನಿಮಗೆ ಸನ್ಮಾನ ಇಟ್ಟುಕೊಂಡಿದ್ದೀವಿ ತಪ್ಪದೆ ಬರಬೇಕು. ಇನ್ವಿಟೇಶನ್ ಕಳಿಸ್ತೀನಿ ಎಂದು ಫೋನಿಟ್ಟರು. ಅಯೋಮಯವಾಗಿದ್ದ ರಂಗಣ್ಣ  ಹೆಂಡತಿಯ ಕಡೆ ನೋಡುತ್ತಾ...ತುಂಗಾ ನಾನು ಹೇಳ್ಲಿಲ್ವೇನೇ ಬೆಳಗಿನ ಜಾವದ ಸಕ್ಕರೆ ನಿದ್ರೆಯ, ಅಕ್ಕರೆ ಕನಸು ನಿಜ ಆಯ್ತು ನೋಡು. ಎಂದು ಕಣ್ಣು ಮಿಟುಕಿಸುತ್ತಾ ತಮ್ಮ ಕಾಲಿನ ನೋವನ್ನೇ ಮರೆತು ಸನ್ಮಾನದ ದಿನಕ್ಕಾಗಿ  ಎದುರು ನೋಡತೊಡಗಿದರು....

■

# ಸುಬ್ಬಕ್ಕನ ಸಬ್ರೀನಾ

♦ಟಿ.ಎಸ್. ಶ್ರವಣಕುಮಾರಿ

ಸೀತಾಲಕ್ಷ್ಮಿ ಮತ್ತು ವಿಷ್ಣುಮೂರ್ತಿ ಇಬ್ಬರೂ ಉದ್ಯೋಗಸ್ತರಾಗಿದ್ದು, ಮದುವೆಯಾಗಿ ಬೆಂಗಳೂರಿನಲ್ಲಿ ಹೊಸ ಸಂಸಾರ ಹೂಡಿದ್ದೇನೋ ಸರಿ. ಆದರೆ ಬೆಂಗಳೂರಲ್ಲಿ, ಅದೂ ಬಸವನಗುಡಿಯಲ್ಲಿ ಇದ್ದುಕೊಂಡವರಿಗೆ ಮೂರುಹೊತ್ತೂ ಬೇಯಿಸೋ ಅನಿವಾರ್ಯ ಇದ್ಯೆ? ಬೆಳಗ್ಗೆ ಬ್ರೆಡ್, ಬಟರ್, ಜಾಮ್; ಮಧ್ಯಾಹ್ನಕ್ಕೆ ಆಫೀಸಿನ ಕ್ಯಾಂಟೀನ್ ಊಟ, ಸಂಜೆಗೆ ಹೊರಗಡೆ ಯಾವುದೋ ತಿನಿಸಿನ ಅಡ್ಡಾ ಇಲ್ಲವಾದರೆ ಎರಡು ನಿಮಿಷದ ಮ್ಯಾಗಿ, ಪಾಸ್ತಾ ಇಂತವನ್ನು ತಿಂದು ರೂಢಿಯಾದವರಿಗೆ ಮಗ ಶಶಾಂಕ್ ಹುಟ್ಟಿದ ಮೇಲೆ ಮನೆಯಲ್ಲಿ ಒಂದು ಊಟದ ವ್ಯವಸ್ಥೆ ಇರಲೇಬೇಕೆಂದು ಜ್ಞಾನೋದಯವಾಯಿತು. ಅಂತಹ ಪುಣ್ಯಘಳಿಗೆಯಲ್ಲಿ ಅಡುಗೆಯ ಸುಬ್ಬಕ್ಕ ಇವರ ಮನೆಗೆ ಬಲಗಾಲಿಟ್ಟುಕೊಂಡು ಬಂದರೆಂದೇ ಹೇಳಬೇಕು. ಕಣ್ಬಿಡುವಾಗಲೇ ಬಿಸಿ ಬಿಸಿ ಹಬೆಯಾಡುವ ಕಾಫಿ, ತಿಂಡಿಗೆ ರುಚಿಶುಚಿಯಾಗಿ ಇಡ್ಲಿ, ದೋಸೆ, ಪೂರಿ ವಗೈರೆ, ಬಾಕ್ಸಿಗೆ ಏನಾದರೊಂದು ಭಾತು, ರಾತ್ರಿಗೆ ಚಪಾತಿ–ಪಲ್ಯ ಮಾಡಿಟ್ಟುಹೋಗುವ ವ್ಯವಸ್ಥೆಯಾದಾಗ ಒಗ್ಗಿಕೊಳ್ಳಲು ಕಷ್ಟವೇ. ಹಾಗೆಯೇ ಶಶಾಂಕನಿಗೂ ದಿನಬಿಟ್ಟು ದಿನ ಎರೆದುಕೊಟ್ಟು ಆ ಕೆಲಸವನ್ನೂ ತಪ್ಪಿಸಿದ್ದರಿಂದ ನಮ್ಮ ಸೀತು ಮತ್ತು ವಿಷು ಇಬ್ಬರೂ ಸುಬ್ಬಕ್ಕನ ಮೇಲೆ ಸಂಪೂರ್ಣವಾಗಿ ಅವಲಂಬಿತರಾದರೆಂದು ಬೇರೆ ಹೇಳಬೇಕಿಲ್ಲ.

ಇಷ್ಟೆಲ್ಲಾ ಮಾಡಿಕೊಡುತ್ತಿದ್ದ ಸುಬ್ಬಕ್ಕ ಎಂದೂ ಅಲ್ಲೇ ತಿಂಡಿ ತಿನ್ನುತ್ತಿರಲಿಲ್ಲ. ಮೂವರು ಮಕ್ಕಳಿದ್ದಾರಾದ್ದರಿಂದ ತಿಂಡಿಯನ್ನು ಮನೆಗೊಯ್ದು ಮಕ್ಕಳಿಗೂ ಕೊಟ್ಟು ತಿನ್ನುವೆನೆಂದಾಗ ಬೇಡವೆನ್ನುವ ಅಥವಾ ಅವರೆಷ್ಟನ್ನು ತೆಗೆದುಕೊಂಡು ಹೋಗುತ್ತಾರೆಂಬ ನಿಗಾವಣೆ ಮಾಡುವ ಸಣ್ಣಬುದ್ಧಿ ಸೀತೂ–ವಿಷುಗಿರಲಿಲ್ಲ. ಮೂರ್ನಾಲ್ಕು ಡಬ್ಬಿಗಳಲ್ಲಿ ಸುಬ್ಬಕ್ಕನವರು ಸಾವಕಾಶವಾಗಿ ತಿಂಡಿ, ಕಲಸಿದನ್ನ, ಮೇಲೋಗರ ಎಲ್ಲವನ್ನೂ ಸಂಕೋಚವಿಲ್ಲದೆ ಡಬ್ಬಿಯಲ್ಲಿ ಒತ್ತೊತ್ತಿ ತುಂಬಿಕೊಂಡು ವೈರ್ಬುಟ್ಟಿಯಲ್ಲಿಟ್ಟುಕೊಂಡು ಸಂತೃಪ್ತಿಯಿಂದ ಮನೆಗೆ ಹೊರಡುತ್ತಿದ್ದರು.



ಶಶಾಂಕನ ಹಿಂದೆ ಸ್ನೇಹಾಳೂ ಬಂದು ಅವರಿಬ್ಬರೂ ಸ್ಕೂಲಿಗೆ ಹೋಗಲು ಆರಂಭಿಸಿದರೂ, ಸುಬ್ಬಕ್ಕನನ್ನು ಬಿಡಿಸುವ ಯೋಚನೆ ಬರಲಿಲ್ಲ; ಸುಬ್ಬಕ್ಕ ತಾನೇ ಏಕೆ ಬಿಟ್ಟಾರು? ಆಗೀಗ ಕೈಸಾಲವಂತೂ ತಕರಾರಿಲ್ಲದೆ ಸಿಗುತ್ತಿತ್ತು. ವಿಷುವಿನ ಹಳೆಯ ಪ್ಯಾಂಟು, ಶರ್ಟು ಸುಬ್ಬಕ್ಕನ ಗಂಡುಮಕ್ಕಳಿಗಾದರೆ ಸೀತಳ ನಾಲ್ಕಾರು ಸಲ ಉಟ್ಟು ಸಾಕಾಯಿತು ಎನ್ನಿಸಿದ ಒಳ್ಳೊಳ್ಳೆಯ ಸೀರೆಗಳೆಲ್ಲಾ ಸುಬ್ಬಕ್ಕನ, ಅವಳ ಮಗಳ

ಮೈಯನ್ನು ಸುತ್ತಿಕೊಳ್ಳುತ್ತಿದ್ದುವು. ಸೀತುವೊಬ್ಬಳೇ ಅಲ್ಲದೆ ಅವಳ ಬಂಧು–ಬಾಂಧವರೂ ಆಗಾಗ ಗಟ್ಟಿಮುಟ್ಟಾದ ಸೀರೆಗಳನ್ನು ತಂದು ಸುಬ್ಬಕ್ಕನಿಗೆ ಕೊಡುತ್ತಿದ್ದುದರಿಂದ ಆ ತಾಯಿ  ಹೆಣ್ಣು–ಗಂಡು ಮಕ್ಕಳೆಲ್ಲರ ಊಟ, ಬಟ್ಟೆ ಎಲ್ಲ ಸಮಸ್ಯೆಯೂ ಈ ಮನೆಯಿಂದ ತೀರಿತ್ತೆಂದೇ  ಹೇಳಬೇಕು.

ಎಲ್ಲವೂ ಹೀಗೇ ಚೆನ್ನಾಗೇ ಇದ್ದುಬಿಟ್ಟರೆ ಕತೆಯೇಕೆ ಹುಟ್ಟಿಕೊಳ್ಳುತ್ತದೆ? ಸಮಸ್ಯೆ ಹುಟ್ಟಿಕೊಂಡಿದ್ದು ಶಶಾಂಕ್ ಮತ್ತು ಸ್ನೇಹಾ ಇಷ್ಟಪಟ್ಟು ಒಂದು ಪೊಮರಿನ್ ನಾಯಿಮರಿಯನ್ನು ಮನೆಗೆ ತಂದಾಗ. ಸುಬ್ಬಕ್ಕನಿಗೂ ಪೊಮರಿನ್ ಪದ್ಮಿನಿಗೂ ಒಂದು ಮಾರಲ್ಲ; ಮೈಲು ದೂರ. ಬೇರೆಯವರ ಮಡಿಯ ಬಗ್ಗೆ ಸುಬ್ಬಕ್ಕನಿಗೆ ಯಾವುದೇ ತಕರಾರಿಲ್ಲದಿದ್ದರೂ, ತಮ್ಮ ಮಟ್ಟಿಗೆ ಮಡಿ, ಮೈಲಿಗೆಯನ್ನು ಸ್ವಲ್ಪ ಜಾಸ್ತಿಯೆನ್ನುವ ಹಾಗೇ ಇಟ್ಟುಕೊಂಡಿದ್ದರೆನ್ನಿ. ಅಡುಗೆಮನೆಯ ಸಾಮ್ರಾಜ್ಯದ ಮಹಾರಾಜ್ಞಿಯಾಗಿದ್ದವರಿಗೆ ಅಷ್ಟುಕಾಲವೂ ಯಾವ ಸಮಸ್ಯೆಯೂ ಭಾದಿಸಿರಲಿಲ್ಲ. ಈಗ ನಾಯಿಮರಿಯೊಂದು ತಮ್ಮ ಹಿಂದೆ ಮುಂದೆ ಸುತ್ತುವುದೆಂದರೆ ಭಯ, ಅಸಹ್ಯ, ಮೈಲಿಗೆ ಎಲ್ಲ ಭಾವಗಳೂ ಒಟ್ಟಿಗೆ ಮುತ್ತುತ್ತಿದ್ದವು. ಆ ಪೊಮೋರಿನ್ ಪಮ್ಮಿಯೋ ಅವರ ಸೀರೆಯಿಂದ ಧಾರಾಳವಾಗಿ ಹೊಮ್ಮುತ್ತಿದ್ದ ಅಡುಗೆಗಳ ಪರಿಮಳಕ್ಕೆ ಮರುಳಾಗಿ ಅವರು ಬಂದಾಗಿನಿಂದ ಹೊರಡುವವರೆಗೂ ಎಳೆಗರುವಿನಂತೆ ಹಿಂಬಾಲಿಸಿಕೊಂಡೇ ಇರುತ್ತಿತ್ತು. ಅದು ಕಚ್ಚುವುದಿಲ್ಲವೆಂದು ಮನೆಯವರೆಲ್ಲಾ ಎಷ್ಟೇ ಆಶ್ವಾಸನೆ ಕೊಟ್ಟರೂ, ಮಡಿಯನ್ನು ಹಾಳುಮಾಡಿ ಕೈಕಾಲಿಗೆ ತೊಡರಿಕೊಂಡು ಓಡಾಡುತ್ತಿದ್ದ ಕುನ್ನಿಮರಿಗೆ ಭಯಭೀತರಾಗಿ ಒಂದೆರಡು ಸಲ ಕೈಯಲ್ಲಿದ್ದದ್ದನ್ನು ನೆಲಕ್ಕೆ ಎತ್ತಿಹಾಕಿ ಸುಬ್ಬಕ್ಕ ತಲ್ಲಣಿಸಿ ಹೋದರು. ನಾಯಿಯನ್ನು ಮುಟ್ಟಿಸಿಕೊಂಡ ಮೇಲೆ ತಾವು ಅಡುಗೆ, ತಿಂಡಿಯನ್ನೂ ಮನೆಗೆ ಒಯ್ಯುವುದಿಲ್ಲವೆಂದು ಘೋಷಿಸಿಬಿಟ್ಟರು. ಸೀತು, ವಿಷುವಿಗೆ ವಿಪರೀತ ಅನುಕಂಪವುಕ್ಕಿ ಆಕೆ ಮನೆಯಲ್ಲಿರುವಷ್ಟು ಕಾಲವೂ ಪಮ್ಮಿ ಶಶಾಂಕ್ ಮತ್ತು ಸ್ನೇಹರ ರೂಮಿನಲ್ಲೇ ಬಂದಿಯಾಗಿರಬೇಕೆಂದು ಸುಗ್ರೀವಾಜ್ಞೆ ಹೊರಡಿಸಿ ಕಟ್ಟುನಿಟ್ಟಾಗಿ ಚಾಲೂ ಆಗುವಂತೆ ನೋಡಿಕೊಂಡರು.

ಕಾಲ ಅಲ್ಲೇ ಕಾಲುಚಾಚಿ ಮಲಗಿರುತ್ತದೆಯೇ? ತನ್ನ ಪಾಡಿಗೆ ಮುಂದೋಡುತ್ತಿರುವಾಗಲೇ ಸುಬ್ಬಕ್ಕನ ಮಗಳಿಗೆ ಮದುವೆಯಾಗಿ ಗಂಡು ಮಕ್ಕಳಿಗೂ ಕೆಲಸ ಸಿಕ್ಕು, ಇನ್ನಾದರೂ ತಮ್ಮಮ್ಮ ಮನೆಯಲ್ಲೇ ಕಾಲು ಚಾಚಿಕೊಂಡು ವಿಶ್ರಾಂತಿ ತೆಗೆದುಕೊಳ್ಳಲಿ ಎಂದು ಬಯಸಿದರು. ಅಷ್ಟರಲ್ಲಿ ಶಶಾಂಕ್, ಸ್ನೇಹಳ ಇಲ್ಲಿನ ಓದೂ ಮುಗಿದು ಮುಂದಿನ ವಿದ್ಯಾಭ್ಯಾಸಕ್ಕಾಗಿ ಅಮೆರಿಕೆಗೆ ಹಾರಿದ್ದರು. ವಿಷ್ಣುಮೂರ್ತಿ ನಿವೃತ್ತಿ, ಸೀತಾಲಕ್ಷ್ಮಿ ಸ್ವಯಂನಿವೃತ್ತಿ ಪಡೆದಾಗಿತ್ತು. ಇಷ್ಟು ಕಾಲವೂ ತಪ್ಪಿಸುತ್ತಿದ್ದ ಎಲ್ಲಾ ಸಮಾರಂಭಗಳಿಗೆ ಹಾಜರಾಗುತ್ತಾ, ಈಗಿರುವ ಇಬ್ಬರಿಗೆ, ಉಳಿದ ದಿನಗಳಲ್ಲಿ ಸಿಂಪಲ್ಲಾಗಿ ಏನೋ ಮಾಡಿಕೊಂಡರಾಯಿತೆಂದು ಅವರೂ ತೀರ್ಮಾನಿಸಿಕೊಂಡರು. ರೇಷ್ಮೆ ಸೀರೆ, ಇನ್ನಿತರ ಸಕಲ ಮರ್ಯಾದೆಗಳೊಂದಿಗೆ ಕೆಲಸದ ರಜತಮಹೋತ್ಸವದ ಆಚರಣೆಯ ಸವಿನೆನಪಿಗಾಗಿ ಒಂದು ಜೊತೆ ಬೆಳ್ಳಿಯ ನೀಲಾಂಜನವನ್ನೂ ಕೊಟ್ಟು ಹಾರ್ದಿಕವಾಗಿ ಬೀಳ್ಕೊಟ್ಟರು. ಸುಬ್ಬಕ್ಕನೂ ನಂತರದ ದಿನಗಳಲ್ಲಿ ಗಂಡುಮಕ್ಕಳ ಮದುವೆಯ ಆಮಂತ್ರಣಗಳನ್ನು ನೀಡಿ ಸಂಬಂಧವನ್ನು ಹಾಗೀಗೆ ಚಾಲನೆಯಲ್ಲೇ ಇರಿಸಿಕೊಂಡಿದ್ದರು.

ಒಂದಷ್ಟು ವರ್ಷಗಳು ಕಳೆದ ನಂತರ ಒಂದುದಿನ ಸೀತಾಲಕ್ಷ್ಮಿ ತನ್ನ ಬೀರುವನ್ನು ರಿ-ಅರೇಂಜ್ ಮಾಡಿಕೊಳ್ಳುತ್ತಿರುವಾಗ ಉಟ್ಟುಟ್ಟು ಬೇಸರಾದ, ಗಟ್ಟಿಯಾದ ಒಂದಷ್ಟು ಸೀರೆಗಳು ಬೀರುವಿನಿಂದ ಹೊರಬಿದ್ದವು. ಹೆಚ್ಚುಕಡಿಮೆ ಮರೆತೇಹೋಗಿದ್ದ ಸುಬ್ಬಕ್ಕನ ನೆನಪೂ ಒತ್ತರಿಸಿಕೊಂಡು ಬಂತು. ಎಂದಾದರೊಂದು ದಿನ ಆಕೆಯನ್ನು ಮಾತನಾಡಿಸಿಕೊಂಡು ಒಂದ್ನಾಲ್ಕು ಸೀರೆಯನ್ನು ಕೊಟ್ಟು ಬರಬಹುದೆಂದುಕೊಂಡು ಒಂದು ಕೈಚೀಲಕ್ಕೆ ಹಾಕಿಟ್ಟಳು. ಕಾಕತಾಳೀಯವಾಗಿ ಅದೇ ಸಂಜೆ ಅತ್ತಿಗೆ ವಿಮಲಳೂ ತನ್ನದೊಂದೆರಡು ಸೀರೆಗಳನ್ನು ಇದೇ ಉದ್ದೇಶಕ್ಕಾಗಿ ಹಿಡಿದುಕೊಂಡು ಬರಬೇಕೆ?! ಶುಭಸ್ಯ ಶೀಘ್ರಂ ಎಂದು ತಕ್ಷಣವೇ ಇಬ್ಬರೂ ಚಪ್ಪಲಿ ಮೆಟ್ಟಿಕೊಂಡು ಸೀರೆಯ ಬ್ಯಾಗುಗಳನ್ನು ಹೊತ್ತುಕೊಂಡು ಆಟೋ ಹತ್ತೇ ಬಿಟ್ಟರು.

ಸುಬ್ಬಕ್ಕನ ಮನೆಯ ರೋಡಿಗೆ ಬಂದರೆ ಬೀದಿಯಲ್ಲಿ ಮೊದಲಿಂದ ಕಡೆಯವರೆಗೂ ಒಂದು ಸುತ್ತು ಹೊಡೆದರೂ ಮನೆಯ ಗುರುತು ಸಿಗಲಿಲ್ಲ. ಆಟೋದಿಂದ ಇಳಿದು ನಡೆದುಕೊಂಡೇ ತಲಾಷು ಮಾಡುತ್ತಿರುವಾಗ ಆಕಸ್ಮಿಕವಾಗಿ ಸುಬ್ಬಕ್ಕನೇ ಗೇಟಿಗೆ ಬಂದರಲ್ಲಾ! ಇವರಿಬ್ಬರನ್ನು ಅತೀವ ಸಂತೋಷದಿಂದ ಮನೆಗೆ ಬರಮಾಡಿಕೊಂಡರು. 20/30 ಸೈಟಿನಲ್ಲಿದ್ದ ಹಳೆಯ ಮನೆಯನ್ನು ಕೆಡವಿಸಿ ಎರಡಂತಸ್ತಿನ ಹೊಸ ಮನೆಯನ್ನು ಕಟ್ಟಿಸಿಕೊಂಡಿದ್ದರು. ಕಣ್ಣುಬಾಯಿ ಬಿಟ್ಟುಕೊಂಡು ಸುಬ್ಬಕ್ಕನ ಹಿಂದೆಯೇ ಗೇಟನ್ನು ಹೊಕ್ಕರೆ ಅದೆಲ್ಲಿತ್ತೋ ಒಂದು ತೋಳದಂತ ಆಲ್ಸೇಷನ್ ನಾಯಿ ಬೊಗಳುತ್ತಾ ಇವರಿಬ್ಬರ ಮೇಲೆ ಎಗರುವಂತೆಯೇ ಬಂತು. "ಏ, ಸಬ್ರೀನಾ ಸುಮ್ನಿರು. ಅವ್ರು ನಮ್ಮೋರೆ" ಎಂದು ನಾಯಿಯ ತಲೆಸವರಿ, ನೀವು ಒಳಗೆ ಬನ್ನಿ. ಅವಳೇನೂ ಮಾಡಲ್ಲ. ನನ್ನ ಸೊಸೆ ತಂದಿಟ್ಕೊಂಡಿದಾಳೆ, ಹೊಸಬರಲ್ವಾ ಅದಕ್ಕೇ ಹೀಗಾಡ್ತಿದಾಳಷ್ಟೇ" ಎನ್ನುತ್ತಾ ಅದನ್ನೂ ತಳ್ಳಿಕೊಂಡು ಒಳಹೊಕ್ಕರು. ಸೀತು, ವಿಮಲಾ ಇಬ್ಬರೂ ಮುಖಮುಖ ನೋಡಿಕೊಂಡು ಮಾತು ಬರದವರಂತೆ ಒಳಹೊಕ್ಕು ಮೆತ್ತನೆಯ ಹೊಸ ಸೋಫಾ ಮೇಲೆ ತೆಪ್ಪಗೆ ಕುಳಿತರು. ದೊಡ್ಡ ಟೀವಿ, ರೆಫ್ರಿಜಿರೇಟರ್, ಇಟಾಲಿಯನ್ ಕಿಚನ್ ಸುಬ್ಬಕ್ಕನ ವೈಭವವನ್ನು ಇಬ್ಬರೂ ಬೆಪ್ಪಾಗಿ ನೋಡತೊಡಗಿದರು. "ಹೋದ ತಿಂಗಳಷ್ಟೇ ಇನ್ನೇನು ಉತ್ತರಾಯಣ ಮುಗೀತಾ ಬಂತಲ್ಲಾಂತ ಅರ್ಜೆಂಟಾಗಿ ಮನೆಮಟ್ಟಿಗೆ ಗೃಹಪ್ರವೇಶ ಮಾಡ್ಕೊಂಡ್ವಿ. ಒಂದೊಳ್ಳೆ ದಿನ ಸತ್ಯನಾರಾಯಣ ಪೂಜೆ ಮಾಡಿ ಎಲ್ರನ್ನೂ ಕರೆಯೋದು ಅಂದ್ಕೊಂಡಿದೀವಿ" ಅನ್ನೋಷ್ಟರಲ್ಲಿ ಸಬ್ರೀನಾ ಬಂದು ಸುಬ್ಬಕ್ಕನ ತೊಡೆಯ ಮೇಲೆ ಮಲಗಿ ಇವರಿಬ್ಬರನ್ನೇ ಗುರಾಯಿಸತೊಡಗಿದಳು. ಸುಬ್ಬಕ್ಕನೂ ಅದರ ತಲೆ ಸವರುತ್ತಾ "ಭಾಳ ಒಳ್ಳೇವ್ಳು. ನನ್ನನ್ನ ತುಂಬಾ ಹಚ್ಕೊಂಡ್ಬಿಟ್ಟಿದಾಳೆ. ಮನೆಮಗಳ ಹಾಗೇ ಆಗೋಗಿದೆ". ಸೀತೂ, ವಿಮಲಳಿಗೆ ಪೊಮರಿನ್ ಪಮ್ಮಿಯ ವೃತ್ತಾಂತ ನೆನಪಿಗೆ ಬಂದು ಮುಖಮುಖ ನೋಡಿಕೊಂಡು ನಗುಬಂದರೂ ತಡೆದುಕೊಂಡರು. ಸೊಸೆಗೆ ಬೇಕಾದ ನಾಯಲ್ಲವೇ; ಹೊಂದಿಕೊಳ್ಳಲೇ ಬೇಕು

ಅಷ್ಟರಲ್ಲಿ ಜೀನ್ಸ್ಪ್ಯಾಂಟು ಹಾಕಿಕೊಂಡ ಸುಬ್ಬಕ್ಕನ ಸೊಸೆ ಮಹಡಿಯಿಂದ ಇಳಿದವಳೇ "ಹಾಯ್ ಆಂಟಿ, ಅಂಕಲ್ ಚೆನ್ನಾಗಿದಾರ" ಎಂದೊಮ್ಮೆ ಪಲುಕಿ ಸಬ್ರೀನಾಳ ಮುಖಮುಖಕ್ಕೇ ಮುದ್ದಿಡುತ್ತಾ ಅಡುಗೆಮನೆಗೇ ಕರೆದುಕೊಂಡು ಹೋದಳು. ಅದರ ಬಾಯಿಗೆ ಬಿಸ್ಕತ್ ಇಡುತ್ತಾ ಹಾಗೆಯೇ ಅದೇ ಮಡಿಯಲ್ಲಿ ಕಾಫಿಗೆ ನೀರಿಟ್ಟಳು. ಸೀತು, ವಿಮಲ ಇಬ್ಬರೂ "ಇನ್ನು ಹೊರಡ್ತೀವಿ ಸುಬ್ಬಕ್ಕ" ಎಂದೆದ್ದರು. ಅಯ್ಯೋ

ಇರಿ ಒಂದ್ಲೋಟ ಕಾಫಿನಾದ್ರೂ ಕುಡ್ಕೊಂಡು ಹೋಗಿವ್ರಂತೆ" ಸುಬ್ಬಕ್ಕ ಉಪಚರಿಸಿದರೂ, ನಾಯಿಯ ಬಾಯಿಗೇ ಬಿಸ್ಕತ್ತನ್ನಿಟ್ಟ ಕೈಯಲ್ಲೇ ಕಾಫಿಗೆ ನೀರಿಟ್ಟಿದ್ದನ್ನು ನೋಡಿಯೂ ಕುಡಿಯಲಾದೀತೆ?! "ಇಲ್ಲ, ಇನ್ನೊಂದ್ಸಲ ಬರ್ತೀವಿ" ಎನ್ನುತ್ತಾ ಎದ್ದೇಬಿಟ್ಟಾಗ ವಿಧಿಯಿಲ್ಲದೆ ಕುಂಕುಮಕೊಟ್ಟು ಬೀಳ್ಕೊಡಲು ಗೇಟಿನವರೆಗೆ ಬಂದರು. ಹಿಂದೆಯೇ ಸಬ್ರೀನಾಳೂ ಓಡಿಬಂದಳು. "ನೋಡಿ, ಮುಂಡೇದಕ್ಕೆ ಎಷ್ಟು ಚೆನ್ನಾಗಿ ಗೊತ್ತಾಗತ್ತೆ, ಯಾರಾದ್ರೂ ಬಂದ್ರೆ ಕಳ್ಸಿಕೊಡಕ್ಕೆ ಗೇಟ್ವರ್ಗೂ ಬಂದ್ಬಿಡ್ತಾಳೆ" ಎನ್ನುತ್ತಾ ಅದರ ಮೂತಿಯನ್ನು ಸವರಿ ಮುದ್ದಿಟ್ಟು ತಿರುಗಿದಾಗ ಅವರಿಬ್ಬರ ಕೈಚೀಲದ ಕಡೆಗೆ ಗಮನ ಹೋಯಿತು. "ಎಲ್ಲೋ ಪೇಟೆಗೆ ಹೋಗಿದ್ರೇನೋ. ಸೀರೆ ತಂದ್ಹಾಗಿದೆ" ಅಂದರು. ಸೀತು, ವಿಮಲಳ ಕೈ ಚಿವುಟುತ್ತಾ "ಇಲ್ಲಾ, ಡ್ರೈವಾಷ್ಗೆ ಕೊಡ್ಬೇಕಿತ್ತು. ತಂದಿದ್ವಿ. ಕೊಟ್ಬೋಗ್ಬೇಕು" ಎನ್ನುತ್ತಾ ಹೊರಟು ಬೀದಿಯ ಕೊನೆಯಲ್ಲಿ ಆಟೋ ಹತ್ತಿದರು. "ದೇವರದಯೆ; ಅಷ್ಟು ಕಷ್ಟಪಟ್ಟಿದ್ದೋರು ಸುಖ್ವಾಗಿದಾರೆ. ಸಧ್ಯ! ನಾವ್ಯಾಕ್ಬಂದಿದ್ವೀಂತ ಅವ್ರಿಗೆ ಗೊತ್ತಾಗ್ಲಿಲ್ವಲ್ಲ; ಸಬ್ರೀನಾ ಸುಬ್ಬಕ್ಕನ ಮಡಿ,ಮೈಲ್ಗೆ ಎಲ್ಲಾನೂ ತೊಳದ್ಹಾಕ್ಬಿಟ್ಳು" ಎಂದು ಇಬ್ಬರೂ ಮನೆಬರುವ ತನಕ ನಕ್ಕರು.


■

---

ವ್ಯಂಗ್ಯಚಿತ್ರ ಕಲಾವಿದೆ –
**ಗೌರಿ ಶಿರೀಶ್ ವೆಲ್ಹಾಳ್**, ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ವ್ಯಂಗ್ಯಚಿತ್ರ ಕಲೆಗೆ ಪದಾರ್ಪಣೆ ಮಾಡಿ ತಮ್ಮ ಛಾಪನ್ನು ಮೂಡಿಸುತ್ತಿರುವ ಉದಯೋನ್ಮುಖ ವ್ಯಂಗ್ಯಚಿತ್ರ ಕಲಾವಿದೆ.

ವೃತ್ತಿ: ಕಲಾವಿದೆ (ವರ್ಣಚಿತ್ರಕಲೆ) – ಪುಣೆಯ ಇ–ಲರ್ನಿಂಗ್ ಸಂಸ್ಥೆಯಲ್ಲಿ ವೃತ್ತಿಪರ ಕಲಾವಿದೆಯಾಗಿ 12 ವರ್ಷಗಳ ಕಾಲ ದುಡಿಮೆ. ನಂತರ ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದ ಕಲಾವಿದೆಯಾಗಿ ಮುಂದುವರಿಕೆ. ವೃತ್ತಿಪರ ವ್ಯಂಗ್ಯಚಿತ್ರ ಕಲಾವಿದೆಯಾಗಿರುವುದರ ಜೊತೆಗೆ ಭಾವಚಿತ್ರ ಕಲೆ, ಸಂಗೀತದಲ್ಲಿಯೂ ಆಸಕ್ತಿ (ಹಾಡುಗಾರಿಕೆ). ಹಲವು ವರ್ಷಗಳ ಕಾಲ ಹಿಂದೂಸ್ತಾನೀ ಸಂಗೀತದಲ್ಲಿ ಶಿಕ್ಷಣ ನಂತರ ಈಗ ಕನ್ನಡ ಭಾವಗೀತೆಗಳ ಕಲಿಕೆ ಮುಂದುವರಿಯುತ್ತಿರುವುದು. ಕಲಾವಿದೆಯಾಗಲು ಸ್ಫೂರ್ತಿ ಸ್ವತ: ಚಿತ್ರಕಲಾ ಶಿಕ್ಷಕರಾಗಿದ್ದ ತಂದೆಯವರು. ನಂತರದ ದಿನಗಳಲ್ಲಿ ತಮ್ಮ ವ್ಯಂಗ್ಯಚಿತ್ರರಚನೆಗೆ ಸ್ಫೂರ್ತಿಯಾದ ರವಿ ಪೂಜಾರಿ, ನಂಜುಂಡ ಸ್ವಾಮಿ, ಪ್ರಸನ್ನ ಮುಂತಾದವರನ್ನು ಕೃತಜ್ಞತೆಯಿಂದ ನೆನೆಯುವ ಗೌರೀ ಶಿರೀಶ್ ವೆಲ್ಹಾಳ್ ಅವರಿಗೆ ಅಪರಂಜಿ ಶುಭ ಕೋರುತ್ತಾಳೆ.



# ಅಶ್ವಿನಿಯೂ, ಹೊಸ ನೋಟುಗಳೂ..

**♦ವಸುಮತಿ ಉಡುಪ**

ಹರೆಯ ಅಂದರೆ ಹೇಗಿರುತ್ತದೆ ನೋಡಿ, ಎಲ್ಲರೂ ತನ್ನನ್ನು ಗಮನಿಸುತ್ತಾರೆಂಬ ಭ್ರಮೆ. ಗಮನಿಸಬೇಕೆಂಬ ಬಯಕೆ. ಈ ಮನೋಧರ್ಮ ಎಲ್ಲ ವರ್ಗದವರಲ್ಲೂ ಒಂದೇ. ನಮ್ಮ ಮನೆಗೆಲಸಕ್ಕೆ ಹೊಸದಾಗಿ ಸೇರ್ಪಡೆಯಾದ, ಹದಿವಯಸ್ಸು ಆಗಷ್ಟೇ ದಾಟಿದ, ಅಶ್ವಿನಿ ಎನ್ನುವ ಯುವತಿಯ ಕುರಿತು ಈಗಾಗಲೇ ನಿಮಗೆ ತಿಳಿಸಿದ್ದೇನೆ. ಮರೆತಿದ್ದರೆ ನೆನಪಿಸಿಕೊಳ್ಳಬೇಕಾದ್ದೇನಿಲ್ಲ. ತಲೆ ಎಲ್ಲಾ ಮಾತಾಡುವ ವಾಚಾಳಿ ಈ ಅಶ್ವಿನಿ. ಅವಳು ಯಾವ ಬಣ್ಣದ ಚೂಡೀದಾರ್ ಹಾಕಿಕೊಂಡು ಕೆಲಸಕ್ಕೆ ಬಂದಿದ್ದಾಳೆ, ಕುತ್ತಿಗೆಯ ಸರ ಹೇಗಿದೆ, ಕಾಲಿನ ಚೈನು ಚೆನ್ನಾಗಿದೆಯಾ ಎಂಬ ವಿವರಗಳನ್ನು ನಾನು ಗಮನಿಸಿ ಕೇಳಬೇಕೆಂದು, ಹೊಗಳಬೇಕೆಂದು ಅವಳ ಸುಪ್ತ ಇಂಗಿತ. ನಿರೀಕ್ಷೆ. ಕೃತಕ ಆಭರಣಗಳನ್ನು ಆಗೀಗ ಬದಲಾಯಿಸಿಕೊಂಡು ಬರುವುದು ಅವಳ ಚಾಳಿ.

"ಆಂಟೀ, ಇವತ್ತು ರಸ್ತೇಲಿ ಎಲ್ಲಾ ನನ್ನೇ ನೋಡ್ತಿದ್ರು ಆಂಟೀ.." ಒಮ್ಮೆ ಹೇಳಿದಳು.

"ಮನೆಗೆ ಹೋಗಿ ನಿಮ್ಮಮ್ಮನ ಹತ್ರ ದೃಷ್ಟಿ ತೆಗೆಸ್ಕೋ.."

"ಕಪ್ಪು ಡ್ರೆಸ್ ಹಾಕ್ಕೊಂಬಂದ್ರೆ ಹಾಗೇ ಆಂಟೀ, ಎಲ್ರೂ ನನ್ನೇ ನೋಡ್ತಿರ್ತಾರೆ.."

"ಚೆನ್ನಾಗಿ ಕಾಣ್ತೀಯಲ್ಲ, ಅದಕ್ಕೇ.."

"ಹೋಗಿ ಆಂಟೀ.." ಒಂದಿಷ್ಟು ಮುರುಕ, ಸೇಳೆ. ತೀರಾ ಸಾಧಾರಣದ ಹುಡುಗಿ ಈ ಅಶ್ವಿನಿ. ಟೀವಿಗೀವಿ ನೋಡಿ ನೋಡಿ ತನ್ನ ಮಿತಿಯಲ್ಲಿ ಸಾಧ್ಯವಾಗುವಷ್ಟು ಅಲಂಕರಿಸಿಕೊಂಡು ಬರುತ್ತಾಳೆ.

"ಆಂಟೀ, ನಿಮಗೆ ಗೆಜ್ಜೆ ಶಬ್ದ ಕೇಳಿಸ್ತಾ?" ಕೇಳಿದಳು ಮತ್ತೊಮ್ಮೆ.

"ಹೊರಗೆಲ್ಲೋ ಹಕ್ಕಿ ಕೂಗ್ತಿರ್ಬೇಕು. ನಿಂಗೆ ಹಾಗೆ ಕೇಳಿಸ್ತಿದೆ.."

"ಇಲ್ಲ ಆಂಟೀ, ಗೆಜ್ಜೆ ಶಬ್ದಾನೇ.."

"ನಮ್ಮನೇಲಿ ದೆವ್ವ, ಭೂತ ಇಲ್ಲ ಅಂದ್ಕೊಂಡಿದೀನಿ"

ಒಂದಷ್ಟು ಹೊತ್ತು ಮಾತಿಲ್ಲದೆ ಕಸ ಗುಡಿಸಿದವಳು ಪೊರಕೆ ಸಮೇತ ಹತ್ತಿರ ಬಂದು ನಿಂತಳು. ಶುಕ್ರವಾರದ ಪೇಪರಿನಲ್ಲಿ ಸಿನಿಮಾ ಪುಟ ಕಂಡರೆ ಕಣ್ಣು, ಬಾಯಿ ಬಿಟ್ಟುಕೊಂಡು ಜಗತ್ತನ್ನೇ ಮರೆತುಬಿಡುವ ಗಿರಾಕಿ ಇವಳು.

"ಇವತ್ತು ಯಾವ ಹೊಸ ಸಿನಿಮಾ ಬರುತ್ತಂತೆ ಆಂಟೀ?" ಅವಳಿಗೋಸ್ಕರ ಅವತ್ತು ಬಿಡುಗಡೆಯಾಗುವ ಹೊಸ ಸಿನಿಮಾದ ಕುರಿತು ನಾನು ಹೇಳಬೇಕು. ಈ ಅಶ್ವಿನಿ ಅನಕ್ಷರಸ್ಥೆ ಎಂದು ಈ ಹಿಂದೆ ಹೇಳಿದ್ದೇನೆ, ಅಲ್ಲವೇ? ಟೀವಿ ಸೀರಿಯಲ್‌ಗಳು, ಸಿನಿಮಾಗಳ ಬಗ್ಗೆ ಇವಳಿಗೆ ಇನ್ನಿಲ್ಲದ ವ್ಯಾಮೋಹ. ದುಡಿದಿದ್ದರಲ್ಲಿ ಮೂರು ಕಾಸು ಉಳಿಸಿಕೊಳ್ಳದೆ ಸಿನಿಮಾ ಥಿಯೇಟರಿಗೆ ಸುರಿಯುತ್ತಾಳೆ ಎಂದು ನನ್ನ ಅಂದಾಜು. ಪೊರಕೆಧಾರಿಯಾಗಿ ನನ್ನೆದುರು ಬಂದು ನಿಂತ ಅಶ್ವಿನಿ ಚೂಡಿದಾರನ್ನು ತುಸುವೇ ಮೇಲಕ್ಕೆ ಸರಿಸಿ ತನ್ನ ಕಾಲುಗಳನ್ನು ತೋರಿಸಿದಳು. ಬಿಂಕದಿಂದ ನಕ್ಕಳು.

"ಹೊಸ ಚೈನು ಆಂಟೀ. ಗೆಜ್ಜೆ ಶಬ್ದ ಕೇಳಿಸ್ತಾ ಅಂದ್ರೆ ನಿಮಗೆ ಗೊತ್ತಾಗ್ಲೇ ಇಲ್ಲ.."

“ಹೊಸ್ತು ತಗೊಂಡ್ಯಾ?”

“ಅವನು ಕೊಡಿಸ್ದ..” ತಾನು ಲೌ ಮಾಡುವವನನ್ನು ನೆನೆಸಿಕೊಂಡು ಸಂಭ್ರಮದ ನಗೆ ನಕ್ಕಳು.

ಮನೆಯವರ ಕಣ್ಣು ತಪ್ಪಿಸಿ ಯಾರನ್ನೋ ಲೌ ಮಾಡುತ್ತಿರುವ ವಿಷಯ ಗುಟ್ಟಾಗಿ ನನ್ನ ಕಿವಿಗೆ ವರೆದಿದ್ದಳು ಅಶ್ವಿನಿ.

“ಹಾಗೆಲ್ಲಾ ಯಾರೋ ಕೊಡಿಸಿದ್ದನ್ನು ತಗೋಬಾರ್ದು ಕಣೇ. ಮದುವೆ ಆದ್ಮೇಲೆ ಏನಾದ್ರೂ ಮಾಡ್ಕೋ..”

“ಯಾಕೆ ತಗೋಬಾರ್ದು?”

“ಯಾಕೆ ಅಂದ್ರೆ? ಅವನಿನ್ನೂ ನಿಂಗೆ ತಾಳಿ ಕಟ್ಟಿಲ್ವಲ್ಲ?”

“ತಾಳಿ ಕಟ್ಟಿದ್ರೆ ಅವನು ಕೊಡಿಸಿದ್ದು ತಗೋಬಾರ್ದಾ? ನೋಡಿ ಆಂಟೀ, ಇದೂ ಅವನೇ ಕೊಡಿಸಿದ್ದು..” ಕೊರಳಲ್ಲಿದ್ದ ಒಂದೆಳೆಯ ಮುತ್ತಿನ ಸರ ತೋರಿಸಿ ಬೀಗಿದಳು ಅಶ್ವಿನಿ.

“ನಿಂಗೆ ಈ ಜನ್ಮಕ್ಕೆ ಬುದ್ಧಿ ಬರಲ್ಲ. ‘ಇದೆಲ್ಲಾ ಯಾರು ಕೊಡಿಸಿದ್ದು’ ಅಂತ ನಿಮ್ಮನೇಲಿ ಕೇಳಲ್ವಾ?”

“ನನ್ನ ದುಡ್ಡಲ್ಲಿ ತಗೊಂಡೆ ಅಂತೀನಿ”

“ಸುಳ್ಳು ಹೇಳೋದು ತಪ್ಪಲ್ವಾ?”

“ಯಾಕೆ ಆಂಟೀ?”

ಇವಳ ಹತ್ತಿರ ಎಷ್ಟು ತಲೆ ಚಚ್ಚಿಕೊಂಡರೂ ಅಷ್ಟೇ.

“ಹೋಗು, ಕೆಲಸ ಮುಗಿಸು” ಎನ್ನುತ್ತಾ ಪೇಪರಲ್ಲಿ ತಲೆ ಹುದುಗಿಸಿದೆ. ಯಾವುದೇ ವಿಷಯ ಇರಲಿ, ಅವಳಿಗೆ ಮನವರಿಕೆ ಮಾಡಿಸುವುದು ಬಲು ಕಷ್ಟ. ವಾಸ್ತವ ಜಗತ್ತಿನ ಕುರಿತಾದ ಅಜ್ಞಾನದ ಜೊತೆ ಪ್ರಾಯದ ಕುರುಡೂ ಸೇರಿಕೊಂಡು ಏನೇ ಹೇಳಿದರೂ ತಾನೊಂದು ಪ್ರಶ್ನೆ ಹಾಕಿಯೇ ತೀರುವದು ಅವಳ ಸ್ವಭಾವ. ಇಂತಾ ಅಶ್ವಿನಿ, ‘ನೀವೂ ಒಂದು ಬಿ.ಪಿ.ಎಲ್.ಕಾರ್ಡ್ ಮಾಡಿಸ್ಕೊಳ್ಳಿ’ ಎನ್ನುವಂತಾ ಮಾತಾಡಿದವಳು, ತನ್ನ ಬೆಪ್ಪುತನವನ್ನು ಮತ್ತೊಮ್ಮೆ ಮೆರೆದಳು. ನನ್ನ ಸ್ವಾಭಿಮಾನವನ್ನು ಕೆಣಕಿದಳು.



ನಮ್ಮ ಪೈಕಿಯವರೊಬ್ಬರು ಬ್ಯಾಂಕ್ ಉದ್ಯೋಗದಲ್ಲಿರುವುದರಿಂದ ತಿಂಗಳ ಖರ್ಚಿನ ದುಡ್ಡನ್ನು ನಾನು ಅವರ ಕೈಲೇ ತರಿಸಿಕೊಳ್ಳುವುದು ವಾಡಿಕೆ. ಗರಿಗರಿಯಾದ ಹೊಸ ನೋಟುಗಳನ್ನು ತಂದುಕೊಡುವುದು ಅವರ ಮರ್ಜಿ. ತಿಂಗಳ ಮೊದಲಲ್ಲಿ ನಾನು ಕೊಡುವ ಹೊಸ ನೋಟುಗಳಿಂದ ಅಶ್ವಿನಿಗೆ ಖುಷಿಯಾಗುತ್ತದೆ ಎಂದು ನನ್ನ ಭ್ರಮೆ. ಮೊದಲ ಸಲ ದುಡ್ಡು ತೆಗೆದುಕೊಂಡವಳು ಯಾಕೋ ತಲೆ ಕೆರೆದುಕೊಂಡಳು. "ಹೊಸ ನೋಟು" ಗೊಣಗಿಕೊಂಡಳು. "ಹೌದು, ಹೊಸ ನೋಟು.." ಎಂದೆ ಸುಮ್ಮಾನದಿಂದ. ಎರಡನೇ ತಿಂಗಳೂ ಹೊಸ ನೋಟುಗಳನ್ನು ನೋಡಿ, "ಹೊಸ ನೋಟು.." ಎನ್ನುತ್ತಾ ಮೂಗು ಮುರಿದಳು.

"ಹೌದು, ಹೊಸ ನೋಟು.." ಎಂದೆ ಬಿಗುವಿನಿಂದ.

ಮೂರನೇ ತಿಂಗಳು ಐನೂರು, ನೂರರ ಹೊಸ ನೋಟುಗಳನ್ನು ಎಣಿಸಿಕೊಟ್ಟಾಗ ಮತ್ತದೇ ರಾಗ, "ಹೊಸ ನೋಟು.." ದುಡ್ಡು ತೆಗೆದುಕೊಳ್ಳಲು ಹಿಂದೇಟು.

"ಯಾಕೇ? ದುಡ್ಡು ಬೇಡ್ವಾ?"

"ಹೊಸ ನೋಟು.." ಮತ್ತದೇ ರಾಗ.

"ಹೌದು, ಏನಾಯ್ತು ಈಗ?"

"ಹೊಸ ನೋಟು ತಗೊಂಬೇಡ ಅಂತಾಳೆ ಅಮ್ಮ.."

"ಅಮ್ಮನಾ? ನೀನಾ? ಸಿನಿಮಾ ಟಾಕೀಸಿನವ್ರು ಹೊಸ ನೋಟು ಕೊಟ್ರೆ ತಗೊಳ್ಳಲ್ಲ ಅಂತಾರಾ?"

ಚಕ್ಕನೆ ಮಡ್ಡು ತಲೆಗೆ ಹೊಳೆಯಿತು ಅವಳ ಹಿಂಜರಿಕೆಯ ಮರ್ಮ.

"ಖೋಟಾ ನೋಟು ಅಂತ ಹೆದರಿಕೆಯಾಗುತ್ತೇನೇ?"

'ಹೌದು' ಅನ್ನುವಂತೆ ತಲೆ ಕುಣಿಸಲು ಅಶ್ವಿನಿ ಮುಲಾಜು ತೋರಿಸಲಿಲ್ಲ. ಯಾವುದೋ ಸಿನಿಮಾದಲ್ಲಿ ನೋಡಿದ್ದು ತಲೆ ಹೊಕ್ಕುಬಿಟ್ಟಿದೆ.

"ಮುಂದಿನ ತಿಂಗಳು ನೀನು ಕೇಳಿದ್ರೂ ಹೊಸ ನೋಟು ಕೊಡಲ್ಲ ನಿಂಗೆ.." ಅಂದೆ ಖಾರವಾಗಿ. ಅವಳ ಮುಖ ಝುಗ್ಗನೆ ಬೆಳಗಿತು. ಇಸ್ತ್ರಿ ಹಾಕಿದಂತಿದ್ದ ಆ ನೋಟುಗಳನ್ನು ನನ್ನ ಕಣ್ಣೆದುರೇ ಸಣ್ಣಗೆ ಮಡಿಚಿ ಮಡಿಚಿ ವೇಲ್‌ನ ತುದಿಯಲ್ಲಿ ಸುತ್ತಿ ಗಂಟು ಹಾಕಿಟ್ಟುಕೊಂಡಳು ಚಿತ್ರಾಂಗಿ.

■

---

**ಕೊರವಂಜಿ ಅಪರಂಜಿ ಆಯೋಜಿಸಿದ್ದ ೨೦೦೬ರ**
**"ಟಿ. ಸುನಂದಮ್ಮ ನೆನಪಿನ ಹಾಸ್ಯೋತ್ಸವ"ದಲ್ಲಿ**
**ಕನ್ನಡದ ಪ್ರಸಿದ್ಧ ಲೇಖಕಿ**
**ಶ್ರೀಮತಿ ನುಗ್ಗೇಹಳ್ಳಿ ಪಂಕಜ ಅವರನ್ನು ಸನ್ಮಾನಿಸಲಾಗಿತ್ತು**

# ನಿಲ್ಲಿಸಿ...ನಿಲ್ಲಿಸಿ... ಸ್ಟಾಪ್ .......ಸ್ಟಾಪ್

**♦ಧಾರಿಣಿ ಮಾಯಾ**

ಒಮ್ಮೆ ನನ್ನ ಮೂರುವರ್ಷದ ಮಗಳನ್ನು ಮದುವೆ ಮನೆಗೆ ಕರೆದುಕೊಂಡು ಹೋಗಿದ್ದೆ. ಮದುವೆ ಮನೆ ಎಂದ ಮೇಲೆ ಎಲ್ಲರ ಸಡಗರ, ಸಂಭ್ರಮ ಕೇಳಬೇಕೆ. ಮದುವೆ ಮಂಟಪದಲ್ಲಿ ರೇಷ್ಮೆ ಅಂಗಿ–ಪಂಚೆ–ಶಲ್ಯತೊಟ್ಟ ಗಂಡಸರು ಹಾಗು ಜರತಾರಿ ಸೀರೆ, ತಲೆತುಂಬಾ ಹೂ ಮುಡಿದ ಹೆಂಗಸರು ಶಾಸ್ತ್ರೋಕ್ತಕ್ಕೆ ಬೇಕಾಗುವ ಸಾಮಾನುಗಳ ಏರ್ಪಾಡನ್ನು ಮಾಡುತ್ತಿದ್ದರು. ಇನ್ನು ಯುವಕ, ಯುವತಿಯರದೇ ಬೇರೆ ಪರಿ. ನವಕನ್ನಿಕೆಯರು ಲೆಹಂಗಾ, ಮೊಗ್ಗಿನ ಜಡೆ ಹಾಕಿಕೊಂಡು ಗಲಗಲನೆ ನಗುತ್ತಾ ಎಲ್ಲರ ಗಮನ ಸೆಳೆಯುತ್ತಿದ್ದರು. ಇನ್ನು, ಜುಬ್ಬಾ ತೊಟ್ಟ ಚಿಗುರು ಮೀಸೆಯ ಯುವಕರು ಕನ್ನಿಕೆಯರ ದೃಷ್ಠಿ ಸೆಳೆಯಲು ಅತ್ತಿಂದಿತ್ತ ಅವರಿದ್ದ ಕಡೆಯೇ ಸುಖಾಸುಮ್ಮನೆ ಸುತ್ತಾಡುತ್ತಿದ್ದರು.


ನಾನು ಇವರೆಲ್ಲರ ವೇಷಭೂಷಣವನ್ನು ನೋಡುತ್ತಾ ನನ್ನ ಮಗಳ ಜೊತೆ ನಾಲ್ಕನೇ ಸಾಲಿನ ಕುರ್ಚಿಯಲ್ಲಿ ಕುಳಿತಿದ್ದೆ. ನನ್ನ ಮಗಳೂ ಕೂಡ ಎಲ್ಲರನ್ನು ಪಿಳಿಪಿಳಿ ನೋಡುತ್ತಿದ್ದಳು. ಸ್ವಲ್ಪ ಸಮಯ ಕಳೆಯುತ್ತಿದ್ದಂತೆ ಅವಳ ಸಹನೆಯ ಕಟ್ಟೆ ಒಡೆಯಿತು. ಎಡೆಬಿಡದೆ ತಾರಕಕ್ಕೇರಿದ್ದ ಓಲಗ, ಡೋಲಿನ ಸದ್ದು ಒಂದು ಕಡೆ, ತೊಟ್ಟಿದ್ದ ರೇಶ್ಮೆ ಬಟ್ಟೆಯಿಂದ ಮತ್ತೂ ಶೆಖೆಯಾಗಿ ಕಿರಿಕಿರಿಯೆನಿಸಿ ಮನೆಗೆ ಹೋಗೋಣವೆಂದು ಒಂದೇ ಸಮನೆ ಪೀಡಿಸಹತ್ತಿದಳು. ಅವಳನ್ನು ಸುಮ್ಮನಾಗಿಸಲು ಮದುವೆ ಮನೆಯ ಹೊರಗೆ ಕರೆದುಕೊಂಡು ಹೋಗಿ ಒಂದು ಗುಲಾಬಿ ಬಣ್ಣದ ಬಲೂನ್ ಕೊಡಿಸಿದ ಮೇಲೆ ನನ್ನ ಕಂದನಮುಖದಲ್ಲಿ ನಗು ಮೂಡಿತು. ಇನ್ನೇನು ಲಗ್ನದ ಸಮಯ. ಮದುವೆ ಮಂಟಪದಲ್ಲಿ ಗಡಿಬಿಡಿ, ಶಾಸ್ತ್ರೋಕ್ತಗಳು ಜೋರಾಗಿ ನಡೆಯುತ್ತಿತ್ತು. ನನ್ನ ಪುಟ್ಟಿ, 'ಅಮ್ಮಾ, ಇನ್ನು ಎಷ್ಟು ಹೊತ್ತು' ಎಂದು ಪುನಃ ಶುರು ಮಾಡಿದಳು. 'ಇನ್ನೇನು ಗಂಡು ಹೆಣ್ಣಿಗೆ ತಾಳಿ ಕಟ್ಟಿದರೆ ಮುಗಿಯಿತು ಪುಟ್ಟಿ, ಆಮೇಲೆ ಊಟ ಮಾಡಿ ಮನೆಗೆ ಹೋಗುವಾ,' ಎಂದೆ.ಅವಳಿಗೆ ಅದೆಷ್ಟು ಅರ್ಥವಾಯಿತೋ ಗೊತ್ತಿಲ್ಲ, ಇದ್ದಕ್ಕಿದ್ದಂತೆ ಗಂಭೀರಳಾಗಿ ಕುಳಿತು ಮಂಟಪದಲ್ಲಿ ನಡೆಯುತ್ತಿದ್ದ ಕಾರ್ಯಗಳನ್ನೆಲ್ಲಾ ತದೇಕಚಿತ್ತದಿಂದ ವೀಕ್ಷಿಸುತ್ತ ಕುಳಿತಳು.

ಅವಳ ಸಡನ್ ಸೈಲೆನ್ಸ್ ನೋಡಿ ನನಗೆ ಆಶ್ಚರ್ಯವಾದರೂ ಸ್ವಲ್ಪ ಸಮಾಧಾನವಾಯಿತು.

ಮಂಟಪದಲ್ಲಿ ಮಂತ್ರ ಪಠಿಸುತ್ತಿದ್ದ ಪುರೋಹಿತರು, 'ಈಗ ಮಾಂಗಲ್ಯ ಧಾರಣೆ' ಎಂದು ಎಲ್ಲರಿಗೂ ಹೇಳುತ್ತಾ ಮತ್ತೂ ಜೋರಾಗಿ ಮಂತ್ರ ಪಠಿಸಹತ್ತಿದರು. ಈಗ ಮತ್ತೂ ಜೋರಾಗಿ ಸದ್ದು ಮಾಡಹತ್ತಿದ ಓಲಗ, ಡೋಲುಗಳ ಮಧ್ಯೆ ಪುರೋಹಿತರ ಪಠಣ ಯಾರ ಕರ್ಣಕ್ಕೂ ಕೇಳದೇ ಹೋಯಿತು. ಮದುಮಗ ತನ್ನ ಕೈಯಲ್ಲಿದ್ದ ಹಳದಿ ದಾರ, ಅದಕ್ಕಂಟಿದ್ದ ಮಾಂಗಲ್ಯದ ಬಿಲ್ಲೆಯನ್ನು ಎತ್ತರಕ್ಕೆ ಹಿಡಿದು, ಅಲ್ಲಿ ನೆರೆದಿದ್ದ ಜನರಿಗೆಲ್ಲಾ ಒಮ್ಮೆ ತೋರಿಸಿದನು. ಇನ್ನು ಈ ಹೆಣ್ಣು ನನ್ನವಳು, ನಾನು ಇವಳನ್ನು ಗೆದ್ದೆ ಎಂದು ಹೇಳುವಂತಿತ್ತು ಅವನ ಮುಖಭಾವ. ಅವ ತಾಳಿ ಹಿಡಿದು ಇನ್ನೇನು ಕನ್ಯೆಗೆ ಮೂರು ಗಂಟು ಹಾಕಬೇಕು. ಮದುಮಗಳು ಹರಕೆಯ ಕುರಿಯಂತೆ

ತಲೆತಗ್ಗಿಸಿ ಕೊರಳೊಡ್ಡಿ ಗಂಟು ಹಾಕಿಸಿಕೊಳ್ಳಲು ಸನ್ನದ್ಧಳಾಗಿದ್ದಳು.

ಇದನ್ನೆಲ್ಲಾ ನೋಡುತ್ತಿದ್ದ ನನ್ನ ಪೋರಿ, ಇದ್ದಕ್ಕಿದ್ದಂತೆ ಕುಳಿತ ಕುರ್ಚಿಯಿಂದ ಇಳಿದು ಒಂದೆರಡು ಹೆಜ್ಜೆ ಮುಂದೆ ಹೋಗಿ, 'ನಿಲ್ಲಿಸಿ...ನಿಲ್ಲಿಸಿ. ಸ್ಟಾಪ್ ಸ್ಟಾಪ್....' ಎಂದು ತನ್ನ ಪುಟ್ಟ ಕೈಗಳನ್ನು ಎತ್ತಿ ಸಿಗ್ನಲ್ ಮಾಡಹತ್ತಿದಳು. ತಕ್ಷಣ ಏನಾಗುತ್ತಿದೆ



ಎಂಬ ಅರಿವಾಗದೆ ಗಾಬರಿಯಿಂದ, 'ಪುಟ್ಟಿ, ಬಾ ಇಲ್ಲಿ, ಯಾಕೆ ಹೀಗೆ ಕೂಗ್ತಿದ್ದೀಯಾ,' ಎಂದು ಗದರಿ ಹಿಂದಕ್ಕೆಳೆದುಕೊಂಡೆ. ಅದಕ್ಕವಳು 'ಮತ್ತಿನ್ನೇನಮ್ಮಾ, ಟಿವಿ, ಸಿನಿಮಾದಲ್ಲಿ ಕತ್ತಿಗೆ ಸರ ಕಟ್ಟುವ ಟೈಮಲ್ಲೇ ಅಲ್ವಾ, ಯಾರಾದ್ರು ಬಂದು 'ನಿಲ್ಲಿಸಿ' ಅಂತ ಕೂಗೋದು' ಎಂದು ಮುಗ್ಧವಾಗಿ ಉತ್ತರಿಸಿದಳು.

ಕೂಡಲೇ ನಾನು ಅವಳ ಬಾಯಿಗೆ ನನ್ನ ಕೈ ಅಡ್ಡ ಹಾಕಿ ಮುಜುಗರದಿಂದಲೇ ಒಮ್ಮೆ ಸುತ್ತಮುತ್ತ ಕಣ್ಣುಹಾಯಿಸಿದೆ. ಸದ್ಯ, ಎಲ್ಲರ ಚಿತ್ತ ಮಂಟಪದತ್ತ ಇತ್ತು. ಯಾರಿಗೂ ಇವಳು ಹೇಳಿದ್ದು ಕೇಳಿಸಲಿಲ್ಲವಲ್ಲಾ, ಬದುಕಿದೆಯಾ ಬಡಜೀವಾ ಎಂದು ಮನಸ್ಸಿನಲ್ಲೇ ಸಮಾಧಾನ ಪಟ್ಟುಕೊಂಡೆ. ಇವಳು 'ನಿಲ್ಲಿಸಿ...ನಿಲ್ಲಿಸಿ...'ಎಂದ ಪುಟ್ಟ ಕೂಗು ಅಲ್ಲಿ ಮೊಳಗುತ್ತಿದ್ದ ವಾದ್ಯ, ಜನಸಮೂಹ ಸಂಭ್ರಮದ ಕೇಕೆಯ ಮಧ್ಯೆ ಕರಗಿ ಹೋಗಿತ್ತು.

ಅವಳು ನನ್ನ ಕೈ ಬಿಡಿಸಿಕೊಂಡು ತಾನೇನು ತಪ್ಪು ಮಾತನಾಡಿದೆ ಎಂಬಂತೆ ನನ್ನತ್ತಲೇ ದುರುದುರು ನೋಡಿದಳು. ಈ ಪುಟ್ಟ ಪೋರಿಗೆ ಹೇಗಪ್ಪಾ ಇದನ್ನೆಲ್ಲಾ ಅರ್ಥ ಮಾಡಿಸುವುದು ಎಂದು ಮನದಲ್ಲೇ ಲೆಕ್ಕ ಹಾಕಹತ್ತಿದೆ. ಅಷ್ಟರಲ್ಲಿ ಅವಳು ತನ್ನ ತಲೆಮೇಲೆ ಬಿದ್ದ ಬಣ್ಣಬಣ್ಣದ ಅಕ್ಷತೆ ಕಾಳುಗಳನ್ನು ಕೊಡವಿಕೊಳ್ಳುವುದರಲ್ಲಿ ಮಗ್ನಳಾದಳು. ನಾವು ಕುಳಿತಿದ್ದ ಜಾಗ ಖಾಲಿ ಮಾಡಿದರೆ ಸಾಕಿತ್ತು ನನಗೆ. ಊಟದ ನಂತರದ ಐಸ್ ಕ್ರೀಮ್ ಆಮಿಷ ತೋರಿಸಿ ನನ್ನ ಮಗಳನ್ನು ಡೈನಿಂಗ್ ಹಾಲ್‌ಗೆ ಕರೆದುಕೊಂಡು ಹೋದೆ.

ಈ ಪ್ರಸಂಗ ನಡೆಯುವುದಕ್ಕೆ ಒಂದು ಬಲವಾದ ಕಾರಣ ಇದೆ. ಚಿಕ್ಕ ಮಕ್ಕಳು ದೊಡ್ಡವರ ಕಾರ್ಯವೈಖರಿಯನ್ನು ಹೇಗೆ ಅನುಸರಿಸುತ್ತಾರೆ ಎಂಬುದಕ್ಕೆ ಇದೇ ಸಾಕ್ಷಿ. ನಮ್ಮ ಮನೆಯ ಟಿ.ವಿಯಲ್ಲಿ ಬರುವ ಸೀರಿಯಲ್, ಸಿನಿಮಾಗಳನ್ನು ನೋಡುವಾಗ, ನನ್ನ ಮಗಳೂ ಅಲ್ಲೇ ಓಡಾಡಿಕೊಂಡಿದ್ದು ಅದರಲ್ಲಿ ತೋರಿಸುವ ವಿಷಯಗಳು ಅರ್ಥವಾಗದಿದ್ದರೂ ಅವಕ್ಕೆಲ್ಲಾ ತನ್ನದೇ ಅರ್ಥ ಕಲ್ಪಿಸಿ ನೋಡುತ್ತಿದ್ದುದುಂಟು. ಈ ಚುರುಕು ಮೆಣಸಿನಕಾಯಿ ಪೋರಿ ಸಾಕಷ್ಟು ಸೀರಿಯಲ್‌ಗಳ ಹೆಸರು, ಅವುಗಳ ಹಾಡುಗಳನ್ನು ಯಥಾವತ್ತಾಗಿ ಇಳಿಸುತ್ತಿದ್ದಳು. ನಾವೆಲ್ಲ ಅವಳ ಬುದ್ಧಿವಂತಿಕೆಗೆ ಬೀಗುತ್ತಿದ್ದೆವು. ಸಾಮಾನ್ಯವಾಗಿ ಸಿನಿಮಾ ಅಥವ ಸೀರಿಯಲ್‌ಗಳಲ್ಲಿ ಬರುವ ಮದುವೆ ಸೀನ್‌ಗಳಲ್ಲಿ, ಮದುಮಗ ಇನ್ನೇನು ಮದುಮಗಳಿಗೆ ತಾಳಿ ಕಟ್ಟಬೇಕೆಂಬ ಸಂದರ್ಭದಲ್ಲಿ ಯಾರೋ ಮೂರನೇ ವ್ಯಕ್ತಿ ಎಲ್ಲಿಂದಲೋ ಅಚಾನಕ್ಕಾಗಿ ಒಂದು "ನಿಲ್ಲಿಸಿ" ಎಂದು ಕೂಗಿದಾಗ, ಮದುವೆ ಅರ್ಧಕ್ಕೇ ಮುರಿದು, ಎಲ್ಲರೂ ಗೋಳಿಡುವ ಚಿತ್ರ ಸರ್ವೇಸಾಮಾನ್ಯ. ಆದರೆ, ಈ ದೃಶ್ಯ ನನ್ನ ಪುಟ್ಟ ಪೋರಿಯ ಮನಸ್ಸಿನಾಳದಲ್ಲಿ ಇಷ್ಟೊಂದು ಆಳವಾಗಿ ನಾಟಿರುತ್ತದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ.

ನೋಡಿದಿರಾ, ಮಕ್ಕಳು ಏನೂ ಅರಿಯದ ಮುಗ್ಧರು. ಅವರಿಗೆ ಯಾವುದು ಸರಿ, ಯಾವುದು ತಪ್ಪು ಎಂಬ ಅರಿವು ಇರುವುದಿಲ್ಲ. ಹಿರಿಯರು ಬಾಯಿ ಮಾತಲ್ಲಿ ಎಷ್ಟು ಹೇಳಿಕೊಟ್ಟರೂ ಅವರಿಗೆ ಅರ್ಥವಾಗುವುದು ಕಡಿಮೆ. ಆದರೆ ಕಣ್ಣಿಗೆ ಕಂಡದ್ದು ಆ ಪುಟ್ಟ ಮನಸ್ಸಿನಲ್ಲಿ ಅಚ್ಚೊತ್ತಿರುತ್ತದೆ. ಮಗು ಇನ್ನೂ ಸಣ್ಣದು, ಅದಕ್ಕೆ ಏನೂ ತಿಳಿಯುವುದಿಲ್ಲ ಎಂದು ಅಂದುಕೊಳ್ಳುವುದೇ ಹಿರಿಯರ ತಪ್ಪು ಕಲ್ಪನೆ. ವಾಸ್ತವಿಕವಾಗಿ ಮಕ್ಕಳೇ ಬುದ್ಧಿವಂತರು. ಏನು ನೋಡಿದರೂ ಅದನ್ನು ಯಥಾವತ್ತಾಗಿ ನಕಲು ಮಾಡಿಬಿಡುತ್ತಾರೆ. ಹಾಗಾಗಿ ಒಂದು ಮಗು ಬೆಳೆಸುವಲ್ಲಿ ತಂದೆತಾಯಂದಿರು ಹಾಗು ಮನೆಯ ಹಿರಿಯಿಕರ ಪಾತ್ರ ಬಹಳ ಮಹತ್ವದ್ದು. ಇದು ತಂದೆತಾಯಂದಿರಿಗೆಲ್ಲಾ ಒಂದು ರೀತಿಯ ಜೀವನದ ಪಾಠವಿದ್ದಂತೆ.

ಇಂದು ಈ ಪ್ರಸಂಗ ನೆನಪಿಸಿಕೊಂಡು ನನ್ನ ಭುಜದೆತ್ತರಕ್ಕೆ ಬೆಳೆದ ಮಗಳ ಮುಂದೆ ಹೇಳಿದಾಗೆಲ್ಲಾ, ಅವಳು ಜೋರಾಗಿ ನಗುತ್ತಾ 'ನಿಲ್ಲಿಸಿ...ನಿಲ್ಲಿಸಿ...' ಎಂದು ಕೂಗುತ್ತಾ ಕೇಕೆ ಹಾಕಿಕೊಂಡು ನಕ್ಕು ಮಜಾ ತಗೊಳುತ್ತಾಳೆ.

■

## ಯಾರೇ ಕಂಡವರು

ಒಂದು ಸಂಜೆ ನಾನು ಇಂಡಿಯಾ ಗ್ಯಾರೇಜ್ ಮುಂದೆ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದೆ. ಯಾವುದೋ ಒಂದು ಸ್ಕೂಟರ್ ಬಂದು ಅಲ್ಲಿ ನಿಂತುಕೊಂಡ್ತು. ನಾನು ಅತ್ತ ಕಡೆ ಸರಿಯಾಗಿ ಗಮನಿಸಲಿಲ್ಲ. ಯಾರೋ ಪುಂಡರಿರಬಹುದೆಂದು ಸುಮ್ಮನೆ ನಿಂತಿದ್ದೆ. ನನ್ನ ಸ್ನೇಹಿತೆ "ನೋಡೇ ನಿಮ್ಮ ಹಸ್ಬೆಂಡ್ ಬಂದಿದಾರೆ" ಅಂದಳು. "ಏ ಅಲ್ಲ ಕಣೆ ಇದ್ಯಾರೋ ಕರಿತಲೆ ಮನುಷ್ಯ" ಎಂದು ಮತ್ತೆ ಆ ಕಡೆಗೆ ನೋಡಿದರೆ ಅದು ನಾಣಿಯವರೇ. ಅವರು ಅಬಚೂರಿನ ಪೋಸ್ಟಾಫೀಸು ಚಿತ್ರಕ್ಕೆ ಪಾತ್ರ ಮಾಡಲು ತಲೆಗೆ ಕರಿ ಬಣ್ಣ ಬಳಿದಿದ್ದರು. ಅವರ ತಲೆಯಲ್ಲಿ ಕರೀ ಕೂದಲನ್ನೇ ಕಂಡಿರದಿದ್ದ ನನಗೆ ನಿಜವಾಗಿ ಅವರ ಗುರುತು ಹತ್ತಿರಲಿಲ್ಲ. ನಮ್ಮ ಅತ್ತೆಯವರೂ ಸಾಕು ಕಣೋ ನಾಣಿ ಈ ಕರಿ ಬಣ್ಣ ನೋಡಲಾರೆ. ನಿನ್ನ ಬಿಳೀ ಕೂದಲೇ ಚೆನ್ನ ಅಂದಿದ್ದರು.

**(ಭಾರ್ಗವಿ ನಾರಾಯಣ್ ಅವರ 'ನಾನು ಭಾರ್ಗವಿ' ಗ್ರಂಥದಿಂದ)**

# ರಾಜಮ್ಮಳ ಕಿವಿಮಾತು

**♦ಲತಾ ಹೆಗಡೆ**

'ಎಲ್' ಆಕಾರದ ಸೋಫಾ ಸೆಟ್ ಮಾಡಿಸಿದ್ದು, ಹೊಸ ನಮೂನೆಯ ಊಟದ ಟೇಬಲ್ ಕೊಂಡದ್ದು ತೋರಿಸುವ ಸಲುವಾಗಿ ಹಿಂದಿನ ಮನೆ ಮಾಮಿ ಆಗಾಗ ಅವರ ಮನೆಗೆ ಆಹ್ವಾನಿಸುತ್ತಲೇ ಇದ್ದರು. ಅಂತೂ ಇಂತೂ ಹೋದ ವಾರ ಮುಹೂರ್ತ ಕೂಡಿ ಬಂದಿತ್ತು. ಎಲ್ಲವನ್ನೂ ನೋಡಿ, ಹೊಗಳಿ ಮೆತ್ತನೆಯ ಸೋಫಾ ಮೇಲೆ ಕುಳಿತು ಆಲೂ ಚಿಪ್ಸ್ ಮೆಲ್ಲುತ್ತಾ ಹಬೆಯಾಡುವ ಚಹಾ ಹೀರುತ್ತಾ ಲೋಕಾಭಿರಾಮವಾಗಿ ಹರಟುತ್ತಿರುವಾಗ ಕೈಯ್ಯಲ್ಲಿದ್ದ ಚಿಪ್ಸ್ ತುಂಡೊಂದು ನೆಲದ ಮೇಲೆ ಬಿತ್ತು.

'ಇರ್ಲಿ ಬಿಡಿ ಆಮೇಲೆ ತೆಗೆದು ಬಿಸಾಕಿದ್ರಾಯ್ತು... ' ಎಂದಿದ್ದರು. ಇದ್ದಕ್ಕಿದ್ದಂತೆ ಟೀಪಾಯ್ ಅಡಿಯಿಂದ ಅದೇನೋ ಕಪ್ಪಗಿದ್ದದ್ದು ಥಟ್ಟನೆ ಬಂದಂತಾಗಿ ನೋಡುನೋಡುತ್ತಿದ್ದಂತೇ ಚಿಪ್ಸ್ ಮಂಗಮಾಯ! ಮಾಮಿಯೋ ಹೆದರಿ ಕಿಟಾರನೆ ಕಿರುಚಿ ಕಾಲುಗಳೆರಡನ್ನು ಮಡಚಿ ಸೋಫಾ ಮೇಲಿರಿಸಿಕೊಂಡ ರಭಸಕ್ಕೆ ಕೈಲಿದ್ದ ಚಹಾ ಮೈಮೇಲೆಲ್ಲಾ ತುಳುಕಿತ್ತು.

"ಹಾಳಾದ್ದು... ! ಇಲಿ ಕಾಟ ಜಾಸ್ತಿ ಆಗ್ಬಿಟ್ಟಿದೆ, ರಾತ್ರಿ ಹೊತ್ತಂತೂ ಅದರದ್ದೇ ಆರ್ಭಟ. ತಡಬಡ ಸದ್ದು ಇದ್ದದ್ದೇ... ನನಗೋ ಒಮ್ಮೆ ಎಚ್ಚರ ಆಯ್ತಂದ್ರೆ ನಿದ್ರೇನೇ ಬರೋಲ್ಲ. ಮೈಮೇಲೆಲ್ಲಾದ್ರೂ ಹಾರೀತು ಅಂತ ಸೊಳ್ಳೆಪರ್ದೆ ಕಟ್ಕೊಳ್ಳೋಕೆ ಶುರು ಮಾಡಿದ್ದೀನಿ. ಮೊದ್ಲಾಗಿದ್ರೆ ಬರೀ ರಾತ್ರಿ ಮಾತ್ರ ಅಡಗುತಾಣದಿಂದ ಹೊರಬರೋದು. ಈಗ ನೋಡಿದ್ರೆ ನಮ್ ಮನೇನ ಸ್ವಂತ ಮಾಡ್ಕೊಂಡ್ಬಿಟ್ಟಿದೆ ಅನ್ಸುತ್ತೆ ; ಹೊತ್ತುಗೊತ್ತು ಒಂದೂ ಇಲ್ಲ ಅನಿಷ್ಟ ಮುಂಡೇದಕ್ಕೆ... ಬೇಕ್ಬೇಕಾದಾಗ್ಲೆಲ್ಲಾ ಕಾಣಿಸ್ಕೊಂಡು ಜೀವ ಬಾಯಿಗೆ ಬರೋ ಹಾಗೆ ಮಾಡುತ್ತೆ ... ಏನ್ಮಾಡ್ಬೇಕೋ ಗೊತ್ತಾಗ್ತಾ ಇಲ್ಲ... " ಮಾಮಿಯ ಮನದ ತುಂಬಾ ಇಲಿಯ ಭಯವೇ ಅವರಿಸಿಕೊಂಡಂತಿತ್ತು.

"ಮಾಮಿ, ಇಲಿ ಬೋನ್ ಇಟ್ಟು ನೋಡಿ, ಅದ್ರೊಳಗೆ ಕರಿದದ್ದು ಏನಾದ್ರೂ ಇಟ್ರೆ ಇಲಿ ತಾನಾಗೇ ಬಂದು ಬೀಳತ್ತೆ. ನಮ್ಮ ಅಮ್ಮನ ಮನೇಲಿ ಯಾವಾಗ್ಲೂ ಹಾಗೆ ಮಾಡೋದು. ಆಮೇಲೆ ಅದನ್ನ ಎಲ್ಲಾದ್ರೂ ತೊಗೊಂಡು ಹೋಗಿ ಬಿಟ್ಟು ಬಂದ್ರಾಯ್ತು... " ಸಲಹಿಸಿದ್ದೆ.



"ಅಯ್ಯೋ... ಎಲ್ಲ ಮಾಡಿ ನೋಡಿದ್ವಿ. ಮನೇಲ್ ಮಾಡಿದ್ದು ಸೇರಲ್ವೇನೋ ಅಂದ್ಕೊಂಡು ಮೂಲೇಲಿರೋ ಮಿರ್ಚಿ ಬಸಪ್ಪನ ಅಂಗಡಿಯಿಂದ ಕರಿದ ಬಜ್ಜಿ, ಬೋಂಡಾ ತಂದಿಟ್ಟು ನೋಡಿದ್ದಾಯ್ತು. ಎಷ್ಟು ಸರ್ತಿ ಇಟ್ಟರೂ ಬೋನ್ ಹತ್ತಿರಕ್ಕೂ ಬಂದ್ಹಾಗೆ ಕಾಣ್ಸೋಲ್ಲ. ಅದಕ್ಕೆ

ಹೆಂಗ್ ಗೊತ್ತಾಗುತ್ತೋ ಏನೋ, ಈಗಿನ ಕಾಲದ್ ಸ್ಮಾರ್ಟ್ ಜನಾಂಗದವ್ರ ತರಹ ಇಲೀನೂ ಬಹಳ ಪಾಕಡಾ ಆಗ್ಬಿಟ್ಟಿದೆ ಅನ್ಸುತ್ತೆ. ಅಂದ್ಹಾಗೆ ಹೋದ್ ತಿಂಗ್ಳು ಕ್ರಿಸ್ಮಸ್ ಹಬ್ಬಕ್ಕೆ ನೆಂಟ್ರು ಬಂದಿದ್ರಲ್ಲ... ಅವ್ರಿಗೆ ಛಾದ್ರಾ ಬೆಡ್ಶೀಟು ಕೊಡೋಕ್ಕಂತ ಮಹಡಿ ಮೇಲಿನ ರೂಮಿನ ಕಪಾಟಿನ ಬಾಗಿಲು ತೆಗೆದಿದ್ದೆ. ಏನಕ್ಕೋ ಡ್ರಾಯರ್ ಎಳೆದಾಗ ನಾಲ್ಕು ಇಲಿ ಮರಿಗಳು ! ಅದ್ಯಾವಾಗ ಒಳಹೊಕ್ಕಿತ್ತೋ ಏನೋ ಸಂಸಾರಾನೇ ಶುರೂ ಮಾಡಿದ್ದಕ್ಕೆ ಸಾಕ್ಷಿ ಹಾಯಾಗಿ ಮಲಕ್ಕೊಂಡಿದ್ವು. ಅದ್ರೊಳ್ಗೆ ಹೊಕ್ಕಿದ್ದಾದ್ರೂ ಹೇಗೆ ಅಂತೀನಿ... ಬಟ್ಟೇನೆಲ್ಲಾ ಕಡಿದು ತುಂಡುತುಂಡು ಮಾಡಿತ್ತು. ಆ ಕೆಟ್ ವಾಸ್ನೆಗೆ ಹೊಟ್ಟೆಯೊಳಗೆ ಕೈಹಾಕಿ ಕದಡಿದ ಅನುಭವ. ಆಮೇಲೆ ನಮ್ಮನೇವ್ರು ಮರಿಗಳ್ನ, ಬಟ್ಟೆ ಚೂರು – ಕಸ ಎಲ್ಲಾ ತೆಗೆದು ಬಿಸಾಕಿ ಬಂದ್ರು. ಅಲ್ಲಿ ಸ್ವಚ್ಛಗೊಳಿಸೋಕೆ ಸಾಕ್ ಬೇಕಾಯ್ತು ಗೊತ್ತಾ? ಈವಾಗ ಅಪ್ಪ ಅಮ್ಮ ಮಾತ್ರ ಇದೆ ಅನ್ಸುತ್ತೆ.. ಇನ್ನೆಲ್ಲಿ ರಂಪಾಟ ಮಾಡಿದ್ಯೋ... ಅಯ್ಯಪ್ಪಾ... ಸಾಕಾಗಿ ಹೋಗಿದೆ..."

"ಟೀವೀಲಿ ತೋರಿಸ್ತಾರಲ್ಲಾ, ಆ ಬಿಲ್ಲೆ ತಂದಿಟ್ಟು ನೋಡಿ ಮಾಮಿ... ತಿಂದು ಹೊರಗ್ ಹೋಗಿ ಸಾಯುತ್ತಂತೆ..."

"ಅದನ್ನೂ ಮಾಡಿದ್ದಾಯ್ತು. ಮೂಲೇಲಿ ಇಟ್ಟ ಆ ಬಿಲ್ಲೆ ಪುಡಿಪುಡಿ ಆಗಿದ್ದು ನೋಡಿದ್ರೆ ತಿಂದಿತ್ತು ಅನ್ನಿಸಿತ್ತು. ಆದ್ರೆ ವಿಷದೊಳಗೂ ಕಲಬೆರಿಕೆನೋ ಏನೋ, ಇಲೀಗ್ ಏನೇನೂ ಆಗಿಲ್ಲ ಅನ್ನೋಕೆ ರಾಜಾರೋಷವಾಗಿ ಓಡಾಡ್ಕೊಂಡಿರೋದೇ ಸಾಕ್ಷಿ" ಅಲವತ್ತುಕೊಂಡರು. ಹೋಗಿದ್ದು ಹೊಸ ಸೋಫಾ ಸೆಟ್ ನೋಡೋಕೆ, ಆದರೆ ಮಾತಿನ ಕೇಂದ್ರಬಿಂದು ಮಾತ್ರ ಪುಟ್ಟ ಇಲಿ.

ಅದೊಂದ್ ದಿನ ಹಿತ್ತಲಿಗೆ ಬಂದು ನನ್ನನ್ನು ಕರೆದಿದ್ದರು. ಹೋಗಿದ್ದೆ. ಕೈಯ್ಯಲ್ಲಿ ಅರ್ಧ ಮಾಡಿದ ಸೌತೇಕಾಯಿ ಹಿಡಿದಿದ್ದರು.

"ಇದನ್ನ ನೋಡಿ, ನಿನ್ನೆ ರಾತ್ರಿ ಸಲಾಡ್ ಮಾಡಿ ಉಳಿದರ್ಧ ಸೌತೇಕಾಯಿ ಫ್ರಿಡ್ಜ್‌ನಲ್ಲಿಡೋಕೆ ಮರೆತು ಬಿಟ್ಟಿದ್ದೆ. ಹೇಗ್ ತಿಂದಿದೆ ನೋಡಿ..." ಸೌತೇಕಾಯಿಯ ಒಳ ತಿರುಳನ್ನಷ್ಟೇ ಅಷ್ಟುದ್ದ ಹೊಂಡ ಮಾಡಿ ತಿಂದು ಒಳಮೈಯನ್ನು ಆದಷ್ಟೂ ನುಣುಪಾಗಿಸಿ ಕಲಾತ್ಮಕತೆ ಮೆರೆದಿತ್ತು ! ಹೊರಮೈಗೆ ಏನೇನೂ ಆಗಿರಲಿಲ್ಲ.

"... ಹೊಸ ಸೋಫಾ ಕೂಡ ಹಾಳು ಮಾಡಿದೆ. ಮೊನ್ನೆ ಮೂಲೇಲಿ ಸರಿಸಿ ನೋಡಿದಾಗ ಸ್ಪಂಜನ್ನೆಲ್ಲಾ ಕಡಿದೂ ಕಡಿದು ಗುಡ್ಡೆ ಹಾಕಿದ್ದು ಕಂಡು ಬಂತು. ಹಾಳಾದ್ದು, ಏನ್ಮಾಡ್ಬೇಕೋ ಏನೋ...

ಅಲ್ಲೇ ಪಾತ್ರೆ ತಿಕ್ಕುತ್ತ ಕುಳಿತ ರಾಜಮ್ಮ ಅಷ್ಟು ಹೊತ್ತಿಂದ ನಮ್ಮ ಸಂಭಾಷಣೆ ಕೇಳಿಸಿಕೊಳ್ಳುತ್ತಿದ್ದವಳು "ಅವು ಬೋ ಸೂಕ್ಷ್ಮ ಕಣ್ ಅಮ್ಮಾವ್ರೇ... ಔಸದಿ ಮಡ್ಗೋದು ಅವುಕ್ಕೆ ಗೊತ್ತಾಗ್ಬಾರ್ದು... ಸೇಲೆಂಟ್ ಆಗಿ ಇಕ್ಬೇಕು ಅಮ್ಮಾವ್ರೇ..." ಮಧ್ಯೆ ಬಾಯಿ ಹಾಕಿದ್ದಳು.

"ನಿಂದೊಳ್ಳೇ ಕಥೆ, ಅದ್ಯಾಕೆ ಹಂಗಂತೀಯಾ, ಇಲಿಗೆ ನಾವ್ ಮಾತಾಡಿದ್ದು ಅರ್ಥ ಆಗುತ್ತೆ ನೋಡು" ನಗು ತಡೆದುಕೊಳ್ಳುತ್ತಾ ಹೇಳಿದ್ದೆ.

"ಅವು ಮನೆ ಇಲೀ ಅಲ್ಲುವ್ರಾ, ಬಲ್ ಘಾಟಿ... ನಾವ್ ಮಾತಾಡಿದ್ದೆಲ್ಲಾ ಕೇಳಿಸ್ಕೊತಾವೆ, ಅರ್ಥನೂ ಮಾಡ್ಕೋತಾವೆ. ಅದ್ಕೇನೇಯ ಇಲಿ ಬೋನ್ ತಾವ

ಬರಾಕಿಲ್ಲ... ಎಚ್ಚೆತ್ತುಕೊಂಡು ಬಿಡ್ತವೆ. ಅಕಸ್ಮಾತ್ ತಿಂದ್ರುನೂ ನೀರ್ ಕುಡಿದ್ ಬಿಟ್ರೆ 'ಇಸ' ಕೆಲ್ಸ ಮಾಡಾಕಿಲ್ಲ ಅಮ್ಮೋರೇ. ಅದ್ಕೇ ಯೋಳೋದು ಬಲ್ ಜಾಗ್ರತೆಯಿಂದ ಮಾತಾಡ್ದಲೆ ಸೇಲೆಂಟ್ ಆಗಿ ಇಸ ಇಕ್ಬೇಕು. ಒಂದ್ ತೊಟ್ಟು ನೀರೂ ಸಿಗ್ದೇ ಇರೋ ಹಂಗ್ ನೋಡ್ಕೊಬೇಕು... " ತಲೆ ಬಗ್ಸಿ ಪಾತ್ರೆ ಗಸಗಸ ತಿಕ್ಕುತ್ತಲೇ ಅವಳೇನೋ ಗಂಭೀರವಾಗಿಯೇ ಹೇಳಿದ್ದಳು.

"ಹೋಗೇ ನೀನೊಂದು ಏನೇನೋ ಹೇಳ್ತೀಯಾ... ಅದಕ್ಕೇನೇ ಗೊತ್ತಾಗತ್ತೆ ?"

"ಅಮ್ಮಾವ್ರೇ, ಸತ್ವಾಗ್ಲೂ ನಾ ಯೊಳೋದು ದಿಟಾನೇಯ... ಹೋಗ್ಲಿ ಬಿಡಿ ಅಮ್ಮಾವ್ರೇ, ನನ್ತಾವ ಇಸ್ಟಾಂಗ್ ಔಸದಿ ಐತೆ. ನಾಳೆ ವತ್ತಾರೆ ತತ್ತೀನಿ, ಚಪಾತಿಯಿಟ್ಟು ಕಲ್ಸಿ ಇಟೀಟು ಉಂಡೆ ಮಾಡಿ ವಳೀಕೆ ಔಸದಿ ಇಟ್ಟು ನಾ ಯೋಳ್ದಂಗೆ ಸಬ್ದ ಮಾಡ್ದಲೆ ಸೇಲೆಂಟ್ ಆಗಿ ಅದು ಎಲ್ಲೆಲ್ಲಿ ವೋಯ್ತದೊ ಅಲ್ಲೆಲ್ಲಾ ಮಡ್ಗಿ. ಸಾಯ್ಲಿಲ್ಲಾಂದ್ರೆ ಯೋಳಿ... " ಚಾಲೆಂಜ್ ಮಾಡಿದ ವರಸೆಗೆ ದಂಗಾಗಿದ್ದೆವಾದರೂ ಅವಳ ಮಾತನ್ನು ಮಾಮಿ ಚಾಚೂ ತಪ್ಪದೇ ಪಾಲಿಸಿದ್ದರು.. ಕಾರಣಾಂತರಗಳಿಂದ ಈ ವಿಷಯ ಮರೆತುಹೋದದ್ದು ಸ್ವಲ್ಪ ದಿನಗಳ ನಂತರ ಫಕ್ಕನೆ ನೆನಪಿಗೆ ಬಂದು ಮಾಮಿಯನ್ನು ಕರೆದು ನಮ್ಮ ಕಥಾನಾಯಕ ಹಾಗೆಯೇ ಅವರ ಮನೆ ಖಳನಾಯಕನ ಕುರಿತಾಗಿ ವಿಚಾರಿಸಿದ್ದೆ.

"ನಿಮ್ ರಾಜಮ್ಮ ಹೇಳಿದ್ಹಂಗೇ ಮಾಡಿದ್ದೆ. ಅದೇನ್ ತಿಂತೋ ಬಿಡ್ತೋ ಗೊತ್ತಿಲ್ಲ... ಒಟ್ನಲ್ಲಿ ಇಲಿ ಮಾತ್ರ ಎಲ್ಲೆಲ್ಲೂ ಕಾಣ್ತಿಲ್ಲ. ಅಡುಗೆ ಮನೇಲಿ ಅದು ತಿನ್ನೋ ತರ್ಕಾರಿ, ಹಣ್ಣು, ವಡೆ ಇಟ್ ನೋಡ್ದೆ. ಅವೆಲ್ಲಾ ಹೆಂಗಿಟ್ಟಿದ್ನೋ ಹಂಗೇ ಇದ್ವು. ರಾಜಮ್ಮ ಹೇಳಿದ್ರೊಳ್ಗೂ ಹುರುಳಿದೆ ಅನ್ಸುತ್ತೆ ಕಣ್ರೀ... " ಮಾಮಿಯ ಮನದಾಳದ ಮಾತಿಗೆ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯದಾಗಿದ್ದೆ.

ಮಾರನೇದಿನ ರಾಜಮ್ಮ ಕೆಲಸ ಎಲ್ಲಾ ಮುಗಿಸಿ ಬಿಸಿಬಿಸಿ ಚಹಾ ಹೀರುತ್ತ ಕುಳಿತಾಗ "ರಾಜಮ್ಮಾ, ನೀ ಹೇಳ್ದ್ ಹಂಗೇ ಆಯ್ತು. ಮಾಮಿ ಮನೇಲಿ ಈವಾಗ ಇಲೀನೇ ಇಲ್ವಂತೆ. ನೀ ಹೇಳಿದ್ದು ಎಷ್ಟು ಸರೀ ಆಯ್ತು ಗೊತ್ತಾ... ಆವತ್ತು ನಾವ್ಗಳು ಮಾತಾಡಿದ್ದನ್ನ ಕೇಳಿಸ್ಕೊಂಡೇ ಓಡಿಹೋಗಿರ್ಬೇಕು... " ಇನ್ನೂ ಮಾತು ಮುಗಿಸಿರಲಿಲ್ಲ ಮಧ್ಯೆ ಬಾಯಿ ಹಾಕಿದ್ದಳು "ಅಮ್ಮಾವ್ರೇ, ನಾವ್ ಯಾವಾಗ್ಲೂ ಮಾಡೋದು ಹಂಗೇನೇಯಾ... ಇಲಿ ಮತ್ತೆ ಅವರ ಮನೆ ಕಡೆ ನುಸುಳಿದರೆ ಕೇಳಿ..." ಉಳಿದ ಚಹಾ ಸೊರ್ರೆಂದು ಹೀರಿ ತೊಳೆಯೋಕೆಂದು ಹಿತ್ತಲಿಗೆ ಹೋದಾಗ ಅವಳ ಮುಗ್ಧತೆಗೆ ನಗು ಬಂದಿತ್ತು. ■

---

## ಹೋಲಿಕೆಯ (ಅ)ಸಂತಸ (ಭುವನೇಶ್ವರಿ ಹೆಗಡೆ ಅವರ ಕೈಗುಣ ಬಾಯ್‌ಗುಣ )

ಬೇರೆಯವರನ್ನು ಹೊಗಳಲು ಸಹ ಪುರಾಣದ ಬಳಕೆಯಾಗುತ್ತೆಯಾದರೂ ಕೆಲ ಪಾತ್ರಗಳಿಗೆ ಹೋಲಿಸಿ ಹೊಗಳಿದರೆ ಸಂಬಂಧಪಟ್ಟವರಿಗೆ ಏನೂ ಖುಷಿಯಾಗುವುದಿಲ್ಲ. ಉದಾಹರಣೆಗೆ ಶ್ರೀಮಾನ್ "ಚ" ಅವರು ಧರ್ಮರಾಯನಂಥವರು ಎಂದಾರಾದರೂ ಹೊಗಳಿದರೆ ಶ್ರೀಮತಿ "ಚ" ಅವರಿಗೇನೂ ಖುಷಿಯಿಲ್ಲ. ಯಾಕೆಂದರೆ ಧರ್ಮರಾಯನ ಸತ್ಯನಿಷ್ಠೆ, ಸಹೋದರ ಪ್ರೇಮದಂಥ ಪಾಸಿಟಿವ್ ಗುಣಗಳಿಗಿಂತ ದ್ಯೂತಕ್ಕೆ ಹೆಂಡತಿಯನ್ನೇ ಪಣಕ್ಕಿಟ್ಟ "ಧರ್ಮರಾಯ"ನನ್ನು ಮಾತ್ರ ಅವರು ದ್ವೇಷಿಸುತ್ತಾರೆ. ಹಾಗೆಯೇ ಯಾರಾದರೂ "ನಮ್ಮನೇವ್ರು ಶ್ರೀರಾಮಚಂದ್ರ ಕಣ್ರೀ'' ಅಂದರೆ ಅವರ ಕುಹಕಿ ಗೆಳತಿಯರು "ಹಾಗಾದ್ರೆ ಇನ್ನು ವನವಾಸಕ್ಕೆ ಕರೆದೊಯ್ಯೋದೊಂದು ಬಾಕಿ" ಅಂತ ಅರ್ಥೈಸುತ್ತಾರೆ.